ದುಡಿವ ಜನರ ಪ್ರಾಣಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ

ಸಂಪುಟ 2 ಸಂಚಿಕೆ 5

ಫೆಬ್ರವರಿ 03 2008


ರೂ. 5/-



ಕೋಮುವಾದಕ್ಕೆ ಜನ ಚಳುವಳಿಗಳೇ ಉತ್ತರ



ಉಳ್ಳಾಲ ಗಲಭೆಗಳು : ಚುನಾವಣಾ ರಂಗ ತಾಲೀಮು



ಬಿಲ್ಕಿಸ್ ಬಾನೋ ತೀರ್ಪು : ಮೋದಿ ಕೆನ್ನೆಗೆ ಏಟು



ಲಂಕಾ : ನಿಲ್ಲದ ಕದನ ಇಲ್ಲದ ವಿರಾಮ

ಚುಚ್ಚುಮದ್ದು

ನೀತಿ ಬೇಡ

● ಪ್ರಧಾನಿ ಅಭ್ಯರ್ಥಿ ಯಾರು? ಯುಪಿಎಗೆ ಬಿಜೆಪಿ ಸವಾಲು

- ಸುದ್ದಿ

➤ ನೀತಿಗಳ ಬಗೆಗೆ ಮಾತು ಬಿಟ್ಟು, ವ್ಯಕ್ತಿಗಳ ಬಗೆಗೆ ಮಾತಾಡಿ ಮುಗ್ಧರ ಕಣ್ಣಿಗೆ ಮಣ್ಣೆರೆಚುವುದಲ್ಲವೋ ಇದು?

ಯಾರಿಗಾಗಿ?

● "ಸೇತು ಸಮುದ್ರಂ ಯೋಜನೆಯಿಂದ ನೌಕಾದಳಕ್ಕಾಗಲೀ ಅಥವಾ ಅಂತರರಾಷ್ಟ್ರೀಯ ನೌಕಾಯಾನ ಸಂಸ್ಥೆಗಳಾಗಲೀ ಯಾವುದೇ ಪ್ರಯೋಜನವಿಲ್ಲ, ಆದ್ದರಿಂದ ಈ ಯೋಜನೆಯನ್ನು ತಕ್ಷಣವೇ ಕೈಬಿಡಬೇಕು"

ಸುಬ್ರಮಣಿಯನ್ ಸ್ವಾಮಿ

ಜನತಾಪಕ್ಷದ ಅಧ್ಯಕ್ಷರು

➤ ನೌಕಾದಳಕ್ಕಲ್ಲ ಸ್ವಾಮಿ, ಜನರ ಪ್ರಯೋಜನಕ್ಕಾಗಿ ಈ ಯೋಜನೆ ಬರಬೇಕು

ಹಣೆಬರಹ!!!

● 'ಗೇಣು ಹೊಟ್ಟೆ ತುಂಬಿಸಿಕೊಳ್ಳಲು ದೂರದ ಬಿಹಾರದಿಂದ ಕರಾವಳಿಗೆ ಬಂದವರ ಹಣೆಬರಹದಲ್ಲಿ ಏನು ಬರೆದಿತ್ತೋ ಏನೋ ಅವರೆಲ್ಲ ಸುಟ್ಟು ಕರಕಲಾದ ಹೃದಯ ವಿದ್ರಾವಕ ಘಟನೆ...'

- 'ಪ್ರಜಾವಾಣಿ' ಯಲ್ಲಿ ಮಂಗಳೂರು ಸಮೀಪದ ವಾಹನ ಅಪಘಾತದ ವರದಿಯಲ್ಲಿ.

➤ ಜನರೇ ನಂಬಿಕೆ ಕಳೆದುಕೊಳ್ಳುತ್ತಿರೋ ಹಣೆಬರಹದಲ್ಲಿ ಪತ್ರಿಕೆಗೆ ನಂಬಿಕೆಯೇ?

ಅಲ್ಪ ಅಂದರೆ ಎಷ್ಟು?

● 'ಒಂದು ಪಕ್ಷ ತೈಲ ಬೆಲೆ ಏರಿಸುವ ಅನಿವಾರ್ಯತೆ ಒದಗಿದರೆ ಅಲ್ಪ ಪ್ರಮಾಣದಲ್ಲಿ ಬೆಲೆ ಏರಿಸಲಾಗುವುದು'

ಪಿ.ಚಿದಂಬರಂ

ಕೇಂದ್ರ ಹಣಕಾಸು ಸಚಿವ

➤ ನಿಮ್ಮ ದೃಷ್ಟಿಯಲ್ಲಿ 'ಅಲ್ಪ' ಅಂದರೆ ಎಷ್ಟು?

ನೀವು ಮಾಡಿದಿರಾ

● "ದೇಶದ ಒಟ್ಟು ಜನ ಸಂಖ್ಯೆಯಲ್ಲಿ ಅರ್ಧದಷ್ಟಿರುವ ಮಹಿಳೆಯರಿಗೆ ಶೇ.33 ರಷ್ಟು ಮಹಿಳಾ ಮೀಸಲಾತಿ ಕಲ್ಪಿಸುವಲ್ಲಿ ಕೇಂದ್ರದ ಯುಪಿಎ ಸರ್ಕಾರ ವಿಫಲವಾಗಿದೆ."

- ಕಿರಣ್ ಮಹೇಶ್ವರಿ

ಬಿಜೆಪಿ ಮಹಿಳಾ ಮೋರ್ಚಾ

ರಾಷ್ಟ್ರೀಯ ಅಧ್ಯಕ್ಷೆ

ಎನ್.ಡಿ.ಎ. ಸರ್ಕಾರ ಇದ್ದಾಗಲೂ ಮಹಿಳಾ ಮೀಸಲಾತಿ ತರಲಿಲ್ಲವಲ್ಲ ಮಹೇಶ್ವರಿಯವರೇ?

ಬೆಲೆ ಇಲ್ಲ

● ಕಬ್ಬಿಗೆ ಕನಿಷ್ಠ ಬೆಂಬಲ ಬೆಲೆ ನಿರ್ಧಾರ ಮುಂದಕ್ಕೆ.

- ಸುದ್ದಿ

ಈಗ ಕೊಟ್ಟಿರುವ 'ರೈತರ ಆತ್ಮಹತ್ಯೆ' ಅನ್ನೋ ಬಲಿಗಳು ಸಾಲದೇನೋ ಪಾಪ.

ಇದ್ದದ್ದು ಇದ್ದಾಂಗ...

"ವಿಶ್ವನಾಥ್ ನನ್ನ ಬಗ್ಗೆ ಇನ್ನೊಮ್ಮೆ ಆ ರೀತಿ ಮಾತನಾಡಿದರೆ ಅವರ ನಾಲಿಗೆ ಕಿತ್ತು ಹಾಕುತ್ತೇನೆ"

ಕಾಗೋಡು ತಿಮ್ಮಪ್ಪ ಕಾಂಗ್ರೆಸ್ ಮುಖಂಡ

ಮುಗಿದ ಅಧ್ಯಾಯ

● ನೇತಾಜಿ ಸುಭಾಷ್ ಚಂದ್ರಬೋಸ್ 1945ರ ಆಗಸ್ಟ್ 18ರಂದು ತೈವಾನಿನಲ್ಲಿ ಸಂಭವಿಸಿದ ವಿಮಾನ ಅಪಘಾತದಲ್ಲಿ ಮೃತಪಟ್ಟಿದ್ದಾರೆ.

ನೇತಾಜಿ ಸಾವಿನ ಕುರಿತಂತೆ ಕೇಂದ್ರ ಗೃಹ ಸಚಿವಾಲಯದ ಘೋಷಣೆ.

ಒಪ್ಪಿಲ್ಲ

"ಮಾಧ್ಯಮಗಳಲ್ಲಿ ವರದಿ ಯಾಗಿರುವಂತೆ ಪೆಟ್ರೋಲಿಯಂ ಸಚಿವ ತಮ್ಮನ್ನು ಭೇಟಿ ಮಾಡಿಲ್ಲ ಹಾಗೂ ತೈಲ ಬೆಲೆ ಹೆಚ್ಚಳದ ಬಗೆಗೆ ಯಾವುದೇ ಚರ್ಚೆ ನಡೆಸಿಲ್ಲ, ತೈಲ ಬೆಲೆ ಹೆಚ್ಚಳಕ್ಕೆ ಎಡಪಕ್ಷಗಳು ಒಪ್ಪಿಗೆ ನೀಡಿಲ್ಲ"

ಸೀತಾರಾಮ ಯೆಚೂರಿ, ಸಿಪಿಐ(ಎಂ)


ಪಾಲಿಟ್ ಬ್ಯೂರೋ ಸದಸ್ಯರು,

ಗುರುದಾಸ್ ದಾಸ್ ಗುಪ್ತಾ,

ಸಿಪಿಐ ಮುಖಂಡರು

ನಗರೀಕರಣ ಮತ್ತು ನಗರ ಭೂಮಿಯ ಪ್ರಶ್ನೆ

ಭಾರತದಲ್ಲಿ, ಕರ್ನಾಟಕದಲ್ಲಿ ಆರ್ಥಿಕ ಬೆಳವಣಿಗೆಯ ದರ ಹಿಂದಿನ ಮೂರು ವರ್ಷಗಳಲ್ಲಿ ಏರಿದೆ. ಆದ್ದರಿಂದ ಭಾರತ ಉತ್ತಮ ಪ್ರಗತಿಯನ್ನು ಸಾಧಿಸಿದೆ ಎಂಬ ಅಬ್ಬರದ ಪ್ರಚಾರವು ಹೆಚ್ಚಾಗಿ ನಗರ ಕೇಂದ್ರೀಕೃತವಾದ, ಮೇಲ್ವರ್ಗಗಳ ಬೆಳವಣಿಗೆ ಅವರ ಶ್ರೀಮಂತಿಕೆ



ಮಾಲ್‌ಗಳು

ಬೆಳವಣಿಗೆಯ ಹೆಚ್ಚಳಕ್ಕೆ ಕಾರಣವಾಗಿದೆ. ಕರ್ನಾಟಕದ ವಿಷಯದಲ್ಲಿ ಐ.ಟಿ. ಮತ್ತು ಸಂಬಂಧಿತ ಉತ್ಪಾದನೆಯ ಹೆಚ್ಚಳ, ಸಿದ್ಧ ಉಡುಪು, ಆಟೋ ಬಿಡಿ ಭಾಗಗಳು, ಇತರ ಇಂಜಿನಿಯರಿಂಗ್ ಉತ್ಪಾದನೆಗಳ ಹೆಚ್ಚಳ, ಬೆಂಗಳೂರು ಸುತ್ತ ಮುತ್ತ ಕೇಂದ್ರೀಕೃತಗೊಂಡಿವೆ. 2004 ರಲ್ಲಿ 18,000ಕೋಟಿ ರೂ. ರಫ್ತು ಸಾಧಿಸಿದ್ದು ಐಟಿ ವಲಯ 2007ರ ವೇಳೆಗೆ 55000ಕೋಟಿ ರೂ (ಭಾರತದ ರಫ್ತಿನಲ್ಲಿ ಶೇ 40 ರಷ್ಟು) ಭಾಗ ಹೆಚ್ಚಿಸಿದೆ. 2001 ಜನಗಣತಿಯ ವೇಳೆಗಾಗಲೇ ಶೇ 34 ರಷ್ಟಾಗಿದ್ದ ಕರ್ನಾಟಕದ ನಗರೀಕರಣ ಈ ಮೂರು ವರ್ಷಗಳಲ್ಲಿ ತೀವ್ರ ವೇಗದಲ್ಲಿ ಬೆಳೆದಿದೆ. ಇದು ನಗರ ಪಟ್ಟಣಗಳಲ್ಲಿ ದುಡಿಯುವ ಜನರ ಜೀವನವನ್ನು ಮತ್ತಷ್ಟು ಕಗ್ಗಂಟಾಗಿಸಿದೆ. ವಸತಿ ಹಾಗೂ ನಾಗರೀಕ ಸೌಲಭ್ಯಗಳು ದುಡಿಯುವ ಜನರ ಕೈಗೆ ಎಟುಕದಂತೆ ಮಾಡಿದೆ. ನಗರೀಕರಣದ ಈ ವೇಗ ನಗರಗಳಲ್ಲಿ ಭೂಮಿ ಪ್ರಶ್ನೆ ಇನ್ನಿಲ್ಲದ ತೀವ್ರತೆಯನ್ನು ಪಡೆದುಕೊಳ್ಳುವಂತೆ ಮಾಡಿದೆ.

ಐಟಿ/ಬಿಟಿ ಸಂಬಂಧಿತ ಉದ್ದಿಮೆಗಳ ಈ ಹೆಚ್ಚಳ ಈ ನಗರಗಳಲ್ಲಿ ಅನೇಕ ಬಹುರಾಷ್ಟ್ರೀಯ ಕಂಪನಿಗಳು ತಮ್ಮ ಶಾಖಾ ಕಛೇರಿ, ಪ್ರಧಾನ ಕಛೇರಿಗಳನ್ನು ಭಾರತದಲ್ಲಿ ತೆರೆಯುವಂತೆ ಮಾಡಿವೆ. 2005ರಲ್ಲಿ ಬೆಂಗಳೂರು ಕಛೇರಿಗಳ ಜಾಗಕ್ಕೆ ಅತ್ಯಂತ ಹೆಚ್ಚು ಬೇಡಿಕೆಯಿರುವ ನಗರಗಳಲ್ಲಿ ಪ್ರಪಂಚದಲ್ಲಿಯೇ ಮೂರನೆಯದಾಗಿದೆ. ಲಂಡನ್ ಮತ್ತು ಟೋಕಿಯೋಗಳಿಗಿಂತ ಸ್ವಲ್ಪ ಮಾತ್ರ ಹಿಂದಿದೆ. ಈ ವರ್ಷ ಎರಡನೆಯ ಸ್ಥಾನಕ್ಕೇರಿರಬಹುದೆಂಬ ಅಂದಾಜುಗಳೂ ಇವೆ. ಇಡೀ ಭಾರತದಲ್ಲಿ ಶೇ 60 ರಷ್ಟು ಕಛೇರಿ ಜಾಗ ಬೆಂಗಳೂರು, ಚೆನ್ನೈ, ಹೈದಾರಾಬಾದ್ ನಗರಗಳದ್ದಾದರೆ, ಬೆಂಗಳೂರು ನಗರ 2006 ರಲ್ಲಿ 1.12 ಕೋಟಿ ಚದರ ಅಡಿಗಳ ಜಾಗವನ್ನು ಚೆನ್ನೈ ದೂರದ ಎರಡನೇ ಸ್ಥಾನದಲ್ಲಿ 62.5 ಲಕ್ಷ ಚದರಡಿಗಳು, ಹೈದರಾಬಾದ್ 35 ಲಕ್ಷ ಚದರಡಿಗಳ ಜಾಗವನ್ನು ಕಛೇರಿಗಳಿಗಾಗಿ ಬಳಸಿವೆ. ಬೆಂಗಳೂರಿನ ಕಛೇರಿ ಜಾಗ 2006 ರ ಬೇಡಿಕೆ ದೆಹಲಿ ಹಾಗೂ ಮುಂಬಯಿಗಳ ಒಟ್ಟು ಪ್ರಮಾಣವನ್ನು ಮೀರಿಸಿದೆಯಂತೆ.

ಈ ಉದ್ದಿಮೆಗಳಿಗಾಗಿ ಹಾಗೂ ಪ್ರವಾಸಕ್ಕಾಗಿ ಬರುವವರಿಗಾಗಿ ಹೋಟೆಲ್‌ಗಳು, ರೆಸಾರ್ಟ್‌ಗಳು, ಈ ಉದ್ಯೋಗಿಗಳಿಗಾಗಿ ಬೃಹತ್ ವ್ಯಾಪಕ ಮಾಲ್‌ಗಳು(ಅದಕ್ಕಾಗಿಯೇ ಬೆಂಗಳೂರಿನಲ್ಲಿ 80 ಲಕ್ಷಕ್ಕೂ ಹೆಚ್ಚು ಚದರಡಿ ಜಾಗ) ಮತ್ತು ಮನೆಗಳು, ಅಪಾರ್ಟ್‌ಮೆಂಟ್‌ಗಳು ಮೊದಲದ ಎರಡನೇ ಹಂತದ ನಗರಗಳಲ್ಲಿ, ಈ ನಗರಗಳ ಸುತ್ತಲಿನ ನಗರಗಳಲ್ಲಿ ಭೂಮಿಯ ಬೇಡಿಕೆ ವಿಪರೀತವಾಗಿ ಏರಿದೆ.

ರಾಜಭವನದತ್ತ ವಿದ್ಯಾರ್ಥಿಗಳ ದಂಡು

ಹಾಸ್ಟೆಲ್ ಸಮಸ್ಯೆಗಳನ್ನು ಬಗೆಹರಿಸಲು, ಬೆಲೆ ಏರಿಕೆಗೆ ತಕ್ಕಂತೆ ಆಹಾರ ಭತ್ಯೆ ಹೆಚ್ಚಿಸುವುದು. ಖಾಲಿಯಿರುವ ಶಿಕ್ಷಕ-ಉಪನ್ಯಾಸಕ, ಬೋಧಕೇತರ ಹುದ್ದೆಗಳನ್ನು ಭರ್ತಿ ಮಾಡಿ, ಗ್ರಂಥಾಲಯ-ಪ್ರಯೋಗಾಲಯ-ಕ್ರೀಡಾ, ಶೌಚಾಲಯಗಳನ್ನು ಒದಗಿಸುವುದು. ವಿದ್ಯಾರ್ಥಿ ವೇತನ, ಶುಲ್ಕ ರಿಯಾಯಿತಿ ಹಣ ಬಿಡುಗಡೆ ಮತ್ತು ಹೆಚ್ಚಳ. ಬಡ ಪ್ರತಿಭಾವಂತರಿಗೆ ಎಲ್ಲಾ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಸೀಟುಗಳ ಮೀಸಲಾತಿಗಾಗಿ, ಉನ್ನತ ಶಿಕ್ಷಣದಲ್ಲಿ ಒ.ಬಿ.ಸಿಗಳಿಗೆ ಶೇ.27 ಮೀಸಲಾತಿಗಾಗಿ ಒತ್ತಾಯಿಸಿ. ವಿದೇಶಿ, ಖಾಸಗಿ ವಿ.ವಿ.ಗಳನ್ನು ನಿಯಂತ್ರಿಸಲು, ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ನಿಯಂತ್ರಿಸಲು ಕೇಂದ್ರೀಯ ಶಾಸನ ಜಾರಿಗಾಗಿ. ವಿದ್ಯಾರ್ಥಿ ಶಿಕ್ಷಕರ ಪ್ರಜಾಸತ್ತಾತ್ಮಕ ಹಕ್ಕುಗಳ ರಕ್ಷಣೆಗಾಗಿ ಹಾಗೂ ಮುಂಬರುವ ರಾಜ್ಯ ಬಜೆಟ್‌ನ ಶೇ.30 ಕೇಂದ್ರ ಬಜೆಟ್ ಶೇ.10 ಹಾಗೂ ಒಟ್ಟು ಜಿ.ಡಿ.ಪಿ.ಯ ಶೇ.6ರಷ್ಟು ಹಣವನ್ನು ಶಿಕ್ಷಣಕ್ಕೆ ಮೀಸಲಿಡಬೇಕೆಂದು ಒತ್ತಾಯಿಸಿ ಭಾರತ ವಿದ್ಯಾರ್ಥಿ ಫೆಡರೇಷನ್ ಕರ್ನಾಟಕ ರಾಜ್ಯಸಮಿತಿ ಫೆಬ್ರವರಿ 8, 2008ರಂದು ರಾಜ್‌ಭವನ್ ಚಲೋ ಹಮ್ಮಿಕೊಂಡಿದೆ.

ಬಡ ವಿದ್ಯಾರ್ಥಿ-ಪೋಷಕ ವಿರೋಧಿಯಾಗಿದ್ದ ಕಳೆದ ರಾಜ್ಯಸರ್ಕಾರ, ಮುಖ್ಯವಾಗಿ ದಲಿತ-ಹಿಂದುಳಿದ ಸಮುದಾಯದ ಏಳ್ಗೆ ಸಹಿಸದೆ ಕೋಮುವಾದಿಗಳ ಭಟ್ಟಂಗಿ ಬಿ.ಎಸ್.ಯಡಿಯೂರಪ್ಪ ಹೋದ ಕಡೆಯಲ್ಲೆಲ್ಲ ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದೇವೆಂದು ಜನತೆಗೆ ಹೇಳುತ್ತ ವಂಚಿಸುತ್ತಾ ಸಂಘಪರಿವಾರದ ಹಿತಾಸಕ್ತಿಗೆ ಪೂರಕವಾಗಿ ಮಾತ್ರ ಅಭಿವೃದ್ಧಿಗೆ ಆದ್ಯತೆ ಕೊಟ್ಟು ದುಡಿಯುವ ವರ್ಗದ, ವಿದ್ಯಾರ್ಥಿ ಸಮುದಾಯದ ಭವಿಷ್ಯವನ್ನು ಬೀದಿಪಾಲು ಮಾಡಿದ್ದಾರೆ. ಸರ್ಕಾರಿ ಶಾಲಾ-ಕಾಲೇಜ್ ಹಾಸ್ಟೆಲ್‌ಗಳು ಅವಸಾನದ ಅಂಚಿನಲ್ಲಿವೆ. ಸಮರ್ಪಕವಾಗಿ ಶಿಕ್ಷಕ-ಉಪನ್ಯಾಸಕ-ಬೋಧಕೇತರ, ಕೊಠಡಿ, ಗ್ರಂಥಾಲಯ, ಪ್ರಯೋಗಾಲಯಗಳು ಶೌಚಾಲಯ ಇನ್ನಿತರ ಕನಿಷ್ಠ ಸೌಲಭ್ಯಗಳಿಲ್ಲದೆ ಶೇ.70ಕ್ಕಿಂತ ಹೆಚ್ಚಿನ ವಿದ್ಯಾರ್ಥಿಗಳು ರಾಜ್ಯಾದ್ಯಂತ ಪರಿತಪಿಸುತ್ತಿದ್ದಾರೆ. ಇನ್ನೊಂದೆಡೆ ಸಮಾಜಕಲ್ಯಾಣ ಇಲಾಖೆ ಹಾಗೂ ಹಿಂದುಳಿದ ವರ್ಗಗಳ ಇಲಾಖೆಯ ಹಾಸ್ಟೆಲ್ ವಿದ್ಯಾರ್ಥಿಗಳ ಸ್ಥಿತಿ ಚಿಂತಾಜನಕವಾಗಿವೆ. ಕನಿಷ್ಠಮಟ್ಟದ ಕೊಠಡಿಗಳಿಲ್ಲದೆ, ಇದ್ದರೂ ಸೋರುವ ಸ್ಥಿತಿಯಲ್ಲಿದೆ. ಸೊಳ್ಳೆ-ತಿಗಣೆಗಳ ಕಾಟದಲ್ಲಿ ಅಪೌಷ್ಠಿಕ ಅರೆ ಹೊಟ್ಟೆ ಆಹಾರ ಸೇವಿಸಿ ಅನಾರೋಗ್ಯದಿಂದ ಬಳಲುತ್ತಿದ್ದಾರೆ. ಹಾಸ್ಟೆಲ್‌ಗಳಲ್ಲಿ ಶೈಕ್ಷಣಿಕ ವಾತಾವರಣದ ವಿಚಾರ ಹೇಳತೀರದ್ದಾಗಿದೆ. ಬಡತನದ ಬೇಗೆಯಲ್ಲಿರುವ ವಿದ್ಯಾರ್ಥಿಗಳು ಜೀವನದ ತುರ್ತು ಆಸರೆಗಾಗಿ ವೈದ್ಯಕೀಯ-ಇಂಜಿನಿಯರಿಂಗ್ ಮತ್ತುಎಂ.ಬಿ.ಎ, ಎಂ.ಸಿ.ಎ, ಹೋಟೆಲ್ ಮ್ಯಾನೇಜ್‌ಮೆಂಟ್, ಐಟಿ, ಬಿ.ಟಿ. ಯಂತಹ ಕೋರ್ಸುಗಳಿಗೆ ಲಕ್ಷಾಂತರ ಡೊನೇಷನ್ ಕೊಟ್ಟು ವೃತ್ತಿಪರ ಕೋರ್ಸುಗಳಿಗೆ ಸೇರಲಾಗದೆ ಡಿಎಡ್, ಬಿಎಡ್, ಐಟಿಐ, ಜೆಒಸಿ, ಪಾಲಿಟೆಕ್ನಿಕ್, ನರ್ಸಿಂಗ್ ಮುಂತಾದ ಬಡ ವೃತ್ತಿಪರ ಕೋರ್ಸುಗಳಿಗೆ ಅವಲಂಬಿತರಾಗಿದ್ದಾರೆ. ಇಂತಹ ಬಡ ವಿದ್ಯಾರ್ಥಿಗಳ ಕೋರ್ಸುಗಳನ್ನು ಖಾಸಗೀಕರಿಸುತ್ತಾ, ಶುಲ್ಕಗಳನ್ನು ಪ್ರತಿ ವರ್ಷ ಏರಿಸಲಾಗುತ್ತದೆ.

ಫೆಬ್ರವರಿ 1, 2008 ಬೇಡಿಕೆ ದಿನ

ಜಿಲ್ಲಾ ತಾಲ್ಲೂಕು ಮಟ್ಟದಲ್ಲಿ ಹಾಸ್ಟೆಲ್ ಇನ್ನಿತರ ಶೈಕ್ಷಣಿಕ ಸಮಸ್ಯೆಗಳನ್ನು ಬಗೆಹರಿಸಲು ಒತ್ತಾಯಿಸಿ ರಾಜ್ಯಾದ್ಯಂತ ಜಿಲ್ಲಾ-ತಾಲ್ಲೂಕು ಕೇಂದ್ರಗಳಲ್ಲಿ ಫೆಬ್ರವರಿ 1ರಂದು "ಶೈಕ್ಷಣಿಕ ಬೇಡಿಕೆ ದಿನ" ವನ್ನಾಗಿ ಎಸ್‌ಎಫ್‌ಐ ರಾಜ್ಯಸಮಿತಿ ಆಚರಿಸುತ್ತಿದೆ. ಎಸ್‌ಎಫ್‌ಐನ ಎಲ್ಲಾ ಜಿಲ್ಲಾ-ತಾಲ್ಲೂಕು ಸಮಿತಿಗಳು ಶೈಕ್ಷಣಿಕ ಸಮಸ್ಯೆಗಳ ಪರಿಹಾರಕ್ಕಾಗಿ ಬೇಡಿಕೆ ಪಟ್ಟಿಯನ್ನು ಜಿಲ್ಲಾಧಿಕಾರಿಗಳಿಗೆ ಹಾಗೂ ತಾಲ್ಲೂಕು ತಹಶೀಲ್ದಾರ್‌ರವರಿಗೆ ಕೊಡಲಿದ್ದಾರೆ. ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಸ್ಪಂದಿಸದಿದ್ದಲ್ಲಿ ಹಾಗೂ ರಾಜ್ಯ-ಕೇಂದ್ರ ಸರ್ಕಾರಗಳು ಶಿಕ್ಷಣ ಕ್ಷೇತ್ರಕ್ಕೆ ಅಗತ್ಯ ಹಣಕಾಸು ಒದಗಿಸದಿದ್ದಲ್ಲಿ ಫೆಬ್ರವರಿ 8, 2008 ರಾಜ್‌ಭವನ್ ಚಲೋ ನಡೆಸಿದ ನಂತರದಲ್ಲಿ ಕೇಂದ್ರ ಸರ್ಕಾರಕ್ಕೆ ಒತ್ತಡ ಹೇರಲು ಪಾರ್ಲಿಮೆಂಟ್ ಚಲೋ ಕಾರ್ಯಕ್ರಮವನ್ನು ಫೆ-20ರಂದು ನಡೆಸಲು ಅಖಿಲ ಭಾರತದ ಮಟ್ಟದಲ್ಲಿ ಎಸ್‌ಎಫ್‌ಐ ತೀರ್ಮಾನಿಸಿದೆ.

ಸಂಪಾದಕೀಯ

ಡೋಂಗಿ ಕಸರತ್ತು

ಅಧಿಕಾರದ ಗದ್ದುಗೆ ಹಿಡಿಯಲು ಯಡಿಯೂರಪ್ಪನವರ ಬಗೆಗಿನ ಅನುಕಂಪವನ್ನೇ ಲಂಬಿಸುತ್ತಾ ಹೋಗುವುದು ಅಸಾಧ್ಯವೆಂದು ಭಾವಿಸಿರುವ ಬಿಜೆಪಿಯು ಹಲವಾರು ಕಸರತ್ತುಗಳಿಗೆ ಇಳಿದಿದೆ. ಆರಂಭದಲ್ಲಿ ಯಡಿಯೂರಪ್ಪ ಪ್ರಶ್ನಾತೀತ ನಾಯಕನೆಂದು ಬಿಂಬಿಸುತ್ತಿರುವಾಗಲೇ ಹಿಂದಿನಿಂದಲೇ ಇದ್ದ ಗುಂಪುಗಾರಿಕೆ ಸ್ಫೋಟಗೊಂಡಿತು. ತ್ಯಾಪೆ ಹಚ್ಚುವ ಪ್ರಯತ್ನಗಳನ್ನು ಕೇಂದ್ರ ನಾಯಕತ್ವ ಪ್ರಯತ್ನ ನಡೆಸಿದರೂ ಅದು ಇಂದು ಬೂದಿ ಮುಚ್ಚಿದ ಕೆಂಡವಾಗಿದೆ. ಅಂತಹ ವರಸೆಗಳು ಜನರನ್ನು ಹಿಡಿದಿಟ್ಟುಕೊಳ್ಳಲು ವಿಫಲವಾಗಿದೆ ಎಂದಾಗ ಬಿಜೆಪಿ ರಾಜ್ಯಪಾಲರ ಆಡಳಿತದ ವಿರುದ್ಧ ರಾಜ್ಯಾದ್ಯಂತ ಪ್ರತಿಭಟನೆ ನಡೆಸಿದ್ದು, ರೈಲ್ವೆ ನೇಮಕಾತಿಯ ಹೋರಾಟ ಬೆಂಬಲಿಸುತ್ತಿರುವುದು ಯುಪಿಎ ಹಾಗೂ ಕಾಂಗ್ರೆಸ್ ಪಕ್ಷದ ವಿರುದ್ಧ ಜನರ ಮನೋಭಾವನೆಗಳನ್ನು ಜೀವಂತವಾಗಿಡುವ ಪ್ರಯತ್ನವಾಗಿದೆ. ಅದು ಎತ್ತಿದ ಪ್ರಶ್ನೆಗಳು, ಅಕ್ರಮ-ಸಕ್ರಮದಂತಹ ಕಾಯ್ದೆಯನ್ನು ಅಧಿಕಾರದಲ್ಲಿದ್ದಾಗ ತಾನೇ ಅಂಗೀಕರಿಸಿ ಈಗ ವಿರೋಧಿಸುತ್ತಿರುವುದು, ಕಬ್ಬು ಬೆಳೆದ ರೈತರ ಸಮಸ್ಯೆ ಪರಿಹರಿಸದೇ ಕಾಲಹರಣ ಮಾಡಿದಂತಹ ವಿಷಯ ಅದರ ಡೊಂಗಿತನಕ್ಕೆ ನಿದರ್ಶನ.


'ತಾವು ಪ್ರಧಾನಿ ಹುದ್ದೆಗೆ ರಾಜೀನಾಮೆ ಕೊಟ್ಟ ದಿನಂದಂದು ಪಟಾಕಿ ಸಿಡಿಸಿ, ಸಿಹಿ ಹಂಚಿದ್ದನ್ನು ನೆನಪಿಸಿಕೊಂಡ ದೇವೇಗೌಡರು ಕರ್ನಾಟಕದಲ್ಲಿ ಹುಟ್ಟಬಾರದಿತ್ತೇನೋ' ಎಂದು ಹೇಳಿದ್ದನ್ನೇ ಬಹು ದೊಡ್ಡ ಪ್ರಶ್ನೆಯೆಂಬಂತೆ ಬೆಳೆಸಿದ ಬಿಜೆಪಿ ಯಾವುದನ್ನು ಬಿಡದೇ, ತನಗೆ ಬೇಕಾದಂತೆ ತಿರುಗಿಸಿ ಬಳಸಲು ಉತ್ಸುಕವಾಗಿರುವುದನ್ನು ತೋರಿಸುತ್ತದೆ. ಅಂದರೆ ಬಿಜೆಪಿ ಜನರ ಪ್ರಶ್ನೆಗಳಲ್ಲದ ಪ್ರಶ್ನೆಗಳನ್ನೇ ದೊಡ್ಡದು ಮಾಡಿ ಗುಲ್ಲೆಬ್ಬಿಸಿ ಕಾಲು ಹಾಕಲು ಬಯಸುತ್ತದೆ.

ಹೀಗಿರುವಾಗಲೇ ಸಂಘ ಪರಿವಾರವು, ಶಂಕರ ಭಾಗವತ್ಪಾದರ 'ಸೌಂದರ್ಯ ಲಹರಿ' ಪಠಣಗಳನ್ನು ರಾಜ್ಯದಲ್ಲಿ ಸಂಘಟಿಸುತ್ತಿದೆ ಇದರಲ್ಲಿ ಧಾರ್ಮಿಕ ಉದ್ದೇಶವಿರದೇ ಅಲ್ಲೆಲ್ಲಾ 'ಹಿಂದುತ್ವ' ದ ಭೋದನೆಯ ಮೂಲಕ ಮಹಿಳೆಯರನ್ನು ತನ್ನ ಅಜೆಂಡಾಕ್ಕೆ ಸೆಳೆಯಲು ಪ್ರಯತ್ನಿಸುತ್ತಿದೆ. ಕೇಂದ್ರದಲ್ಲಿ ಅಧಿಕಾರದಲ್ಲಿರುವಾಗ ಕುಂಟು ನೆಪ ಹೇಳಿ ಮಸೂದೆ ಅಂಗೀಕರಿಸದಂತೆ ನೋಡಿಕೊಂಡಿದ್ದ ಬಿಜೆಪಿಯು ಶಾಸನ ಸಭೆಗಳಲ್ಲಿ ಶೇ.33 ರ ಮೀಸಲಾತಿಗಾಗಿ ಇತ್ತೀಚೆಗೆ ರಾಜ್ಯದಲ್ಲಿ ಪ್ರತಿಭಟಿಸಿದ್ದು ಅದರ ವಂಚಕತನದ ಪ್ರತೀಕವಾಗಿದೆ.

ರಾಜ್ಯದಲ್ಲಿ ಕೃಷಿ ಬಿಕ್ಕಟ್ಟು ಉಲ್ಬಣವಾಗಿದೆ. ವಸತಿ ರೇಷನ್ ಪ್ರಶ್ನೆ ಇತ್ಯರ್ಥಗೊಂಡೇ ಇಲ್ಲ. ಬೆಲೆಯೇರಿಕೆ ಬಿಸಿ ಆದರೆ ಇವು ಬಿಜೆಪಿಗೆ ಪ್ರಶ್ನೆಗಳೇ ಅಲ್ಲ. ಕೋಮುವಾದದ ಗುರಾಣಿಯಿಂದ ಜನಪೀಡಕ ಆರ್ಥಿಕ ನೀತಿಗಳನ್ನು ಬಿಜೆಪಿ ರಕ್ಷಿಸುತ್ತಿದೆ. ಇನ್ನೊಂದೆಡೆ ಇತ್ತೀಚೆಗೆ ಉಳ್ಳಾಲದಲ್ಲಿ ಸಂಭವಿಸಿದ ಗಲಭೆಗಳು ಗಂಭೀರ ಪರಿಣಾಮ ಬೀರುವಂತಹದ್ದಾಗಿದೆ. ಕೋಮುದ್ವೇಷ ಬೆಳಸಿ ಜನರನ್ನು ವಿಭಜಿಸದೇ ಮುಂಬರುವ ಚುನಾವಣೆಯಲ್ಲಿ ಗೆಲ್ಲಲು ಆಗಲಾರದು ಎಂಬ ಹತಾಶೆಯ ಪ್ರಯತ್ನ ಇದಾಗಿದೆ. ಹೀಗೆಯೇ ಆಯ್ದ ಇತರೆ ಕ್ಷೇತ್ರಗಳಲ್ಲಿಯೂ ತನ್ನ ಕಾರ್ಯಾಚರಣೆಗೆ ಇಳಿಯಲು ಅದು ಸಿದ್ಧವಾಗಿದೆ ಎಂಬುದನ್ನು ಅರಿಯಬೇಕಾಗಿದೆ.

ಗುಜರಾತ್ ಚುನಾವಣೆ ಫಲಿತಾಂಶಗಳ ಬಗ್ಗೆ ವಿಮರ್ಶಿಸಿರುವ ಬಿಜೆಪಿ ಕೇಂದ್ರ ಕಾರ್ಯಕಾರಿಣಿಯು ಅಭಿವೃದ್ಧಿ ಹಾಗೂ 'ಹಿಂದುತ್ವ'ವೇ ಗೆಲುವಿನ ಗುಟ್ಟು ಎಂದದ್ದು ಅದನ್ನೇ ದೇಶದಾದ್ಯಂತ ಮಾದರಿಯನ್ನಾಗಿ ಪಾಲಿಸಲಾಗುವುದು ಎಂದಿರುವುದು ಕರ್ನಾಟಕ ವಿಷಯದಲ್ಲಿಯೂ ಮುಂಬರುವ ದಿನಗಳಲ್ಲಿ ಬಿಜೆಪಿಯ ಕಾರ್ಯತಂತ್ರವನ್ನು ಮತ್ತೇ ಬಹಿರಂಗಗೊಳಿಸಿದೆ. ಇದು ಎಚ್ಚರಿಕೆಯ ಗಂಟೆಯೂ ಹೌದು. ಈ ಸನ್ನಿವೇಶದಲ್ಲಿ ಇಂತಹ ಹುನ್ನಾರಗಳನ್ನು ವಿಫಲಗೊಳಿಸಲು ಎಡ, ಪ್ರಜಾಸತ್ತಾತ್ಮಕ, ಜಾತ್ಯಾತೀತ ಶಕ್ತಿಗಳು, ಜನರ ನಡುವೆ ಕಾರ್ಯಪ್ರವೃತ್ತರಾಗಬೇಕು.

ಅಸಮಾನತೆ ಸೃಷ್ಟಿಸಿದವರ 'ಅಭಿವೃದ್ಧಿ' ಯೋಜನೆಗಳು !



ಕರ್ನಾಟಕದ ಹಲವಾರು ಪ್ರದೇಶಗಳು ಈಗಲೂ ಹಿಂದುಳಿದಿವೆ ಎಂಬ ಸಂಗತಿಯು ಸರ್ಕಾರಕ್ಕೆ ಆಗಾಗ ನೆನಪಾಗುತ್ತದೆ. ಅಭಿವೃದ್ಧಿಯ ನೆಪವೋ ಓಟುಗಳ ಜಪವೋ ಇಂತಹ ನೆನಪುಗಳಿಗೆ ಒತ್ತಾಸೆ ಇರುವ ಸಂದರ್ಭಗಳೇ ಹೆಚ್ಚು. ಇದಕ್ಕಾಗಿ ಡಾ: ಡಿ.ಎಂ.ನಂಜುಂಡಪ್ಪನವರ ಪ್ರಾದೇಶಿಕ ಅಸಮಾನತೆಯ ಕುರಿತ ವರಧಿಯ ತಿರುಳನ್ನು ಬಿಟ್ಟು ಕರಟ ಆಧರಿಸುವುದು ಗಮನಿಸಬೇಕಾದ ಅಂಶವಾಗಿದೆ.

ಆರ್ಥಿಕ ಪ್ರಪಾತ :

ಎಷ್ಟೆಲ್ಲಾ ಅಭಿವೃದ್ಧಿಯ ನಾಗಾಲೋಟದ ಬಗ್ಗೆ ಡಂಗುರ ಹೊಡೆಯುವ ಸರ್ಕಾರ ಉತ್ತರ ಕರ್ನಾಟಕದ ಪ್ರದೇಶ ಹಿಂದುಳಿದಿದ್ದು ಅದರ ನಿವಾರಣೆಗೆ ತಾನೊಂದು ಉಪಾಯ ಹೊಂದಿರುವುದನ್ನು ಈಗ ಪ್ರಕಟಿಸಿದೆ. ಈ ಪ್ರದೇಶದ ಅಭಿವೃದ್ಧಿಗೆಂದು 'ಏಷಿಯನ್ ಅಭಿವೃದ್ಧಿ ಬ್ಯಾಂಕ್' (ಎ.ಡಿ.ಬಿ)ನಿಂದ ಸುಮಾರು 440 ದಶಲಕ್ಷ ಅಮೇರಿಕನ್ ಡಾಲರ್‌ಗಳ (2200 ಕೋಟಿಯಷ್ಟು) ನೆರವನ್ನು ಪಡೆದು ಉತ್ತರ ಕರ್ನಾಟಕದ ಜಿಲ್ಲೆಗಳು ಹಾಗೂ ಚಾಮರಾಜನಗರ ಜಿಲ್ಲೆಗಳನ್ನು ಅಭಿವೃದ್ಧಿಪಡಿಸಲು ಯೋಜನೆಯನ್ನು ಸಿದ್ಧಪಡಿಸಿದೆಯಂತೆ ಈ ಪಟ್ಟಣ ಪ್ರದೇಶಗಳ ಕುಡಿಯುವ ನೀರು, ಚರಂಡಿ ನಿರ್ಮಾಣ, ರಸ್ತೆ, ಅಗ್ನಿಶಾಮಕ ದಳ ಸ್ಥಾಪನೆ, ಕೆರೆ ಅಭಿವೃದ್ಧಿ ಮುಂತಾದವು ಸೇರಿದೆ.

ಎ.ಡಿ.ಬಿ. ನೀಡುವ ಹಣ ಸಹಾಯಧನವಲ್ಲ, ಅದು ಸಾಲ. ವಿದೇಶಿ ಹಣಕಾಸು ಸಂಸ್ಥೆಗಳು, ಬ.ಕಂ.ಗಳ ಹೂಡಿಕೆಯೇ ದೇಶವನ್ನು ಅಭಿವೃದ್ಧಿಯತ್ತ ಕೊಂಡೊಯ್ಯಲಿದೆ ಎಂಬ ಜಾಗತೀಕರಣದ ಅಧ್ಯಯನಗಳ ಮಂತ್ರವೇ ಇಂತಹ 'ಪ್ರೇರಣೆ' ಗಳಿಗೆ ಮೂಲ. ಈಗಾಗಲೇ ವಿಶ್ವಬ್ಯಾಂಕ್, ಅಂತರಾಷ್ಟ್ರೀಯ ಹಣಕಾಸು ಸಂಸ್ಥೆ, ಎ.ಡಿ.ಬಿ.ಯಂತಹ ಸಂಸ್ಥೆಗಳಿಂದ ತಂದ ಸಾಲಕ್ಕೆ ಬಡ್ಡಿ ಕಟ್ಟುತ್ತಾ ನಮ್ಮ ಆರ್ಥಿಕತೆ ಪ್ರಪಾತಕ್ಕೆ ಬೀಳುತ್ತಿರುವುದು ನಿಚ್ಚಳ ಸಂಗತಿ.

ಅಂದರೆ ಕರ್ನಾಟಕ ಸರ್ಕಾರವೇ ಸುಮಾರು 87,000 ಕೋಟಿ ರೂಪಾಯಿಗಳ ಇಂತಹ ಸಾಲ ಹೊಂದಿದ್ದು, ಸಾಲವನ್ನು ತೀರಿಸಲು ಜನರ ಮೇಲೆ ವಿಪರೀತ ತೆರಿಗೆ ಹೇರುವುದು,ಸಾಲ ತೀರಿಸಲು ಮತ್ತೆ ಸಾಲ ಮಾಡುವಂತಹ 'ಸಾಲದ ಕೂಪ'ದೊಳಗೆ ಕರ್ನಾಟಕ(ದೇಶವೂ) ಬಿದ್ದಿದೆ. ಹೊರಗೆ ಥಳಥಳಿಸುವ ಬೆಳುಕು, ಬಣ್ಣಬೆಡಗು, ಹೈಟೆಕ್‌ಗಳ ಆರ್ಭಟ, ಅಭಿವೃದ್ಧಿಯ ಚೀರಾಟ ಕೊಳೆಯುತ್ತಿರುವ ಹಂದರದ ಮೇಲೆ ಕಟ್ಟಿದ 'ವಿಕಾಸ' ಸೌಧ! ಈಗ ಕಾಣುತ್ತಿರುವುದು ಕರ್ನಾಟಕ ಆಗಲೇ ಸಾಲದ ಕೂಪಕ್ಕೆ ಬಿದ್ದಿರುವುದನ್ನು ಡಾ:ಡಿ.ಎಂ.ನಂಜುಂಡಪ್ಪನವರು ಅವರ ಬೃಹತ್ ವರದಿಯಲ್ಲಿ ಪ್ರಸ್ತಾಪಿಸಿದ್ದರು. ಸರ್ಕಾರ ಮತ್ತೆ ವಿದೇಶಿ ಸಂಸ್ಥೆಗಳ ಸಾಲಕ್ಕೆ ಕೈಚಾಚಿ ನಂಜುಂಡಪ್ಪನವರಿಗೆ 'ಗೌರವ'ವನ್ನು ಸಲ್ಲಿಸುತ್ತಿದೆ!

ಸುಲಿಗೆ ಶುಲ್ಕಗಳು

ಸರ್ಕಾರ ತರುವ ಇಂತಹ ಸಾಲ, ಅಭಿವೃದ್ಧಿ ಯೋಜನೆಗಳು ಅಂತಿಮವಾಗಿ ಏನು ಪರಿಣಾಮ ಬೀರಲಿದೆ? ಎ.ಡಿ.ಬಿ. ಯಂತಹ ಸಂಸ್ಥೆಗಳು ತಾನು ನೀಡಿದ ಸಾಲ ಹಿಂತಿರುಗಿಸಲು 30-40 ವರುಷಗಳ ಗಡುವು ನೀಡಿದ್ದರೂ ಶೇ.7 ಮತ್ತು ಅದಕ್ಕಿಂತ ಹೆಚ್ಚಿನ ಬಡ್ಡಿಯನ್ನು ವಿಧಿಸುತ್ತವೆ. ಇಂತಹ ಬಡ್ಡಿ ಮತ್ತು ಸಾಲದ ಪಾವತಿಯನ್ನು ನಿಯತಕಾಲಿಕವಾಗಿ ಪಾವತಿಸಲು ದ್ಬಾಯಿಸುತ್ತವೆ. ಮಾತ್ರವಲ್ಲ ಈ 'ಸಂಪನ್ಮೂಲ' ವನ್ನು ಜನರ ಮೇಲೆ ಹೆಚ್ಚಿನ ತೆರಿಗೆ ಹಾಕಿ ವಸೂಲಿ ಮಾಡಿ ಸಂದಾಯಿಸಲು ಸೂಚಿಸುತ್ತದೆ. ಅದಕ್ಕಾಗಿ ಕುಡಿಯುವ ನೀರು, ರಸ್ತೆ, ಚರಂಡಿ ಇತ್ಯಾದಿಗಳ 'ಸೇವಾ ಸೌಲಭ್ಯ' ಪಡೆಯುವವರು ಹೆಚ್ಚಿನ ಶುಲ್ಕ, ತೆರಿಗೆಗಳನ್ನು ನೀಡುವಂತೆ ನಿರ್ದೇಶಿಸುತ್ತವೆ. ಇಂತಹದ್ದನ್ನು ಮಾಡಲು ಸರ್ಕಾರ ಅಸಮರ್ಥವೆಂದೂ ನಾಗರೀಕ ಜವಾಬ್ದಾರಿಯ ಸೇವಾ ಕ್ಷೇತ್ರಗಳನ್ನು ಸರ್ಕಾರದ ಕೈಯಿಂದ ಕಿತ್ತು ಖಾಸಗಿ ಕಂಪನಿಗಳಿಗೆ ವಹಿಸಬೇಕೆಂದು ಷರತ್ತು ವಿಧಿಸುತ್ತವೆ. ಹೀಗಾಗಿಯೇ ಬೆಂಗಳೂರು ನೀರು ಸರಬರಾಜು-ಚರಂಡಿ ಇತ್ಯಾದಿ ವ್ಯವಸ್ಥೆಯನ್ನು ಜಪಾನ್ ಕಂಪನಿಗೆ, ಗುಲ್ಬರ್ಗಾದ್ದನ್ನು ಎಲ್ ಅಂಡ್ ಟಿ ಗೆ, ಹುಬ್ಬಳ್ಳಿ-ಧಾರವಾಡದಂತಹ ಇತರ ಮಹಾನಗರ ಪಾಲಿಕೆಯ ವ್ಯವಸ್ಥೆಯನ್ನು ಇನ್ನೊಬ್ಬರಿಗೆ ವಹಿಸುವ ದಿಕ್ಕಿನಲ್ಲಿ ಹೆಜ್ಜೆ ಇಟ್ಟಿರುವುದು ಜ್ವಲಂತ ಸಾಕ್ಷಿಗಳಾಗಿವೆ. ಸೌಲಭ್ಯಬೇಕೆಂದರೆ, ವಿಧಿಸಿದ ಶುಲ್ಕ ತೆರಬೇಕು ಇಲ್ಲವಾದರೆ ನೀರು, ವಿದ್ಯುತ್‌ನಂತಹ ಸೌಲಭ್ಯ ಇಲ್ಲದೇ ನರಳಬೇಕು.

ಹೀಗಾಗಿ ಎಡಿಬಿಯ 2200 ಕೋಟಿ ರೂಪಾಯಿಗಳನ್ನು ಪಟ್ಟಣಗಳ ಅಭಿವೃದ್ಧಿಗೆಂದು ನೀಡುವುದು ಜನತೆಗೆ ಸೌಲಭ್ಯ ಕಲ್ಪಿಸುವ ಯೋಜನೆ ಎಂಬುದಕ್ಕಿಂತ ಅದು ವಾಣಿಜ್ಯ-ವ್ಯವಹಾರ-ಲಾಭ-ನಷ್ಟಗಳ ಲೆಕ್ಕಚಾರವೇ ಆಗಿದೆ ಮತ್ತು ನಾಗರೀಕ ಜೀವನ, ಆಡಳಿತದಲ್ಲಿ ವಿದೇಶಿ ಹಣಕಾಸು ಸಂಸ್ಥೆಗಳ ನೇರ ಮಧ್ಯಪ್ರವೇಶ, ನಿಯಂತ್ರಣ-ನಿರ್ದೇಶನಗಳಿಗೆ ಅವಕಾಶ ಕಲ್ಪಿಸಿದೆ. ಈಗಾಗಲೇ ಸರ್ಕಾರದ, ಸ್ಥಳೀಯ ಸಂಸ್ಥೆಗಳ ಆಡಳಿತ ವಿಧಿಸಿದ ತೆರಿಗೆಗಳು ದುಬಾರಿಯಾಗಿ, ತತ್ತರಿಸುತ್ತಿರುವಾಗ ಇಂತಹ ಸುಲಿಗೆ ಜನರನ್ನು ಇನ್ನಷ್ಟು ಸಂಕಷ್ಟಕ್ಕೆ ದೂಡಲಿದೆ. ಆದಾಯ ಗಳಿಕೆಗೇ ಮಿತಿಯಿರುವಾಗಲೇ ಅದರ ಅರ್ಧಕ್ಕಿಂತ ಹೆಚ್ಚಿನ ಭಾಗವನ್ನು ಈ ಸೌಲಭ್ಯಗಳಿಗೆ ಶುಲ್ಕ ನೀಡಿ ಬರಿಗೈಯಾಗಬೇಕಾಗುತ್ತದೆ.ಅಂದರೆ ಸರ್ಕಾರ ಹಿಂದುಳಿದ ಪ್ರದೇಶಗಳ ಜನರನ್ನು ಪಾರು ಮಾಡದೆ ಕಷ್ಟಗಳ 'ಕುತ್ತಿನತ್ತ ' ಜನಸಾಮಾನ್ಯ ಕಾರ್ಮಿಕರು-ಕೂಲಿಕಾರರು ಸಾಮಾನ್ಯ ನಾಗರೀಕರನ್ನು ಕತ್ತು ಹಿಡಿದು ತಳ್ಳುತ್ತಿದೆ. ಸ್ಥಳೀಯ ಸಂಸ್ಥೆಗಳಿಗೆ ಸಾಲ ನೀಡುವ ಮೂಲಕವೂ ಅವುಗಳನ್ನು ಜನವಿರೋಧಿಯಾಗಿ ಮಾರ್ಪಡಿಸುತ್ತದೆ.

ಬೂಟಾಟಿಕೆ ಬಯಲು

ಸರ್ಕಾರವು ಬಾಯಲ್ಲಿ ಅಭಿವೃದ್ಧಿ-ಪ್ರಾದೇಶಿಕ ಅಸಮಾನತೆ ನಿವಾರಿಸುವುದಾಗಿ ಹೇಳುತ್ತಿದ್ದರೂ ಅಂತಹ ಯಾವುದೇ ಲವಲೇಶದ ಪ್ರಯತ್ನವೂ ಇಲ್ಲಿ ಕಾಣುವುದಿಲ್ಲ. ಪ್ರಾದೇಶಿಕ ಅಸಮಾನತೆ ನಿವಾರಣೆಗೆ ನಿಜಕ್ಕೂ ಕಾಳಜಿ-ಬದ್ಧತೆ ಇದ್ದರೆ ಭೂಮಿ ಹಂಚಿಕೆ, ಉದ್ಯೋಗ ಸೃಷ್ಟಿಯ ಆಧಾರಿತ ಕೈಗಾರಿಕೆಗಳನ್ನು ಪ್ರಾರಂಭಿಸಬೇಕು, ಶಿಕ್ಷಣಕ್ಕೆ ಆದ್ಯತೆ ನೀಡಬೇಕು. ಹೈದ್ರಾಬಾದ್ ಕರ್ನಾಟಕದಲ್ಲಿ ಸುಮಾರು 40ರಷ್ಟು ಜನರಿಗೆ ಒಂದು ತುಂಡು ಭೂಮಿಯೂ ಇಲ್ಲ. ಬಹುತೇಕ ಜನರು ಕೃಷಿಕೂಲಿಕಾರರು, ದಲಿತರೇ ಆಗಿದ್ದಾರೆ. ಆರ್ಥಿಕವಾಗಿ ಸಾಮಾಜಿಕವಾಗಿ ಇಂದಿನ ಸಂದರ್ಭವನ್ನು ಮೂಲಭೂತ ನೆಲೆಯಲ್ಲಿ ಬದಲಾಯಿಸದೇ ಅಸಮಾನತೆ ನಿವಾರಿಸುವುದು ಅಸಾಧ್ಯ. ಇಂತಹ ಪ್ರಾದೇಶಿಕ ಅಸಮಾನತೆ ಭೂಮಾಲೀಕರ-ಬಂಡವಾಳಶಾಹಿ 'ಅಭಿವೃದ್ಧಿ' ಪಥದ 'ಮಹಾನ್ ಕೊಡುಗೆ' ಯಾಗಿದೆ. ಅಂತಹ ನೀತಿಗಳನ್ನೇ ಅನುಸರಿಸುವ ಸರ್ಕಾರ ಪ್ರಾದೇಶಿಕ ಅಸಮಾನತೆ ನಿವಾರಿಸುತ್ತೇನೆಂಬುದು ಕೇವಲ ಬೂಟಾಟಿಕೆ ಮಾತ್ರ.

ಆದ್ದರಿಂದಲೇ ಅಭಿವೃದ್ಧಿ-ನಾಗರೀಕ ಸೇವಾ ಸೌಕರ್ಯ ನೀಡಲು ಆಂತರಿಕ ಸಂಪನ್ಮೂಲಗಳ ಕ್ರೋಢೀಕರಣಕ್ಕೆ ಕ್ರಮ ವಹಿಸುವುದೇ ಇಲ್ಲ. ಈಗಲೂ ಸರ್ಕಾರದ ಬಜೆಟ್‌ನಲ್ಲಿ ಹಣವಿದೆ. ಗ್ರಾಮಾಂತರ ಪ್ರದೇಶವನ್ನು ಒಳಗೊಂಡು ನಗರದಲ್ಲಿರುವ ಹಣವಂತರಿಂದ ತೆರಿಗೆ ಸಂಗ್ರಹಿಸುವುದು, ಬೆಂಗಳೂರಿನ ಭಾರೀ ಶ್ರೀಮಂತರಿಗೆ, ಉದ್ಯಮಿಗಳಿಗೆ ತೆರಿಗೆ ಮುಕ್ತಗೊಳಿಸಿ ರುವುದನ್ನು ತಡೆದು ತೆರಿಗೆಯ ವ್ಯಾಪ್ತಿಗೆ ತಂದು ಕಟ್ಟುನಿಟ್ಟಾಗಿ ವಸೂಲು ಮಾಡಬೇಕು. ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಬೇಕು, ಗಣಿಗಾರಿಕೆಗೆ ಹೆಚ್ಚಿನ ರಾಜ ಧನ ನಿಗದಿಗೊಳಿಸಬೇಕು. ಇಂತಹ ಹಲವು ಕ್ರಮ ಕೈಗೊಂಡಲ್ಲಿ ಅಪಾರ ಪ್ರಮಾಣದ ಹಣ ಸಂಗ್ರಹ ಸಾಧ್ಯ. ಆದರೆ ಇವಾವುಗಳನ್ನು ಮಾಡದೇ ಈ ವರ್ಗಗಳ ಅಭಿವೃದ್ಧಿಗೆ ಜನರನ್ನೇ ಸುಲಿಯುವ ನೀತಿಗಳು ಪ್ರಾದೇಶಿಕ ಅಸಮಾನತೆ ನಿವಾರಿಸುವುದಿಲ್ಲ. ಜನಪರ ಅಭಿವೃದ್ಧಿ ಸಾಧಿಸುವುದೂ ಸಾಧ್ಯವಿಲ್ಲ.

ಅಭಿವೃದ್ಧಿ ಹೊಂದಿರುವ ಅತಿ ಶ್ರೀಮಂತ ಹಣಕಾಸು ಬಂಡವಾಳಗಾರ ರಾಷ್ಟ್ರಗಳಿಗೆ ಇಂದು ಪ್ರವಾಹೋಪಾದಿಯಲ್ಲಿ ಹರಿದು ಹೋಗುತ್ತಿರುವ ಕೋಟ್ಯಾಂತರ ಕೋಟಿ ರೂಪಾಯಿಗಳು ಸೂರೆಗೊಳ್ಳುತ್ತಿರುವುದೇ ಭಾರತದಂತಹ ಅಭಿವೃದ್ಧಿಶೀಲ ರಾಷ್ಟ್ರಗಳಿಂದ, ಇದಕ್ಕೆ ಮಣೆ ಹಾಕಿ, ತನಗೂ ಒಂದು ಪಾಲಿರಲಿ ಎನ್ನುವ ಆಳುವವರಿಂದ ಪ್ರಾದೇಶಿಕ ಅಸಮಾನತೆ ನಿವಾರಣೆಯಾಗುವುದಾದರೂ ಹೇಗೆ?

ಆದ್ದರಿಂದ ಜನರನ್ನು ದೋಚುವ ನೀತಿಗಳನ್ನು ಸರ್ಕಾರ ಕೈಬಿಡಲೇಬೇಕು. ನಾಗರೀಕ ಸೌಕರ್ಯ ಕಲ್ಪಿಸುವಾಗಲೇ ಜನತೆಯ ಆದಾಯ-ಜೀವನಮಟ್ಟ ಮೂಲಭೂತ ವಾಗಿ ಬದಲಾಯಿಸುವಂತಹ ಕ್ರಮಗಳಿಗೆ ಮುಂದಾಗಬೇಕು.

ಕೋಲಾರದಲ್ಲಿ ನೆಟ್ಟಗೆ ರೇಷನ್ ಕೊಡಿ....... ನೊಂದವರ

80 ಎಕರೆ ಕೃಷಿ ಭೂಮಿ, ಕೋಲಾರ ನಗರದಲ್ಲಿ ಹಲವಾರು ವಾಣಿಜ್ಯ ಮಳಿಗೆಗಳನ್ನು ಹೊಂದಿದ್ದು, ಹಲವಾರು ಮನೆಗಳನ್ನು ಬಾಡಿಗೆಗೆ ನೀಡಿರುವುದಲ್ಲದೆ, ಬಡ್ಡಿ ವ್ಯವಹಾರದಿಂದ ಕೋಟ್ಯಾಂತರ ರೂ. ಆದಾಯ ಗಳಿಸುವ ತಾಲೂಕಿನ ಅಬ್ಬಣಿ ಗೋಪಾಲಪ್ಪನಿಗೆ ಸರ್ಕಾರ ಬಿಪಿಎಲ್‌ಗೆ ಪಡಿತರ ಚೀಟಿ ನೀಡಿದೆ. ಸರ್ಕಾರದ ಕಾರ್ಯವೈಖರಿ ಹೇಗಿದೆ ಎಂಬುದು ಇದರಿಂದ ಅರ್ಥವಾಗುತ್ತದೆ.

ಬಡವರಿಗೆ ಪಡಿತರ ಚೀಟಿ ವಿತರಿಸುವ ಜವಾಬ್ದಾರಿಯನ್ನು ತಾಲೂಕು ಕಚೇರಿ ಹೊಂದಿದೆ. ಆದರೆ ಅದೇ ಕಚೇರಿಯಲ್ಲಿ ಉದ್ಯೋಗಿಯಾಗಿರುವ, ಹದಿನಾಲ್ಕು ಸಾವಿರ ರೂ. ವೇತನ ಪಡೆಯುತ್ತಿರುವ ವ್ಯಕ್ತಿಗೆ ಬಿಪಿಎಲ್ ಕಾರ್ಡ್ ವಿತರಿಸಲಾಗಿದೆ. ಆದರೆ ಕೃಷಿ ಕೂಲಿ ಮಾಡಿ ಜೀವನ ನಡೆಸುತ್ತಿರುವ ತಾಲೂಕಿನ ಯಾರಂಘಟ್ಟ ಗ್ರಾಮದ ನಾರಾಯಣಮ್ಮನಿಗೆ ಅಧಿಕಾರಿಗಳು ಕೇಸರಿ ಕಾರ್ಡ್ ವಿತರಿಸಿದ್ದಾರೆ.

ಹೀಗೇ ಹುಡುಕುತ್ತಾ ಹೋದರೆ ತಾಲೂಕಿನಾದ್ಯಂತ ಸಾವಿರಾರು ಉದಾಹರಣೆಗಳು ಸಿಗುತ್ತವೆ. ಇದು ಇಂದಿನ ನಿನ್ನೆಯ ಸಮಸ್ಯೆಯಲ್ಲ, ಹಲವಾರು ವರ್ಷಗಳಿಂದ ಹೀಗೇ ಮುಂದುವರೆದಿದೆ. ನಾಗರಿಕ ಸಮಾಜದಲ್ಲಿ ಬದುಕುವ ವ್ಯಕ್ತಿಯೊಬ್ಬರಿಗೆ ಆಹಾರದ ಹಕ್ಕು ಅತ್ಯಂತ ಮೂಲಭೂತವಾದದ್ದು. ಆದರೆ ಸರ್ಕಾರ ಪಡಿತರ ಚೀಟಿಯನ್ನು ಸಮರ್ಪಕವಾಗಿ ವಿತರಿಸದೆ ಬೇಜವಾಬ್ದಾರಿಯಿ॰॰ಗ ॰ರ್ತಿ॰ಸ್ತಿದೆ ಎಂಬುದು ಇದರಿಂದ ಗೊತ್ತಾಗುತ್ತದ.

ಅಧಿಕಾರಿಗಳು ಸಮೀಕ್ಷೆ ಮಾಡಲು ಅಪರೂಪಕ್ಕೆ ಗ್ರಾಮಗಳಿಗೆ ಭೇಟಿ ನೀಡುತ್ತಾರೆ. ಯಾವನೋ ಪಂಚಾಯತಿ ಮೆಂಬರೊ, ರಾಜಕೀಯ ಮಧಾರಿಯ ಮನೆಯಲ್ಲೋ ಕುಳಿತು ಅವನು ಹೇಳಿದವರ ಹೆಸರನ್ನು ಬರೆದುಕೊಂಡು ಪಡಿತರ ಚೀಟಿ ವಿತರಿಸಿ ಬರುತ್ತಾನೆ. ಕೆಂಪು ಕಾರ್ಡ್ ಯಾರಿಗೆ ವಿತರಿಸಲಾಗಿದೆ, ಬಿಪಿಎಲ್ ಕಾರ್ಡ್ ಯಾರಿಗೆ ವಿತರಿಸಲಾಗಿದೆ ಎಂಬುದೇ ಸರ್ಕಾರಿ ನೌಕರನಿಗೆ ಗೊತ್ತಿಲ್ಲ.

ಹೆಚ್ಚಿನ ಸಂದರ್ಭದಲ್ಲಿ ಸರ್ಕಾರಿ ನೌಕರನು ನಗರದಲ್ಲಿ ತಾನು ಉಳಿದಿರುವ ರೂಮಿನಲ್ಲೇ ಕುಳಿತು, ಸಣ್ಣ ಪುಟ್ಟ ಮಡಾರಿಗಳು, ದಲ್ಲಾಳಿಗಳನ್ನು ಕುಳ್ಳರಿಸಿಕೊಂಡು ಎಲ್ಲಾ ಪಡಿತರ ಚೀಟಿಗಳನ್ನು ಸಿದ್ದಮಾಡಿರುತ್ತಾನೆ. ಯಾರು ಯಾವ ಪಡಿತರ ಚೀಟಿಗೆ ಅರ್ಹರು ಎಂಬ ಮಾಹಿತಿಯೇ ಅವನಲ್ಲಿ ಇರುವುದಿಲ್ಲ.

ಈ ದಲ್ಲಾಳಿಗಳು, ರಾಜಕೀಯ ಪುಡಾರಿಗಳು ಸಾವಿರಾರು ರೂ. ಹಣವನ್ನು ಕಮೀಷನ್ ಪಡೆಯುತ್ತಾರೆ. ಹಿರಿಯ ಅಧಿಕಾರಿಗಳಿಂದ ಆರಂಭಿಸಿ ಕೇಸ್ ವರ್ಕರ್‌ಗಳ ತನಕ ಎಲ್ಲರನ್ನೂ ಈ ಪುಡಾರಿಗಳು ತಮ್ಮ ಜೇಬಿನಲ್ಲಿಟ್ಟುಕೊಂಡಿರುತ್ತಾರೆ.

ಹಳ್ಳಿ ಜನ ಕೂಲಿನಾಲಿಗೆ ಹೋಗ ಬೇಕಾಗಿರುತ್ತದೆ. ಪಡಿತರ ಚೀಟಿಯೊಂದನ್ನು ಪಡೆಯಲು ಮೂರು ನಾಲ್ಕು ತಿಂಗಳು ತಾಲೂಕು ಕಚೇರಿಗೆ ಅಲೆದಾಡಿದರೆ ಅವರ ಹೊಟ್ಟೆ ತುಂಬುವುದಾದರೂ ಹೇಗೆ. ಹಾಗಾಗಿ ಈ ಪರಿಸ್ಥಿತಿಯ ದುರುಪಯೋಗ ಮಾಡಿಕೊಂಡಿರುವ ಅಧಿಕಾರಿಗಳು ಮತ್ತು ಮಧ್ಯವರ್ತಿಗಳು ಸಾವಿರಾರು ರೂ. ವಸೂಲಿಯಲ್ಲಿ ತೊಡಗಿದ್ದಾರೆ. ಇದೊಂದು ಕಣ್ಣೋಟವಷ್ಟೇ ಆದರೆ ಒಳಹೊಕ್ಕು ನೋಡಿದರೆ ಈ ಸಮಸ್ಯೆ ಇನ್ನಷ್ಟು ಗಂಭೀರವಾಗಿರುತ್ತದೆ.

ಕರ್ನಾಟಕ ಪ್ರಾಂತ ರೈತಸಂಘದ ನೇತೃತ್ವದಲ್ಲಿ ಹಲವಾರು ಭಾರಿ ಹೋರಾಟ ಪ್ರತಿಭಟನೆಗಳನ್ನು ನಡೆಸಲಾಗಿದೆ. ಅಹೋರಾತ್ರಿ ಧರಣಿಗಳನ್ನು ನಡೆಸಲಾಗಿದೆ. ಸಮಸ್ಯೆ ಇನ್ನೂ ಇದೆ. ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ತಾಲೂಕು ಸಮಿತಿಯಿಂದ ತೀವ್ರತರವಾದ ಹೋರಾಟಗಳನ್ನು ಸಂಘಟಿಸಲಾಗಿದೆ. ಡಿವೈಎಫ್‌ಐ, ಜೆಎಂಎಸ್, ಎಸ್‌ಎಫ್‌ಐ ನೇತೃತ್ವದಲ್ಲಿ ಜಂಟಿಯಾಗಿ ಪ್ರತಿಭಟನೆಗಳನ್ನು ಮುಂದುವರೆಸಲಾಗಿದೆ. ಇಷ್ಟೆಲ್ಲಾ ಹೋರಾಟಗಳನ್ನು ಮಾಡಿದ ನಂತರ ಹೊಸ ಕಾರ್ಡ್‌ಗಳನ್ನು ಮುದ್ರಿಸಲಾಗಿದೆ. ಆದರೆ ಅವುಗಳನ್ನು ಇನ್ನೂ ವಿತರಿಸಿಲ್ಲ. ರಾಜಕಾರಣಿಗಳ ಕಪಿಮುಷ್ಠಿಯಲ್ಲಿ ಸಿಕ್ಕಿರುವ ಅಧಿಕಾರಿಗಳು ಸಾಮಾನ್ಯ ಜನರ ಸಮಸ್ಯೆಗಳನ್ನು ನಿವಾರಿಸುವತ್ತ ಗಮನ ಕೇಂದ್ರೀಕರಿಸುತ್ತಿಲ್ಲ.

ಇದರ ಮುಂದುವರೆದ ಭಾಗವಾಗಿ ಹೊಸ ಕಾರ್ಡ್‌ಗಳನ್ನು ವಿತರಿಸಬೇಕು, ಯೂನಿಟ್ ಪದ್ಧತಿಯನ್ನು ರದ್ದುಗೊಳಿಸಬೇಕು, ಕೇರಳದಲ್ಲಿನಂತೆ ಹದಿನಾಲ್ಕು ಅಗತ್ಯ ವಸ್ತುಗಳನ್ನು ವಿತರಿಸಬೇಕೆಂದು ಆಗ್ರಹಿಸಿ ಡಿವೈಎಫ್‌ಐ ರಾಜ್ಯ ಸಮಿತಿ ಕರೆ ಮೇರೆ ಎಲ್ಲ ಸಾಮೂಹಿಕ ಸಂಘಟನೆಗಳು ಒಗ್ಗಟ್ಟಾ ಜನವರಿ 17ರ ಗುರುವಾರ ಬೃಹತ್ ಪ್ರತಿಭಟನಾ ರ್‍ಯಾಲಿಯನ್ನು ಹಮ್ಮಿಕೊಳ್ಳಲಾಗಿತ್ತು. ತಾಲೂಕು ಕಚೇರಿಗೆ ಮುತ್ತಿಗೆ ಹಾಕಲಾಯಿತು. ಹಳ್ಳಿ ಹಳ್ಳಿಗಳಿಂದ ಸಾವಿರಾರು ಮಂದಿ ಬಡವರು ರ್‍ಯಾಲಿ ಆಗಮಿಸಿದ್ದರು. ರೇಷನ್ ಕಾರ್ಡ್ ಪಡೆದೇ ಹೋಗಬೇಕೆಂದು ನಿರ್ಧರಿಸಿ ಬಂದಿದ್ದರು. ಅವರ ಕಣ್ಣುಗಳಲ್ಲಿ ನೋವು, ಹೊಟ್ಟೆಯಲ್ಲಿ ಹಸಿವು ಮನಸ್ಸಿನಲ್ಲಿ ಆಕ್ರೋಶ ಇರುವಂತೆ ಕಾಣುತ್ತಿತ್ತು. ಮಹಿಳೆಯರು ತಮ್ಮ ಹಾಲುಕುಡಿವ ಮಕ್ಕಳನ್ನು ಕಂಕಳಲ್ಲಿಟ್ಟುಕೊಂಡು ಹೋರಾಟಕ್ಕೆ ಆಗಮಿಸಿದ್ದರು ವಯಸ್ಸಾದವರು, ಕಣ್ಣು ಕಾಣದ ಮುದುಕರು, ಇಟ್ಟಿ ಕೆಲಸ ಮಾಡುವವರು, ಬೀಡಿ ಸುತ್ತುವವರು ಕೂಲಿನಾಲಿ ಮಾಡಿ ಜೀವನ ಸಾಗಿಸುವವರು ನೂರಾರು ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು. ಪ್ರವಾ ಮಂದಿರದಿಂದ ಆರಂಭವಾದ ಪ್ರತಿಭಟನಾ ಮೆರವಣಿಗೆ ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ತಾಲೂಕು ಕಚೇರಿಗೆ ಮುತ್ತಿಗೆ ಹಾಕಿತು.

ಸಿಪಿಎಂ ಜಿಲ್ಲಾ ಮುಖಂಡರಾದ ಗಾಂಧಿನಗ ನಾರಾಯಣ ಸ್ವಾಮಿ, ಪ್ರಾಂತ ರೈತಸಂಘ ನಾಯಕರಾದ ಹೋಳೂರು ಶಂಕರ್ ತೂರಾಂಡಹಳ್ಳಿ ವೆಂಕಟೇಶ್, ಜೆಎಂಎಸ್ ಮುಖಂಡರಾದ ವಿ.ಗೀತಾ, ಆಶಾ, ಡಿವೈಎಫ್‌ಐ ಮುಖಂಡರಾದ ಎನ್.ಎನ್.ಶ್ರೀರಾಮ್ ವೆಂಕಟರೆಡ್ಡಿ, ಮಂಜುನಾಥ್, ಎಸ್.ಎಚ್.ಶಂಕರೇ ಗೌಡ, ವಿದ್ಯಾರ್ಥಿ ಮುಖಂಡರಾದ ಅಂಬರೀಷ್ ಮತ್ತಿತರರ ನೇತೃತ್ವದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು.

- ಅಪ್ಪ

ಬಾರದ ರತ್ನ ಪ್ರಶಸ್ತಿ

"ಎಂಕ, ನಾನೊಂದು ಒಳ್ಳೆ ಕೆಲ್ಸ ಮಾಡ್ತಿನಿ ಕಣಲಾ.."

"ಏನಪ್ಪ ಅದು ಅಂತ ಘನಂದಾರಿ ಕೆಲ್ಸ ಈ ನಾಣಿ ಮಾಡೋದು?"

"ನಾನು ಒಂದು ಏಳಿಕೆ ಕೊಡ್ತಿನಿ ಮಾಜಿ ಪ್ರಧಾನ ಎಂಕ ಅವರಿಗೆ ಬಾರದ ರತ್ನ ಪ್ರಸಸ್ತಿ ಕೊಡಲೇಬೇಕು" ಅಂತ.

"ಯಾಕ್ಲ ನಾಣಿ ನಂಗೆ ವಯಸ್ಸಾಯ್ತು ಅಳ್ಳು ಮಳ್ಳು ಅಂತ ಇಂಗೆ ತಮಾಸೆ ಮಾಡ್ತಿಯಾ? ಇದ್ರಿಂದ ನಿಂಗೇನು ಲಾಭ? ಏನಾರ ಲಾಭ ಇಲ್ದಲೆ ಯಾವ ಕೆಲ್ಸನೂ ಮಾಡೋ ಆಸಾಮಿ ಅಲ್ಲ ನೀನು.."

"ಐತೆ...,ಲಾಭ ಐತೆ..."

"ಅದೆಂಗೆ?"

"ಎಂಗೆ ಅಂದ್ರೆ ಏಳ್ಕೆ ಕೊಡೋದ್ರಿಂದ ನಾನು ಕಳ್ಕೊಳೋದೇನೈತೆ? ಏನೂ ಇಲ್ಲ. ಪೇಪರಲ್ಲಿ, ಟೀವೀಲಿ ಪುಕ್ಕಟ್ಟೆ ನನ್ನ ಎಸ್ರು ಬತ್ತದೆ. ಗ್ರಾಚಾರ ಕೆಟ್ಟು ಆಕಸ್ಮಾತು ನಿಂಗೆ ಪ್ರಸಸ್ತಿ ಬಂದೇ ಬುಡ್ತು ಅಂತ ಇಟ್ಕೋ...., ಆಗ ಈ ಪ್ರಸಸ್ತಿ ನಾನೇ ನಿಂಗೆ ಕೊಡ್ಸಿದ್ದು ಅಂತ ಏಳ ಕಂಡು ತಿರುಗಬವುದು. ಒಂದು ಕಲ್ಲು ಏಗಾಸದಪ್ಪ. ಬಂದ್ರೆ ಪ್ರಸಸ್ತಿ. ಓದ್ರೆ ಕಲ್ಲು. ಅಸ್ಟೇ ತಾನೆ?"

"ನೀನೇಳದೂ ಒಂತರ ಸರಿಯಾಗೈತೆ ಕಣಲಾ ನಾಣಿ. ಆದ್ರೆ ನಾನು ಮಾಜಿ ಪ್ರದಾನ ಯಾವಾಗಾದೆ"?

"ನೋಡ್ಲಾ ಎಂಕ ಅಳ್ಳಿ ಮಳ್ಳು ಇಲ್ಲ ಅಂತೀಯ, ನಮ್ಮೂರು ಮಂಡ್ರು ಪಂಚಾಯ್ತೀಲಿ ನಾಕುದಿನ ಪ್ರದಾನ ಆಗಿರ್ಲಿಲ್ವ?"

"ಔದೌದು ಮರ್‍ತೇಬುಟ್ಟಿದ್ದೆ. ಆದ್ರೆ ಈಗ್ಯಾಕೆ ನಿನ್ನ ತಲೆಗೆ ಇಂತ ಇಚಾರ ಬತ್ತು ಅಂತ?"

"ಎಲ್ಲ ಪಕ್ಷದೋರು, ಅವ್ರವ್ರ ನಾಯಕರಿಗೆ ಬಾರದ ರತ್ನ ಕೊಡಬೇಕು ಅಂತ ಒತ್ತಾಯ ಮಾಡ್ತಾವ್ರೆ ಅದ್ಕೆ..., ನಾನೂ ಯಾಕೆ ಒಂದು ಕಲ್ಲು ವಗೀಬಾರ್ದು ಅಂತ"

"ಎಲ್ಲಾ ಪಕ್ಷದೋರು ಅಂತೀಯಲ್ಲ ಕಮುನಿಸ್ಟು ಈ ಸರ್ಕಾರಗಳು ಕೋಡೋ ಪ್ರಸಸ್ತಿ ತಗಳಕಿಲ್ವಲ್ಲಪ." "ಕಮ್ಯುನಿಸ್ಟುನ್ ಬಿಟ್ಟು ಮಿಕ್ಕೆಲ್ಲಾ ಪಕ್ಷದೋರು ಕಣಲಾ"

"ಏನು ಅದ್ವಾನ ನೋಡು. ಇಂಗೇ ಆದ್ರೆ ನಾಳೀಕೆ ಟೀವೀಲಿ ಆ ಆಡೇಳೋರು ಗೋಗರಿತಾರಲ್ಲ ಅಂಗೆ "ನಂಗೆ ಬಾರದ ರತ್ನ ಪ್ರಸಸ್ತಿ ಕೊಡಲೇಬೇಕು ಅಂತ ಎಸ್.ಎಂ.ಎಸ್. ಕಳ್ಸಿ ಪ್ಲೀಜ್, ಪ್ಲೀಜ್... ಅಂತ ಇವ್ರೂ ಗೋಗರಿತಾರೋನೋಪ್ಪ".

"ಎಸ್ಸೆಮ್ಮೆಸ್ಸು ಪಸ್ಸಮ್ಮೆಸ್ಸೆಲ್ಲ ನಂಗೆ ಗೊತ್ತಾಗದಿಲ್ಲ ಬುಡು. ಏನಿದ್ರೂ ಜನ ಸೇರ್‍ಸಿ ಓರಾಟ ಮಾಡು ಅನ್ನು. ಬೇಕಾರೆ ಮಾಡ್ತೀನಿ".

"ಅದ್ಕೂ ಬೆಲೆ ಇಲ್ದಂಗೆ ಆಗೈತೆ ಕಣಲಾ ನಾಣಿ".

"ಯಾಕ್ಲ ಎಂಕ ಅಂಗಂತೀಯಾ?"

"ಮತ್ತಿನ್ನೆನ್ಲಾ... ಈ ಬಿಜೆಪಿಯೋರು ಸುಮ್ ಸುಮ್ನೆ ಓರಾಟ ಮಾಡ್ತನೇ ಇರ್‍ತಾರೆ. ಈಗ ರಾಜ್ಯದಲ್ಲಿ ಇರೋದು ರಾಷ್ಟ್ರಪತಿ ಆಡಳಿತ ತಾನೆ? ಇವ್ರು ರಾಜ್ಯಪಾಲರ ಆಡಳಿತ ವಿರೋಧಿಸಿ ಓರಾಟ ಮಾಡ್ತಾವ್ರೆ!"

"ಅದ್ರಾಗೇನ್ಲಾ ತಪ್ಪು?"

"ಅಲ್ಲ ಕಣಲಾ ಮೂರು ಪಕ್ಷದೋರು ಆಡಳಿತ ಮಾಡಕ್ಕೆ ಯೋಗ್ತೆ ಇಲ್ದೆ ಕೈಬುಟ್ಟು ಓದ ಮೇಲೆ ರಾಜ್ಯಪಾಲರಲ್ಲದೆ ಇನ್ನಾರು ಆಳಬೇಕಂತೆ? ಇವ್ರು ಬುಟ್ಟಿದ್ದುಕ್ಕೆ ತಾನೆ ಅವ್ರು ಆಳ್ತಿರೋದು. ಇಲ್ಲಿ ಆಳಾಕೆ ಇನ್ಯಾವ ಮಾರಾಜನೋ ಮುಸರಪ್ಪೊ ಬರ್‍ತರ?"

"ಔದು ಕಣಲಾ ನೀನೇಳದ್ರಲ್ಲೂ ಪಾಯಿಂಟದೆ. ಇವ್ರೆಲ್ಲ ನಾಳೆ ನಮ್ಮ ನಾಯಕನಿಗೇ ಬಾರದ ರತ್ನ ಪ್ರಸಸ್ತಿ ಕೊಡಬೇಕು ಅಂತನೂ ಓರಾಟ ಮಾಡಬವುದು. ಆಮೇಲೆ ಪ್ರಸಸ್ತಿ ಕೊಡಲಿಲ್ಲ ಅಂದ್ರೆ 'ಅಯ್ಯಯ್ಯೋ ಅನ್ನಾಯ' ಅಂತ ಅದಕ್ಕೂ ಒಂದು ಓರಾಟ ಮಾಡಬಹುದು. ಒಟ್ಟಿನಲ್ಲಿ ಇಂತ 'ಉಟ್ಟು ಓರಾಟ್ಗಾರ'ರಿಂದ' ನಿಜವಾದ ಓರಾಟಗಳಿಗೂ ಕಸ್ಟ ಆಯ್ತದೆ. ಪ್ರಸಸ್ತಿಗೂ ಮರ್‍ವಾದೆ ಇಲ್ದಂಗಾಯ್ತದೆ."

"ನಮ್ಮ ದ್ಯಾವೇಗೌಡ್ರಿಗೂ ಬಾರದ ರತ್ನ ಪ್ರಸಸ್ತಿ ಕೊಡಿ ಅಂತ ರೇವಣ್ಣೇಗೌಡ್ರು, ಕುಮಾರಣ್ಣೇಗೌಡ್ರು ಯಾರೂ ಏಳಿಕೆ ಕೊಟ್ಟಿಲ್ವಲ್ಲ ಯಾಕೆ ಅಂತ?"

"ಊ ಕನ್ಲ ನಾಣಿ ದ್ಯಾವೇಗೌಡ್ರಿಗೆ ಯಾಕೋ ಸಾನೆ ಬ್ಯಾಸ್ರ ಆಗ್ಬುಟ್ಟದೆ"

"ನಾನು ಕರ್ನಾಟಕದಲ್ಲಿ ಉಟ್ಟಲೇಬಾರದಾಗಿತ್ತು ಅಂತ ಏಳವ್ರೆ"

"ಅಂಗಂದ್ರೇನ್ಲ ಎಂಕ? ಇನ್ನೆಲ್ಲಿ ಉಟ್ಟಬೇಕಾಗಿತ್ತಂತೆ ಅವ್ರು? ಪಾರಿನ್ನಾಗೋ? ಲಂಡನ್ನಾಗೋ?"

"ಅಂಗಲ್ಲ ಕಣಲಾ ಈಗ ಜಗಜಟ್ಟಿಗಳಿಗೆ ತಮ್ಮ ಸಮಕ್ಕೆ ಕುಸ್ತಿ ಮಾಡಕೆ ಎದುರಾಳಿಗಳೇ ಇಲ್ದಿದ್ರೆ ಅವ್ರಿಗೆ ತಾಲೀಮು ಎಂಗಾಯ್ತದೆ? ಅಂಗೇ ಅದ ಸರಿಸಮಾನರಾದ ಎದುರಾಳಿ ಇಲ್ದೆ ಒಂದೊಂದು ಪೆಟ್ಟಿಗೇ ಮಣ್ ಮುಕ್ಕೋ ಎದುರಾಳಿಗಳ ಜತೆ ಕುಸ್ತಿ ಮಾಡಕೆ ಏನ್ ಸಂದಾಕಿರುತ್ತೆ."

"ಅಂದ್ರೆ ಕರ್ನಾಟಕದಲ್ಲಿ ದ್ಯಾವೇಗೌಡ್ರ ಸಮ ಯಾರೂ ಇಲ್ಲ ಅಂತೀಯಾ?"

'ಏ ಬುಡು 'ರಾಜಕೀಯ' ಮಾಡದ್ರಲ್ಲಿ ಅವ್ರುದೇನಿದ್ರೂ ಐ ಲೆವೆಲ್ಲು'

'ಅಂಗಾರೆ ಗೌಡ್ರು ಮುಂದಿನ ಜಲ್ಮದಲ್ಲಿ ಎಲ್ಲಿ ಉಟ್ಟಬವುದು ಅಂತೀಯ?

"ಮುಂದಿನ ಜಲ್ಮ ಹಿಂದಿನ ಜಲ್ಮ ಯಾರ್ ಕಂಡವ್ರೆ? ಒಟ್ನಲ್ಲಿ ಕರ್ನಾಟಕದಲ್ಲಿ ಉಟ್ಟಾಕಿಲ್ಲ ಅಂತ ಆಸೆ ಉಟ್ಟಿಸವರೇ! ಕೆಲವರಿಗೆ "

"ಓಗ್ಲಿ ಬುಡ್ಲಾ ಎಂಕ, ಏನೇನೋ ಇಚಾರ ಏಳಿ ನಾನೇಳಿದ್ ಇಚಾರ ಎತ್ತಾಗೋ ಓಯ್ತು. ನಿನಗೆ ಬಾರದ ರತ್ನ ಪ್ರಸಸ್ತಿ ಕೊಡಬೇಕು ಅಂತ ಏಳ್ಕೆ ಕೊಡ್ಲ?"

"ಥೂ ಸುಮ್ಕಿರ್ಲ ನಿಂಗೇನು ಬ್ಯಾರೆ ಕೆಲ್ಸ ಇಲ್ವ?"

"ಎಂಕ ಹಿಂಗ್ ಯಾಕ್ಲ ನೀನು ಪ್ರಸಸ್ತಿ ಬ್ಯಾಡ ಅಂತಿರೋದು. ಪ್ರಸಸ್ತಿಗಳಿಗೋಸ್ಕರ ಯಾರ್‍ಯಾರೋ ಎಂತೆಂತದೋ ಕೆಲ್ಸ ಮಾಡ್ತರೆ ಸಿಗ್‌ದಿದ್ರಾ ಎಂಗೆಂಗೋ ಒದ್ದಾಡ್ತರೆ. ಅಂತದ್ರಲ್ಲಿ ನೀನು ಬ್ಯಾಡ ಅಂತಿದೀಯಲ್ಲ?"

"ನೋಡಪ್ಪ ಗಾಂಧೀಜಿಗೆ ಜನಗಳ ಪ್ರೀತಿಯಿಂದ ಮ ಆತ್ಮ ಅಂತ ಕರೆಯೋ ಪ್ರಸಸ್ತಿ ಬುಟ್ರೆ ಇನ್ಯಾವ ಪ್ರಸಸ್ತಿ ಬಂದೈತೆ ಏಳು".

- ಶ್ರೀ

ರಾಜಕೀಯ ಚಿತ್ರ ಬದಲಾಯಿಸುವತ್ತ ಮೈಸೂರು ಸಮ್ಮೇಳನದ ಸಂದರ್ಭ ಮತ್ತು ಮಹತ್ವ

ಕರ್ನಾಟಕದಲ್ಲಿ ಕಮ್ಯೂನಿಸ್ಟ್ ಚಳುವಳಿಗೆ ದೊಡ್ಡ ಇತಿಹಾಸವೇ ಇದೆ. ಹಲವು ಏರುಪೇರುಗಳನ್ನು ಹಾದು ಬಂದಿದೆ. ಈಗ ಮುನ್ನಡೆಯ ಹಾದಿಯಲ್ಲಿ ಮುಂದಡಿ ಇಟ್ಟಿರುವ ಸಿಪಿಐ(ಎಂ) 19ನೇ ರಾಜ್ಯ ಸಮ್ಮೇಳನದ ಸಂದರ್ಭದಲ್ಲಿ ಒಂದು ಅವಲೋಕನ ಸಿಪಿಐ(ಎಂ) ನೂತನ ರಾಜ್ಯ ಕಾರ್ಯದರ್ಶಿ ಕಾಂ. ವಿ.ಜೆ.ಕೆ. ನಾಯರ್ ಅವರಿಂದ

ವಿ.ಜೆ.ಕೆ. ನಾಯರ್

ಸಿಪಿಐ(ಎಂ)ನ 19ನೇ ರಾಜ್ಯ ಸಮ್ಮೇಳನವು ಅತ್ಯಂತ ಯಶಸ್ವಿಯಾಗಿ ಸಮಾರೋಪಗೊಂಡಿತು. ಸೀಮಿತ ಶಕ್ತಿ ಇರುವಾಗಲೇ ಅಲ್ಲಿನ ಸಿಪಿಐ(ಎಂ) ಹಾಗೂ ಇತರೆ ಸಾಮೂಹಿಕ ಸಂಘಟನೆಗಳ ಕಾರ್ಯಕರ್ತರು ಅಹೋರಾತ್ರ ಶ್ರಮಿಸಿದರು.

ಮೈಸೂರು ಅರಸೊತ್ತಿಗೆಯ ಈ ರಾಜಧಾನಿಯಲ್ಲಿ ಪಕ್ಷದ ಚಟುವಟಿಕೆ ಮೂವತ್ತರ ದಶಕದಲ್ಲೇ ಆರಂಭವಾದರೂ, ಅದೆಂದೂ ಹಳೆ ಮೈಸೂರು ಪ್ರದೇಶದ ಬೆಂಗಳೂರು, ಕೋಲಾರ, ಕೊಡಗು, ದಾವಣಗೆರೆ/ಹರಿಹರ ಮುಂತಾದೆಡೆ ಹಾಗೂ ಹಳೆ ಮದ್ರಾಸ್ ಪ್ರದೇಶದ ಮಂಗಳೂರು/ದಕ್ಷಿಣ ಕನ್ನಡದಲ್ಲಿ, ಹಿಂದಿನ ನಿಜಾಮನ ಆಡಳಿತದ ಗುಲ್ಬರ್ಗಾದಲ್ಲಿ, ಹಳೆ ಮುಂಬೈ ಪ್ರದೇಶದ ಹುಬ್ಬಳ್ಳಿ, ದಾಂಡೇಲಿ/ಕಾರವಾರದಲ್ಲಿ ಪಡೆದ ಸೀಮಿತ ಬಲವನ್ನೂ ಗಳಿಸಿಕೊಳ್ಳಲಿಲ್ಲ.

ಅನುಭವಗಳು

ಪಕ್ಷದ ಏಕಮಾತ್ರ ರಾಜ್ಯಮಟ್ಟದ ಪ್ಲೀನಂ ಸಮ್ಮೇಳನ ಮೈಸೂರಿನಲ್ಲಿ ಡಿಸೆಂಬರ್ 1980 ರಲ್ಲಿ ನಡೆದಿತ್ತು. ಸಿಪಿಐ(ಎಂ)ನ 10ನೇ ಮಹಾಧಿವೇಶನ (1978) ಹಾಗೂ ಸಾಲ್ಕಿಯಾ ಪ್ಲೀನಂ(ಡಿಸೆಂಬರ್ 78 ಮತ್ತು 1 ಜನವರಿ, 79)ನ ನಿರ್ಣಯಗಳ ಜಾರಿಗೆ ಮೈಸೂರು ಪ್ಲೀನಂ ನಡೆಯಿತು. 10ನೇ ಮಹಾಧಿವೇಶನ ಪಕ್ಷದ ರಾಜಕೀಯ ಮಾರ್ಗವನ್ನು ವಿಮರ್ಶಿಸಿ, ಸರ್ವಾಧಿಕಾರಶಾಹಿ -ವಿರೋಧಿ ಹೋರಾಟದಲ್ಲಿ ಸರಿಯಾದ ನಾಯಕತ್ವ ನೀಡಲಾಗದ ಬಗ್ಗೆ ಕಾರಣಗಳನ್ನು ಗುರುತಿಸಿತು ಮತ್ತು ತೀವ್ರ ಸಾಮೂಹಿಕ ಹೋರಾಟಗಳನ್ನು ನಡೆಸಿ, ಜನಗಳ ಹಿತದೃಷ್ಟಿಯಿಂದ ರಾಜಕೀಯ ಮಧ್ಯಪ್ರವೇಶ ನಡೆಸಿ ಒಂದು ಸಾಮೂಹಿಕ ಕ್ರಾಂತಿಕಾರಿ ಪಕ್ಷವನ್ನು ಬೆಳೆಸುವ ಈಗಿನ ರಾಜಕೀಯ ಸಂಘಟನಾ ಮಾರ್ಗವನ್ನು ರೂಪಿಸಿತು. 10ನೇ ಮಹಾಧಿವೇಶನ ಮುಗಿದ ಕೂಡಲೇ ಅಖಿಲ ಭಾರತ ಪಕ್ಷ ರಾಜ್ಯದಲ್ಲಿ ಮಧ್ಯಪ್ರವೇಶ ನಡೆಸಿ ಇನ್ನೂ ಜಾಲಂಧರ್‌ನ ಹಿಂದಿನ ಮಾರ್ಗಕ್ಕೇ ಅಂಟಿಕೊಂಡಿದ್ದ ಹಳೆಯ ಮುಖಂಡತ್ವವನ್ನು ತೆಗೆದು ಪಕ್ಷವನ್ನು ಒಂದು ಯುವ ಮತ್ತು ಕ್ರಿಯಾಶೀಲ ಮುಖಂಡತ್ವದಲ್ಲಿ ಪುನರ್ರಚಿಸಿತು. ಮೈಸೂರು ಪ್ಲೀನಂ ನಡೆದದ್ದು ಈ ಮುಖಂಡತ್ವದಲ್ಲಿ. ಅದಾಗಲೇ ಪಕ್ಷದ ಮಾರ್ಗವನ್ನು ಅನುಷ್ಠಾನಗೊಳಿಸುವ ವಿಧಾನಗಳ ಬಗ್ಗೆ ಚರ್ಚಿಸುವ ಬದಲು ಈ ಮುಖಂಡತ್ವ 'ಬಿಳಿ ಕೂದಲು' 'ಕಪ್ಪು ಕೂದಲು' ಎಂದು ವಯಸ್ಸಾದವರು ಮತ್ತು ಯುವಕರು ಎಂಬ ಗದ್ದಲವೆಬ್ಬಿಸುವ ಪ್ರಯತ್ನಕ್ಕಿಳಿದರು. ಇದು ಪಕ್ಷದ ಪ್ಲೀನಂನ್ನೇ ಸುಮಾರಾಗಿ ಅಸ್ತವ್ಯಸ್ತಗೊಳಿಸುವುದರಲ್ಲಿತ್ತು. ಆಗ ಹಿರಿಯರಾದ ಎನ್. ಎಲ್. ಉಪಾಧ್ಯಾಯ, ಎನ್. ಕೆ. ಉಪಾಧ್ಯಾಯ ರನ್ನು ವೇದಿಕೆಗೆ ಕರೆದು ಅವರ ಬಿಳಿಗೂದಲನ್ನು ತೋರಿಸಿ ಹಿಂದಿನ ಒಂದು ಘಟನೆಯನ್ನು ನೆನಪಿಸಿದರು. ಅವರು ಪೋರ್ಚುಗೀಸ್ ಸೇನೆಯ ಗುಂಡಿಗೆ ಬಲಿಯಾಗಲು ಇನ್ನೇನು ಭಾರತದ ಗಡಿ ದಾಟಬೇಕಿತ್ತು, ಅಷ್ಟರಲ್ಲಿ ಪಕ್ಷ ಅದನ್ನು ಹಿಂತೆಗೆದುಕೊಂಡಿತು. ಒಂದು ಉದ್ದೇಶ ಸಾಧನೆಗೆ ಗುಂಡೇಟು ಎದುರಿಸಿ ಸಾಯಲೂ ಸಿದ್ದನಾಗಿದ್ದ ಇಂತಹ ಸಂಗಾತಿಯನ್ನು ಹಳಬ, ಅಪ್ರಸ್ತುತ ಎಂದೆಲ್ಲ ಹೇಗೆ ಹೇಳಲು ಸಾಧ್ಯ ಎಂದು ಕೇಳಿದರು. ಕೊನೆಗೂ ಆ ಪ್ಲೀನಂನ್ನು ಉಳಿಸಿಕೊಳ್ಳಲಾಯಿತು. ಅದು ಒಂದು ಹೊಸ ಕರಡನ್ನು ಅಂಗೀಕರಿಸಿತು. ಈ ಲೈನು ಅಂತಿಮವಾಗಿ ಈ ಲೇಖಕ ಬರೆದ "ಹಳೆಯ ಬೇರುಗಳು ಮತ್ತು ಹೊಸ ಚಿಗುರುಗಳು" ಎಂಬ ಹೆಸರಿನಲ್ಲಿ 'ಐಕ್ಯರಂಗ'ದಲ್ಲಿ ಪ್ರಕಟವಾಯಿತು.

ಮುಖಂಡತ್ವ ನಂತರ ಕಾರ್ಮಿಕ ವರ್ಗ ಮತ್ತು ರೈತಾಪಿ ವರ್ಗಗಳ ಹೋರಾಟಗಳ ಒಂದು ಸರಣಿಯನ್ನೆ ಹರಿಯ ಬಿಡಲು ಮುಂದಾಯಿತು. ಅದರಿಂದಾಗಿ ಐತಿಹಾಸಿಕ ಸಾರ್ವಜನಿಕ ವಲಯದ ಕಾರ್ಮಿಕರ ಹೋರಾಟ, ಮೈಕೊ/ಐಟಿಸಿ ಹೋರಾಟಗಳು, ಜತೆಗೆ ಮಲಪ್ರಭಾ ರೈತ ಚಳುವಳಿ, ನರಗುಂದ, ನಿಪ್ಪಾಣಿ, ಬಿಜಾಪುರ, ಚಿಂತಾಮಣಿ, ಬಾಗೇಪಲ್ಲಿ ಮುಂತಾದೆಡೆ ರೈತರ ಬಂಡಾಯ ನಡೆಯಿತು. ಪಕ್ಷದ ಜಾಲಂಧರ್ ಮತ್ತು ಸಾಲ್ಕಿಯಾ ಲೈನುಗಳನ್ನು ಅನುಸರಿಸಿ ರಾಜ್ಯದಲ್ಲಿ ಪಕ್ಷ ದಾಪುಗಾಲಿಟ್ಟು ಮುನ್ನಡೆಯಲು, ಕಾಂಗ್ರೆಸ್ಸಿನ ಏಕಾಧಿಕಾರವನ್ನು ಕೊನೆಗೊಳಿಸಲು, 1983ರಲ್ಲಿ, ಮತ್ತೆ 1985ರಲ್ಲಿ ಜನತಾ ಪಾರ್ಟಿ ಸರಕಾರವನ್ನು ತರುವಲ್ಲಿ ನೆರವಾಗಲು ಸಾಧ್ಯವಾಯಿತು. ಆಗ ಜನತಾ ಸರಕಾರ ಜನರಿಗೆ, ವಿಶೇಷವಾಗಿ ಕಾರ್ಮಿಕ ವರ್ಗಕ್ಕೆ ಪರಿಹಾರ ಒದಗಿಸಲು ನೆರವಾಯಿತು. ಅವರು ಕಾರ್ಮಿಕರು ಮತ್ತು ಅವರ ಮುಖಂಡರ ಮೇಲಿದ್ದ ಎಲ್ಲಾ ಪೋಲೀಸ್ ಮೊಕದ್ದಮೆಗಳನ್ನು ಹಿಂತೆಗೆದುಕೊಂಡರು, ಕನಿಷ್ಟ ಕೂಲಿ ಹೆಚ್ಚಳ ಇತ್ಯಾದಿ ಕ್ರಮಗಳನ್ನು ಕೈಗೊಂಡರು. ಅದೇ ವೇಳೆಗೆ ಈಗಿನ ಉದಾರೀಕರಣ ಧೋರಣೆಯನ್ನು ಕೂಡ ಬಹಳ ಬೇಗನೆ ತಂದರು. ಅವರು ಪ್ರವೇಶ ಮತ್ತು ಡೊನೇಷನ್ ಶುಲ್ಕಗಳನ್ನು ಹೆಚ್ಚಿಸುವ ಮೂಲಕ ಉನ್ನತ ಶಿಕ್ಷಣದಲ್ಲಿ ಸ್ವಯಂಹಣಕಾಸು ಪದ್ಧತಿಯನ್ನು ಆರಂಭಿಸಿದರು ಮತ್ತು ಅದನ್ನು ಸ್ಥಿರಗೊಳಿಸಿದರು; ಬೆಂಗಳೂರಿನಲ್ಲಿ ಮಾಹಿತಿ ತಂತ್ರಜ್ಞಾನ(ಐಟಿ) ಸ್ಥಾಪನೆಗೊಳ್ಳಲು ನೆರವು ಒದಗಿಸಿದರು. ಅವರು ಬಂಗಾಳದ ಪ್ರಯೋಗವನ್ನು ಅಧ್ಯಯನ ಮಾಡಿ ವಿಕೇಂದ್ರೀಕರಣ ತರುವಲ್ಲಿ ಒಂದು ಸಕಾರಾತ್ಮಕ ಕೊಡುಗೆಯನ್ನೂ ನೀಡಿದರು.

ಹೋಲಿಕೆಗೆ ನಾವು ಆಂಧ್ರ ಪ್ರದೇಶದ ಉದಾಹರಣೆಯನ್ನು ತೆಗೆದುಕೊಳ್ಳಬಹುದು. ಅಲ್ಲಿಯೂ ಎನ್‌ಟಿಆರ್ ನೇತೃತ್ವದ ತೆಲುಗು ದೇಶಂ ಅಧಿಕಾರಕ್ಕೆ ಬರುವ ವರೆಗೆ ಕಾಂಗ್ರೆಸ್ಸಿನ ನಿರಂತರ ಆಳ್ವಿಕೆಯಿತ್ತು. ಕರ್ನಾಟಕದ ಜನತಾ ಪಕ್ಷದಷ್ಟು ತೆಲುಗು ದೇಶಂ ಒಪ್ಪಿತ ಮಾರ್ಗ ಬಿಟ್ಟು ನಡೆಯಲಾಗಲಿಲ್ಲ. ಅಲ್ಲಿ ಇನ್ನೂ ಬಲಶಾಲಿಯಾದ ಕಾರ್ಮಿಕ ವರ್ಗದ ಪಕ್ಷ ಸಿಪಿಐ(ಎಂ) ಮಧ್ಯಪ್ರವೇಶಗಳಿಂದಾಗಿ ಅದು ಸಾಧ್ಯವಾಯಿತು. ತೆಲಂಗಾಣಾ ಆಂದೋಲನದ ಹಿರಿಯ ಮುಖಂಡರು ಮತ್ತು ಆಂಧ್ರ ಜನತೆಯ ಅನುಭವಿ ಹೋರಾಟಗಳ ಮುಖಂಡತ್ವವು ಜಾಲಂಧರ್/ಸಾಲ್ಕಿಯಾ ಲೈನಿನ ಸರಿಯಾದ ಜಾರಿಯಲ್ಲಿ ನೇತೃತ್ವ ನೀಡಿತು. ಅವರ ಕಟ್ಟುನಿಟ್ಟಾದ ಶಿಸ್ತಿನಲ್ಲಿ ಯುವ ಕಾರ್ಯಕರ್ತರ ಒಂದು ತಂಡವನ್ನು ಪೋಷಿಸಿ ಕಾರ್ಮಿಕ ವರ್ಗ ಮತ್ತಿತರ ಸಾಮೂಹಿಕ ಸಂಘಟನೆಗಳನ್ನು ಬೆಳೆಸಲಾಯಿತು. ಕರ್ನಾಟಕದಲ್ಲಿ ವಿದ್ಯುಚ್ಛಕ್ತಿ ಸುಲಭವಾಗಿ ತರಲಾಯಿತು ಎಂಬುದನ್ನು ಗಮನಿಸಬೇಕು. ಆದರೆ ಆಂಧ್ರದ ಪಕ್ಷ ಚಂದ್ರಬಾಬು ಸರಕಾರದ ವಿರುದ್ಧ ಸಮರ ನಡೆಸಿ ಸುಧಾರಣೆ ಮುಂದುವರೆಯುವುದನ್ನು ತಡೆಯಿತು. ಹೀಗೆ ಅಲ್ಲಿನ ಬೂರ್ಜ್ವಾ ಪಕ್ಷದ ದೌರ್ಬಲ್ಯವನ್ನು ಬಳಸಿ ಬಿಜೆಪಿ ಅಥವಾ ಬೇರೆ ಶಕ್ತಿಗಳು ಬೆಳೆಯದಂತೆ ತಡೆಯಲು ಅವರಿಗೆ ಸಾಧ್ಯವಾಯಿತು.

ರಾಜಕೀಯ ಚಿತ್ರ ಬದಲಾಗಬೇಕು

ಈ ಅವಧಿಯಲ್ಲಿ ಹೋರಾಟಗಳನ್ನು ಉಳಿಸಿಕೊಳ್ಳುವಲ್ಲಿ ನಮ್ಮ ವಿಫಲತೆ ಬೂರ್ಜ್ವಾ ವಿರೋಧ ಪಕ್ಷವನ್ನು ಉಳಿಸಿಕೊಳ್ಳುವಲ್ಲಿ ಕೂಡಾ ಹಾಗೂ ಜನತಾದಳದ ಅಥವಾ ಕಾಂಗ್ರೆಸ್ಸಿನ ಧೋರಣೆಗಳನ್ನು ರೂಪಿಸುವಲ್ಲಿ ಮಧ್ಯಪ್ರವೇಶಿಸುವ ನಮ್ಮ ಸಾಮರ್ಥ್ಯವನ್ನು ಕುಂಠಿತಗೊಳಿಸಿತು. ಇದರಿಂದ ಎಂಭತ್ತರ ದಶಕದಲ್ಲಿ ಬಲವಾಗಿದ್ದ ಕಾಂಗ್ರೆಸ್-ವಿರೋಧಿ ಭಾವನೆಯ ಅವಕಾಶವನ್ನು ಅಪಹರಿಸಲು ಕೋಮುವಾದಿ ಪಕ್ಷಕ್ಕೆ ಸಾಧ್ಯವಾಯಿತು. ಹೀಗೆ ಸಮಯ ಸಾಧಕ ರಾಜಕಾರಣದ ಕೈಮೇಲಾದಾಗ ನಮಗೆ ರಾಜ್ಯವನ್ನು ಇದರಿಂದ ಅಥವಾ ಕೋಮುವಾದದಿಂದ ಉಳಿಸುವಲ್ಲಿ ನಿರ್ಣಾಯಕ ಪ್ರಭಾವ ಬೀರಲು ಸಾಧ್ಯವಾಗಲಿಲ್ಲ.

ದುಡಿಯುವ ಜನರ ಚಳುವಳಿ ಈ ಅವಧಿಯಲ್ಲಿ ಮಧ್ಯಪ್ರವೇಶದ ರಾಜಕಾರಣದಲ್ಲಿ ರಾಜಕೀಯಕರಣ ಗೊಳ್ಳದಿದ್ದರೂ ಬೆಳೆಯುತ್ತಲೇ ಬಂತು. ಮೈಸೂರು ಸಮ್ಮೇಳನದಲ್ಲಿ ಮಂಡಿಸಿದ ವರದಿ ತೋರಿಸಿರುವಂತೆ ರಾಜ್ಯದಲ್ಲಿ ಪಕ್ಷದ ಶೇ.90 ಸದಸ್ಯತ್ವ ಸುಮಾರು 21 ತಾಲ್ಲೂಕುಗಳಲ್ಲಿ ಮಾತ್ರವೇ ಇದ್ದರೂ ನಮ್ಮ ಸಾಮೂಹಿಕ ಸಂಘಟನೆಗಳ ಪ್ರಭಾವ ರಾಜ್ಯದ 178 ತಾಲ್ಲೂಕುಗಳಲ್ಲಿ 140ರಲ್ಲಿ ಇದೆ. ತಕ್ಷಣದ ಪ್ರಶ್ನೆಯೆಂದರೆ ಈ ಸ್ಥಳಗಳಲ್ಲಿ ಪಕ್ಷವನ್ನು ಕ್ರೋಢೀಕರಿಸಿ ಅದನ್ನು ಮತ್ತಷ್ಟು ವಿಸ್ತರಿಸಿ ಪ್ರತಿವರ್ಷ ಕನಿಷ್ಠ ಅದು ಇಮ್ಮಡಿಯಾಗುವಂತೆ ಮಾಡುವುದು, ಈ ಮೂಲಕ ಪಕ್ಷ ನಿಕಟ ಭವಿಷ್ಯದಲ್ಲೇ ನಿಜವಾಗಿಯೂ ಒಂದು ಸಾಮೂಹಿಕ ಕ್ರಾಂತಿಕಾರಿ ಪಕ್ಷವಾಗಿ ಪರಿವರ್ತಿತ ಗೊಳ್ಳಬೇಕು.

ಒಂದು ಸಾಮೂಹಿಕ ಕ್ರಾಂತಿಕಾರಿ ಪಕ್ಷವನ್ನು ಕಟ್ಟುವ ಕೆಲಸ ಕಟ್ಟುನಿಟ್ಟಾಗಿ ಪಕ್ಷದ ರಾಜಕೀಯ-ಸಂಘಟನಾ ಮಾರ್ಗದಲ್ಲೇ ಸಾಗಬೇಕು. ಇದಕ್ಕೆ ಮೊದಲನೆಯದಾಗಿ ಒಂದು ಸತತವಾಗಿ ಕಾರ್ಯನಿರತವಾಗಿರುವ ರಾಜ್ಯ ಕೇಂದ್ರ ಹಾಗೂ ಎಷ್ಟು ಸಾಧ್ಯವೋ ಅಷ್ಟು ಜಿಲ್ಲೆಗಳಲ್ಲಿ ಇಂತಹ ಕೇಂದ್ರಗಳು ಬರಬೇಕು. ಇಂತಹ ಒಂದು ನಾಯಕತ್ವ ಪ್ರತಿ ಜಿಲ್ಲೆಯ ಮತ್ತು ಸಾಮೂಹಿಕ ಸಂಘಟನೆಗಳ ಪ್ರತಿಯೊಂದು ಕಾರ್ಯನಿರತ ಕೇಂದ್ರದ ಕೆಲಸಗಳನ್ನು ಸಾಮೂಹಿಕವಾಗಿ ಪರಿಶೀಲಿಸಬೇಕು. ಇದರಿಂದ ನಮಗೆ ಸಾಮೂಹಿಕ

ಪುಟ 15ಕ್ಕೆ

ಶಿಕಾರಿಪುರದಲ್ಲಿ ಕಳಚಿ ಬಿದ್ದ ಯಡ್ಡಿ ಮುಖವಾಡ

ರೈತರ ಹೆಸರಿನಲ್ಲಿ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸುವ ಮೂಲಕ ಅಧಿಕಾರದ ಬಳಿಕವೂ ರೈತರ ಅನುಕಂಪ ಗಿಟ್ಟಿಸುವುದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ನಾಟಕವಾಗಿತ್ತೇ? ಇದು ಶಿಕಾರಿಪುರ (ಯಡ್ಡಿ ಸ್ವಕ್ಷೇತ್ರ) ರೈತರ ದುಸ್ಥಿತಿ ನೋಡಿದರೆ ಗೊತ್ತಾಗುತ್ತದೆ. ಹಲವು ಮುಖವಾಡಗಳ ಪಕ್ಷವಾದ ಬಿಜೆಪಿಯ ನಾಯಕ ಯಡಿಯೂರಪ್ಪನವರ ಮುಖವಾಡಗಳ ಬಗ್ಗೆ ಹೆಚ್ಚೇನು ಬರೆಯಬೇಕಿಲ್ಲ. ಸಾಮಾಜಿಕ ನ್ಯಾಯದ ಬಗ್ಗೆಯಾಗಲೀ, ಬಡವರು, ಕೃಷಿಕರು, ವಿದ್ಯಾರ್ಥಿಗಳ ಸಂಕಷ್ಟಗಳನ್ನು ಎಂದೆಂದಿಗೂ ಮುಂದು ಮಾಡದ ಯಡಿಯೂರಪ್ಪ 'ಮುಖ್ಯಮಂತ್ರಿ ಕುರ್ಚಿ' ಹಿಡಿಯುವುದೇ ನನ್ನ ಕನಸು ಎಂದು ಹೇಳುವ ಮೂಲಕ ಸಾರ್ವಜನಿಕವಾಗಿಯೇ ಲಜ್ಜೆ ಇಲ್ಲದ ನಾಯಕನಾಗಿ ಪ್ರಕಟಿಸಿದ್ದು ಎಲ್ಲರಿಗೂ ಗೊತ್ತಿದ್ದೇ ಆಗಿದೆ.

ನಿಜ ನಾಯಕನ ಅಧಿಕಾರ ಎಂಬ ಮಾತು ಅಕ್ಷರಃ ಸತ್ಯ. ಆದರೆ ಚುನಾವಣೆಯಲ್ಲಿ ಜನರು ತಿರಸ್ಕರಿಸಿದ್ದರೂ, ಒಮ್ಮೆ ಜೆಡಿಎಸ್ ಕೈಕೊಟ್ಟು ಆ ಪಕ್ಷದ ವಿರುದ್ಧ ಯಾತ್ರೆ ನಡೆಸುತ್ತಿದ್ದ ನಡುವೆಯೇ ಅಧಿಕಾರಕ್ಕಾಗಿ ಆತುರಗೆಟ್ಟು ಓಡಿದ ಯಡಿಯೂರಪ್ಪ ಅವರ ನಿಜಬಣ್ಣ ಶಿಕಾರಿಪುರದಲ್ಲಿ ಕಾಣಸಿಗುತ್ತದೆ.

ರೈತರ ಬಗ್ಗೆ ಮಾರುದ್ದ ಅನುಕಂಪ ತೋರುವ ಯಡಿಯೂರಪ್ಪ ಅವರ ಕ್ಷೇತ್ರದಲ್ಲಿ ನೈಸರ್ಗಿಕ ವಿಕೋಪಕ್ಕೆ ತತ್ತರಿಸಿ ಮೂರಾ ಬಟ್ಟೆಯಾದ ರೈತರನ್ನು ಒಮ್ಮೆಯಾದರೂ ಮಾತನಾಡಿಸಿ ಧೈರ್ಯ ತುಂಬಲಿಲ್ಲ. ರೈತರ ದುಸ್ಥಿತಿಯ ಬಗ್ಗೆ ಮಾಧ್ಯಮಗಳು ವರದಿ ಮಾಡಿದ ಮೇಲೂ ಕನಿಷ್ಟ ಶಿಕಾರಿಪುರಕ್ಕೆ ಭೇಟಿ ನೀಡಿ ರೈತರಿಗೆ ಸಾಂತ್ವನ ಹೇಳದ ಯಡಿಯೂರಪ್ಪ ಅವರು ರೈತರ ಬಗ್ಗೆ ಮಾತನಾಡುವ ನೈತಿಕ ಹಕ್ಕು ಉಳಿಸಿಕೊಂಡಿದ್ದಾರೆಯೇ?

ಮಳೆ ಹೊಡೆತ- ಆತ್ಮಹತ್ಯೆಗಳ ಸಾಲು

ಕಳೆದ ವರ್ಷದ ಮಳೆಗಾಲದ ಹೊಡೆತದಿಂದ ಬೆಳೆಹಾನಿಗೆ ಸಿಕ್ಕಿ ಶಿಕಾರಿಪುರದಲ್ಲಿ 6 ಜನ ರೈತರು ಕೇವಲ ಎರಡು ತಿಂಗಳಲ್ಲೇ ಆತ್ಮಹತ್ಯೆ ಮಾಡಿಕೊಂಡಿದ್ದಾರೆ! (ಇದನ್ನು ಇಡೀ ರಾಜ್ಯಕ್ಕೆ ತಿಳಿಯುವ ಹಾಗೆ ಮಾಧ್ಯಮಗಳು ಏಕೆ ವರದಿ ಮಾಡಲಿಲ್ಲ!?) ಶಿಕಾರಿಪುರದ ಪರಮೇಶ್ವರಪ್ಪ, ಚುಂಚನಕೊಪ್ಪದ ಲಕ್ಷ್ಮಣ್ ನಾಯಕ್ ಮತ್ತು ಈತನ ಪತ್ನಿ ಗಂಗೀಬಾಯಿ, ಬಲೂರಿನ ರವಿ ನಾಯ್ಕ್ ಇವರು ಕಳೆದ ಆಗಸ್ಟ್‌ನಲ್ಲಿ ಆತ್ಮಹತ್ಯೆ ಹಾದಿ ಹಿಡಿದರು. ಬೆನ್ನೂರು ಗ್ರಾಮದ ಚೌಡಪ್ಪ, ಬಸವನಂದಿ ಗ್ರಾಮದ ಸುರೇಶಪ್ಪ ಅವರು ಸೆಪ್ಟೆಂಬರ್ ತಿಂಗಳಲ್ಲಿ ಆತ್ಮಹತ್ಯೆಗೆ ಶರಣಾದರು.

ಆತ್ಮಹತ್ಯೆ ಮಾಡಿಕೊಂಡ ಆರು ರೈತರು ಕೂಡ ಸಹಕಾರಿ ಬ್ಯಾಂಕಿನಲ್ಲಿ ಸಾಲ ಮಾಡಿ ಜೋಳದ ಬೆಳೆ ಬೆಳೆದಿದ್ದರು. ಆದರೆ ಅತಿಯಾಗಿ ಬಿದ್ದ ಮಳೆಯ ಕಾರಣ ಇವರ ಬೆಳೆ ನಾಶವಾಯಿತು. ಇದರಿಂದ ಹೆದರಿದ ಈ ಬಡಪಾಯಿ ರೈತರು ಸಾಲ ತೀರಿಸಲು ದಾರಿಗಾಣದೇ ಆತ್ಮಹತ್ಯೆಯ ಹಾದಿ ಹಿಡಿದರು. ಇದೇ ದಿನಗಳಲ್ಲಿ ಸನ್ಮಾನ್ಯ ಯಡಿಯೂರಪ್ಪನವರು ಮುಂದಿನ ಸ್ವಾತಂತ್ರ್ಯ ದಿನಾಚರಣೆಯಂದು ಮುಖ್ಯಮಂತ್ರಿಯಾಗಿ ನಾನೇ ಧ್ವಜಾರೋಹಣ ಮಾಡುತ್ತೇನೆ ಎಂದು ಮಾಧ್ಯಮದವರ ಮುಂದೆ ಬಡಾಯಿ ಕೊಚ್ಚಿ ಕೊಳ್ಳುತ್ತಿದ್ದರು. ತನ್ನ ಸ್ವಕ್ಷೇತ್ರದಲ್ಲಿ ಸಾಲ ಬಾಧೆ ತಾಳಲಾಗದೇ ರೈತರು ಆತ್ಮಹತ್ಯೆ ಮಾಡಿಕೊಂಡು, ಅವರ ಕುಟುಂಬಗಳ ಆಕ್ರಂಧನ ಮುಗಿಲು ಮುಟ್ಟುತ್ತಿದ್ದರೆ ಇತ್ತ ಯಡಿಯೂರಪ್ಪ ಕುರ್ಚಿಯ ಕನಸಿನಲ್ಲಿ ತೇಲುತ್ತಿದ್ದರು.

ಜಿಲ್ಲಾಡಳಿತದ ವರದಿ ಪ್ರಕಾರ ಮಳೆ ವಿಕೋಪದಿಂದ ಎಂಟು ಮಂದಿ ಸಾವನ್ನಪ್ಪಿದ್ದಾರೆ. ಆದರೆ ವರದಾ ನದಿಯಲ್ಲಿ ಮುಳುಗಿದ ಇಬ್ಬರು ಯುವಕರಿಗೆ ಮಾತ್ರ ಪರಿಹಾರ ನೀಡಿರುವ ಅಧಿಕಾರಿಗಳು ಉಳಿದ ಆರು ರೈತರ ಆತ್ಮಹತ್ಯೆಯನ್ನು ಸಾಮಾನ್ಯ ಆತ್ಮಹತ್ಯೆ ಎಂದು ತಳ್ಳಿಹಾಕಿದ್ದಾರೆ.

ಈಗ ಹೇಳಿ ಮಿಸ್ಟರ್ ಯಡಿಯೂರಪ್ಪನವರೇ ನಿಜಕ್ಕೂ ನಿಮಗೆ ರೈತರ ಮೇಲೆ ಕಾಳಜಿ ಇದೆಯೋ ಅಥವಾ ನಿಮ್ಮ ಕುರ್ಚಿಯ ಆಸೆಗಾಗಿ ರೈತರ ಮೇಲೆ ಪ್ರಮಾಣ ಮಾಡಿ ಮೀಸೆ ಮರೆಯಲ್ಲೇ ನಕ್ಕಿರೋ?

ಒಬ್ಬ ನಿಜವಾದ ಜನನಾಯಕ ಜನರ ಹಿತವನ್ನು ತನ್ನ ಮೊದಲ ಆದ್ಯತೆಯಾಗಿ ಸ್ವೀಕರಿಸುತ್ತಾನೆಯೇ ಹೊರತು ಕುರ್ಚಿಯ ಮೋಹವನ್ನಲ್ಲ. ನಿಮ್ಮ ಮುಖವಾಡ ಶಿಕಾರಿಪುರದಲ್ಲಿ ಕಳಚಿಬಿದ್ದಿದೆ.

- ಯಾರೋ



ಉಳ್ಳಾಲದಲ್ಲಿ ಕೋಮುಗಲಭೆ : ಕರಾವಳಿಯ ಕೊಳ್ಳಿ ದೆವ್ವಗಳು ಸುಮ್ಮನಾಗಿಲ್ಲ, ಆಗುವುದಿಲ್ಲ....

ಮೊನ್ನೆ ಉಳ್ಳಾಲದಲ್ಲಿ ನಡೆದ ಗಲಭೆ ಯಾಕೆ ಏನು

ಕರಾವಳಿಯಲ್ಲಿ ಕೋಮು ಹಿಂಸೆಯ ಸರಣಿ ಮತ್ತೆ ಮುಂದುವರೆದಿದೆ. ಮುಗ್ಧ ಜನರ ಮಧ್ಯೆ ಕೋಮು ಕದನವನ್ನು ಹುಟ್ಟುಹಾಕಿ ಬೇಳೆ ಬೇಯಿಸಿಕೊಳ್ಳುವ ಕೊಳ್ಳಿದೆವ್ವಗಳು ತಮ್ಮ ರಕ್ಕಸ ಕುಣಿತವನ್ನು ಅಸಹಾಯಕ ಜನರ ನಿರಾಸಕ್ತಿಯ ಮಧ್ಯೆ ನಿಧಾನಕ್ಕೆ ಮುಂದಕ್ಕೆ ಒಯ್ಯುತ್ತಿವೆ.

ಮುಂದಿನ ಚುನಾವಣೆಗಳು ಮುಗಿಯುವವರೆಗೆ ಈ ಕದನ ಹುಟ್ಟುಹಾಕುವ ಕಾರ್ಯ ನಿಲ್ಲುವ ಲಕ್ಷಣಗಳು ಕಾಣುತ್ತಿಲ್ಲ.

ಡಿಸೆಂಬರ್ 6ರ ನೆಪದಲ್ಲಿ "ದ್ರೋಹ" "ವಿಜಯೋತ್ಸವ"ಗಳ ಹೆಸರಿನಲ್ಲಿ ನಡೆದ ಘಟನೆಗಳು ಅನಂತರ ಬಂಟ್ವಾಳದ ಗಲಭೆ, ಮೂಳೂರಿನ ಹಂದಿ ತಲೆ ಪ್ರಕರಣ, ಬಿ.ಸಿ. ರೋಡಿನ ದನದ ತಲೆ ಪ್ರಕರಣಗಳಿಂದ ದೊಡ್ಡ ಕೋಮುಗಲಭೆಗಳು ನಡೆಯಬಹುದು ಎಂಬ ಭಯದ ನಡುವೆಯೂ ಜಿಲ್ಲಾಡಳಿತದ ಕಟ್ಟುನಿಟ್ಟಿನ ಕ್ರಮ, ಯಾವುದಕ್ಕೂ ಓಗೊಡದ ಜನರ ನಿರಾಸಕ್ತಿಯಿಂದಾಗಿ ಸಣ್ಣಪುಟ್ಟ ಹಿಂಸೆಯಿಂದ ಮುಕ್ತಾಯವಾಗಿ ಜನ ನೆಮ್ಮದಿಯ ನಿಟ್ಟುಸಿರು ಬಿಡುವಂತಾಯಿತು.


ಸುಟ್ಟ ಆಟೋ

ಚಳಿ ಕಾಯಿಸಿಕೊಳ್ಳುವ ಕೊಳ್ಳಿ ದೆವ್ವಗಳು

ಆದರೆ ಬಡವರ ಮನೆಗೆ ಬಿದ್ದ ಬೆಂಕಿಯಿಂದಲೇ ಚಳಿ ಕಾಯಿಸಿಕೊಳ್ಳುವ ಕೊಳ್ಳಿದೆವ್ವಗಳು ಸುಮ್ಮನಾಗಿಲ್ಲ. ಹತ್ತಿರದಲ್ಲೇ ಚುನಾವಣೆಗಳು ನಡೆಯಲಿರುವುದರಿಂದ ಅಲ್ಲಿಯವರೆಗೆ ಸಣ್ಣಪುಟ್ಟದ್ದಾದರೂ ಸರಿ ಗಲಭೆಗಳು ನಡೆಯುತ್ತಾ ಇದ್ದು ಕೋಮು ಉದ್ವಿಗ್ನತೆ ಕಾಯ್ದುಕೊಳ್ಳಬೇಕು. ಆ ಮುಖಾಂತರ ಜನರ ಮನಸ್ಸಿನ ಆಳಕ್ಕೆ ನಾಟಿರುವ ಕೋಮುದ್ವೇಷವನ್ನು ಗಟ್ಟಿಗೊಳಿಸಿ, ಹಿಂದೂ ಮುಸ್ಲಿಂ ಮತಗಳ ಧ್ರುವೀಕರಣವನ್ನು ಹೆಚ್ಚಿಸಿ ಚುನಾವಣೆ ಗೆಲ್ಲಬೇಕು ಎಂಬ ಇರಾದೆಯಿಂದ ಅಗ್ನಿಭಕ್ಷಕ ಬಿಜೆಪಿ ಕರಾವಳಿಯಲ್ಲಿ ಚುನಾವಣೆಯ ರಂಗ ತಾಲೀಮಿಗೆ ಇಳಿದಿದೆ.


ಈ ಬಾರಿ ಶತಾಯಗತಾಯ ರಾಜ್ಯದ ಗದ್ದುಗೆಯನ್ನು ಗೆಲ್ಲಲೇಬೇಕು ಎಂಬ ಗುರಿಯೊಂದಿಗೆ ಬೀದಿಗೆ ಇಳಿದಿರುವ ಬಿಜೆಪಿಯು ಚಡ್ಡಿಪಡೆ ಅಧಿಕಾರದ ಸನಿಹ ಸುಳಿಯಬೇಕಾದರೆ ತಮ್ಮ ಪ್ರಯೋಗ ಶಾಲೆಯಾದ ಕರಾವಳಿಯನ್ನು ಸ್ವಾದೀನಪಡಿಸಿಕೊಳ್ಳಲೇಬೇಕು ಎಂದು ಚುನಾವಣೆಯ ಕೆಲಸ ಶುರು ಹಚ್ಚಿದೆ.

ಅದರ ಭಾಗವಾಗಿ ಗಲಭೆಗಳ ಸರಣಿ ಮುಂದುವರಿಯುತ್ತಿದೆ. ಇನ್ನೇನೂ ಎಲ್ಲಾ ಶಾಂತವಾಯಿತು. ಬಿಜೆಪಿಯವರು ಬಿಸಿ ರೋಡಿನಲ್ಲಿ ಜಿಲ್ಲೆಯ 'ಮೋದಿ' ನಾಗರಾಜ ಶೆಟ್ಟರನ್ನು ಲಾರಿ ಹಿಡಿದು ಗದರಿಸಿದ್ದರಿಂದಾಗಿ ಚಡ್ಡಿಗಳು ಇನ್ನೂ ಬಾಲ ಬಿಚ್ಚಲಾರರು ಎಂದು ಹಲವರು ಅಂದುಕೊಳ್ಳುತ್ತಿದ್ದಾಗಲೇ ಕಳೆದ ಭಾನುವಾರ ಅಧಿಕೃತವಾಗಿ ಕಸಾಯಿಖಾನೆಯಿಂದ ಮಾರುಕಟ್ಟೆಗೆ ದನದ ಮಾಂಸ ತಲುಪಿಸಿ ವಾಪಸ್ಸಾಗುತ್ತಿದ್ದ ಆಟೋರಿಕ್ಷಾಕ್ಕೆ ಬಿಜೆಪಿಯ ಪುಂಡ ಪಡೆಯಾದ ಬಜರಂಗಿಗಳು ಹಾಡುಹಗಲೇ ಮಂಗಳೂರಿನ ಹೃದಯಭಾಗದಲ್ಲಿ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿದರು. ಇದರಿಂದಾಗಿ ಮಂಗಳೂರು ಭಯಭೀತವಾದರೂ ಮಾಂಸವ್ಯಾಪಾರಸ್ಥರು ತಾಳ್ಮೆಯಿಂದ ಪರಿಸ್ಥಿತಿಯನ್ನು ನಿಭಾಯಿಸಿದ್ದುದರಿಂದ ಬಿಜೆಪಿಗಳು ಎಣಿಸಿದಂತೆ ರಿಕ್ಷಾಕ್ಕೆ ಹಚ್ಚಿದ ಬೆಂಕಿ ಮಂಗಳೂರಿಗೆ ಹತ್ತಿಕೊಳ್ಳಲಿಲ್ಲ. ಪೊಲೀಸರು ಸಹ ಚುರುಕಿನಿಂದ ಕಾರ್ಯಪ್ರವೃತ್ತರಾಗಿ ಬೆಂಕಿ ಹಚ್ಚಿದ ಬಜರಂಗಿಗಳನ್ನು ಕೆಲವೇ ಗಂಟೆಗಳಲ್ಲಿ ಬಂಧಿಸಿದರು.

ಎತ್ತಿ ಕಟ್ಟುವ ತಂತ್ರ


ಇದು ನಡೆದು ಎರಡೇ ದಿನದಲ್ಲಿ ಉಳ್ಳಾಲದ ಕಡಲ ಕಿನಾರೆಯಲ್ಲಿ ಗಲಭೆ ಹುಟ್ಟಿಹಾಕಿತು. 92ರ ಗಲಭೆಯಲ್ಲಿ ಬಿಜೆಪಿಗರ ದಾಳವಾಗಿ ಗಲಭೆಯಲ್ಲಿ ಭಾಗವಹಿಸಿ ಮುಸ್ಲಿಮರನ್ನು ದಮನಿಸಿದ್ದ ಮೊಗವೀರರು ಪೊಲೀಸ್ ಕೇಸು ಕೋರ್ಟು ಕಛೇರಿ ತಿರುಗಿ ಹೈರಾಣಾಗಿದ್ದರು. ನಂತರ ಮೊಗವೀರ ಸಂಘಟನೆಯ ಮುಂಖಂಡರುಗಳ ಪ್ರಜ್ಞಾವಂತಿಕೆ ಯಿಂದಾಗಿ ಹುಂಬು ಧೈರ್ಯದ ಸಾಹಸಿಗರಾದ ಮೊಗವೀರರು ಕೋಮು ಗಲಭೆಗಳಿಂದ ದೂರವೇ ಉಳಿದಿದ್ದರು. ಆನಂತರ ಬಿಲ್ಲವರು ಮತ್ತಿತರ ಹಿಂದುಳಿದ ಜಾತಿಗಳ ಯುವಕರನ್ನು ಸಾಮೂಹಿಕ ಸನ್ನಿಗೊಳಪಡಿಸಿ, ಬಜರಂಗಿಗಳನ್ನಾಗಿಸಿ, ದಶಕಗಳ ಕಾಲ ಕೋಮುಹಿಂಸೆಯನ್ನು ಬಿಜೆಪಿ ಜಾರಿಯಲ್ಲಿಟ್ಟಿತ್ತು. ಕಾಟಿಪಳ್ಳದ ಉದಯ ಪೂಜಾರಿ, ಹಿರಿಯಡ್ಕದ ಸುಧಾಕರ ಪೂಜಾರಿ ಉಚ್ಚಿಲ್‌ನ ಜಗದೀಶ್, ಪೊಳಲಿಯ ಅನಂತು ಮುಂತಾದ ಬಿಲ್ಲವ ಯುವಕರು ಬಿಜೆಪಿ ಚಿತಾವಣೆಯ ಕೋಮು ಕದನಗಳಿಗೆ ಬಲಿಯಾದರು. ಸಾವಿರಾರು ಯುವಕರು ಕೇಸ್‌ಗಳನ್ನು ಹಾಕಿಸಿಕೊಂಡು, ಪೊಲೀಸ್ ದಾಖಲೆಗಳಲ್ಲಿ 'ಕಮ್ಯೂನಲ್ ಗೂಂಡಾ' ಗಳೆಂದು ದಾಖಲಾದರು.

ಗಾಯಗೊಂಡವರು



ತಮ್ಮ ಬಡ ಹೆತ್ತವರ ಕಷ್ಟಗಳನ್ನು ಇನ್ನಷ್ಟು ಹೆಚ್ಚಿಸಿ ಬೀದಿ ಪಾಲಾದರು. ತಮ್ಮನ್ನು ಬಳಸಿಕೊಂಡ ಧರ್ಮ ಸಂರಕ್ಷಕರೆಂಬ ಸಂಘಟನೆಗಳ ಮುಖಂಡರು ದಿಡೀರ್ ಶ್ರೀಮಂತರಾದುದನ್ನು ಕಂಡು ಇತ್ತೀಚೆಗೆ ಗಲಭೆಗಳಿಂದ ದೂರವಾದರು.

ಇದನ್ನೆಲ್ಲಾ ಗಮನಿಸಿದ ಬಿಜೆಪಿ ಬಹಳ ಉಪಾಯದಿಂದ ಕರಾವಳಿಯ ಬಲಿಷ್ಠ ಓಟು ಬ್ಯಾಂಕ್ ಮೊಗವೀರರನ್ನು ತಮ್ಮ ತೆಕ್ಕೆಗೆ ತೆಗೆದುಕೊಳ್ಳುವ ಭಾಗವಾಗಿ ಮೀನುಗಾರಿಕೆಯಲ್ಲಿ ಪರಸ್ಪರ ಅವಲಂಬಿಸಿಕೊಂಡಿರುವ ಬ್ಯಾರಿಗಳು (ಮುಸ್ಲೀಮರು) ಮತ್ತು ಮೊಗವೀರರನ್ನು ಮತ್ತೊಮ್ಮೆ ಪರಸ್ಪರ ಎತ್ತಿಕಟ್ಟುವ ಭಾಗವಾಗಿ ಗಲಭೆಯನ್ನು ಹುಟ್ಟುಹಾಕಿದೆ.


ಮನೆಗೆ ಹಾನಿ

ಹಿಂದುಗಳ ಕಿಡಿಗೇಡಿತನ

ಮೊಗವೀರರ ಆಡಳಿತಕ್ಕೊಳಪಟ್ಟ ಉಳ್ಳಾಲದ ಭಾರತ್ ಕಾಲೇಜಿನ ವಾರ್ಷಿಕೋತ್ಸವ ದಲ್ಲಿ ಬ್ಯಾರಿ ಮತ್ತು ಮೊಗವೀರ ಪಡ್ಡೆ ಹುಡುಗರ ಸಣ್ಣ ಗಲಾಟೆಯನ್ನು ತನ್ನ ಉದ್ದೇಶ ಸಾಧನೆಗೆ ಬಳಸಿ ಕೋಮುಗಲಭೆಯನ್ನು ನಡೆಸಿ ಚುನಾವಣೆ ಯನ್ನು ಗೆಲ್ಲುವ ತವಕದಲ್ಲಿದೆ. ಕಾಲೇಜಿನಲ್ಲಿ ಮುಸ್ಲಿಂ ಹುಡುಗರ ಕಿಡಿಗೇಡಿತನವನ್ನು ಮೊಗವೀರರ ಸ್ವಾಭಿಮಾನಕ್ಕೆ ಬಿದ್ದ ಪೆಟ್ಟು ಎಂದು ಮೊಗವೀರರ ತಲೆ ಕೆಡಿಸಿದ್ದರಿಂದ ಮುಸ್ಲಿಮರ ಮೇಲೆ ಪ್ರತೀಕಾರದ ದಾಳಿಗಳನ್ನು ನಡೆಸಿದರು. ಇದಕ್ಕೆ ಪ್ರತೀಕಾರವಾಗಿ ಮುಸ್ಲೀಮರಲ್ಲಿರುವ ಕಿಡಿಗೇಡಿಗಳು ಅಮಾಯಕ ದಾರಿಹೋಕರ ಮೇಲೆ ಹಲ್ಲೆ ನಡೆಸಿದುದರಿಂದ ಉಳ್ಳಾಲ ಮತ್ತೊಮ್ಮೆ ಅಗ್ನಿಪರ್ವತದ ಮೇಲೆ ನಿಂತಿದೆ. ದೊಡ್ಡ ಗಲಭೆ ನಡೆಯದಿದ್ದರೂ ಮೊಗವೀರರನ್ನು ಮತ್ತೊಮ್ಮೆ ಬ್ಯಾರಿಗಳ ವಿರುದ್ಧ ರಣರಂಗಕ್ಕೆ ಇಳಿಸಿದ ತೃಪ್ತಿಯೊಂದಿಗೆ ಬಿಜೆಪಿ ಚುನಾವಣೆಯನ್ನು ಗೆಲ್ಲುವ ಲೆಕ್ಕಾಚಾರದಲ್ಲಿ ತೊಡಗಿವೆ.

ಉಳ್ಳಾಲದಲ್ಲಿ ಹೇಳಿಕೊಳ್ಳುವ ಗಲಭೆಗಳು ನಡೆಯದಿದ್ದರೂ ಮೊಗವೀರರು ಕೋಮುಗಲಭೆಯಲ್ಲಿ ಭಾಗವಹಿಸಿದರೆ ಆಗುವ ಅನಾಹುತವನ್ನು ಅರಿತಿರುವ ಪೊಲೀಸರು ಉಳ್ಳಾಲದಾದ್ಯಂತ ಅಘೋಷಿತ ಕರ್ಫ್ಯೂ ವಾತಾವರಣವನ್ನು ಸೃಷ್ಟಿಸಿದರು. ಅಂಗಡಿ ಮುಂಗಟ್ಟುಗಳನ್ನು ಉಳ್ಳಾಲ ಮಾತ್ರವಲ್ಲದೆ ಗಲಾಟೆಯ ಲಕ್ಷಣಗಳೇ ಇಲ್ಲದೇ ತೊಕ್ಕೊಟ್ಟು ಮುಂತಾದೆಡೆ ಬಂದ್ ಮಾಡಿಸಿ ಜನರಲ್ಲಿ ಭಯಭೀತಿಯನ್ನುಂಟು ಮಾಡಿದರು.

ಈ ನಡುವೆ ಮೊಗವೀರರ, ಬ್ಯಾರಿಗಳ ಮೊಹಲ್ಲಾಗಳಿಗೆ ನುಗ್ಗಿದ ಪೊಲೀಸ್ ಪಡೆ ಮನೆಗಳಿಗೆ ಅರ್ಧ ರಾತ್ರಿಯಲ್ಲಿ ದಾಳಿ ಇಕ್ಕಿ ಸಿಕ್ಕ ಸಿಕ್ಕವರನ್ನು ಎಳೆದೊಯ್ದರು. ಪೊಲೀಸರ ರೌದ್ರಾವತಾರ ಅಘೋಷಿತ ಕರ್ಫ್ಯೂಗಳ ಬಗ್ಗೆ ತಿಳಿಯದೆ ಮಂಗಳೂರಿಗೆ ಕೆಲಸಕ್ಕೆ ತೆರಳಿದ್ದ ಕಾರ್ಮಿಕರು ವಾಪಸ್ಸು ಬರುವಾಗ ಪೊಲೀಸರ ಕೈಗೆ ಸಿಕ್ಕಿಬಿದ್ದು ಲಾಕಪ್ ಸೇರಿದರು.

ಹಳೇ ದ್ವೇಷ ಸಾಧನೆ

ಅದಕ್ಕಾಗಿ ಮುಸ್ಲೀಮರ ಮೇಲೆ ದೌರ್ಜನ್ಯವೆಸಗಿದ ಪೊಲೀಸರು ಹಳೆಯ ದ್ವೇಷವನ್ನು ಸಾಧಿಸಿ ಕಳೆದ ಕೋಮುಗಲಭೆಯ ಸಂದರ್ಭದಲ್ಲಿ ನಡೆದ ಪೊಲೀಸ್ ದೌರ್ಜನ್ಯವನ್ನು ವಿರೋಧಿಸಿದವರನ್ನು ಈ ಸಲದ ಗಲಭೆಯ ಕೇಸ್‌ಗಳಿಗೆ ಬುಕ್ ಮಾಡಿದರು ಎಂಬ ಆರೋಪ ಕೇಳಿಬರುತ್ತಿದೆ. ಇದಕ್ಕೆ ಪೂರಕವೆಂಬಂತೆ ಮುಖಂಡ ಜೆ.ಮಹಮ್ಮದ್ ಸಹಿತ 50ಕ್ಕೂ ಹೆಚ್ಚು ಮಂ[…] ಬಳ್ಳಾರಿ ಜೈಲು ಸೇರಿದ್ದಾರೆ. ಪೊಲೀಸರು ಅತಿರೇ[…] ವಹಿಸಿರುವುದು. ಮುಸ್ಲಿಮರ ಮೇ[…] ಪೂರ್ವದ್ವೇಷದಿಂದ ನಡೆದುಕೊಂಡಿರುವುದ[…] ಮೇಲ್ನೋಟಕ್ಕೆ ಕಣ್ಣಿಗೆ ರಾಚುತ್ತದೆ. ಇದೆಲ್ಲ ಮುಗಿ[…] ಮೇಲೆ ಜಿಲ್ಲಾಧಿಕಾರಿ ಯಥಾಪ್ರಕಾರ ಶಾಂತಿ ಸ[…] ನಡೆಸಿದ್ದಾರೆ. ಗಲಭೆಯ ಬಲಿಪಶುಗಳು ತಮ[…] ಗೋಳು ತೋಡಿಕೊಂಡರೆ, ... ತಾ[…] ಹೇಳಬೇಕಾದುದನ್ನು "ಹರಕೆಯ ಕುರಿ" ಬಜರಂ[…] ಕ್ರೈಸ್ತ ಫ್ರಾಂಕ್ಲಿನ್ ಮೊಂತೆರೋ ಬಾಯಿಯಲ್ಲಿ ಹೇಳಿ[…] ತಾವು ಮಾತ್ರ ಕಾಂಗ್ರೆಸ್ಸಿಗರೇ ನಾಚುವಂತೆ ಮಹಾ[…] ಶಾಂತಿ ಪ್ರಿಯರು, ಜಾತ್ಯಾತೀತರು ಎಂಬ ಪೋಸ[…] ನೀಡಿದರ[…] ಶಾಂತಿ ಸ[…] ಮುಗಿದ[…] ಹೊರಬರುತ್ತಿದ್ದ[…] ಬಿಜೆ[…] ಮುಖಂಡರ[…] ಭಜರಂಗಿಗಳೊ[…] ಸಮಾಲೋಚ[…] ನಡೆಸಿದರ[…] ಸೆಕ್ಯುಲರ್[…] ಕಾಂಗ್ರೆಸ್ಸಿಗರ[…] ಕೆ ದ ನ[…] ಕುತೂಹಲಿ ಕೆಎಫ್‌ಡಿ ಮುಖಂಡರೊಂದಿಗೆ ಗು[…] ಸಮಾಲೋಚನೆ ನಡೆಸಿದರು. ಇದನ್ನೆಲ್ಲ ಗಮನಿಸಿದ[…] ಕರಾವಳಿಗೆ ಸದ್ಯಕ್ಕೆ ಕೊಳ್ಳಿ ದೆವ್ವಗಳ ಕಾಟ ನಿಲ್ಲು[…] ಲಕ್ಷಣಗಳು ಇಲ್ಲ. ಮೊಗವೀರ ಮುಂದಾಳುಗಳ[…] ಮತ್ತೆ ಸಕ್ರಿಯರಾಗಿ ತಮ್ಮ ಯುವಕರನ[…] ಬಜರಂಗಿಗಳ ಹಿಡಿತದಿಂದ ಹೊರ ತರಬೇಕಾಗಿದ[…] ಬಿಲ್ಲವ ನಾಯಕರುಗಳು ಬರೀ ನಾರಾಯಣ[…] ಗುರುವಿನ ಹೆಸರನ್ನು ಹೇಳುವುದನ್ನು ಬಿಟ್ಟು ಗುರುವಿ[…] ಆಶಯವನ್ನು ಯುವಕರಿಗೆ ಹೇಳಿಕೊಡಬೇಕಾಗಿದ[…]

ಮುನೀರ್ ಕಾಟಿಪ[…]

ಹ್ಹ...ಹ್ಹಾ...ಹ್ಹಾ...

ಆತ್ಮವಂಚನೆ

ಕಲ್ಕುಳಿ ವಿಠ್ಠಲ ಹೆಗಡೆ ಎಂಬ[…] ಹೋರಾಟಗಾರರ ಬಗೆಗೆ ತಾವು ಕೇಳಿರಬಹುದು. ಅವರು ಜನಪರ ಪರಿಸರವಾದಿಗಳಂತೆ. ಇರಲಿ[…] ಅವರು ಜನಪರವಾಗಿರುವುದಕ್ಕೂ[…] ಪರಿಸರವಾದಿಗಳಾಗಿರುವುದಕ್ಕೂ ನಮ್ಮ[…] ಆಕ್ಷೇಪವೇನಿಲ್ಲ. ಕೋಮು ಸೌಹಾರ್ದ ಅದು ಇದು[…] ಅಂತ ಅವರು ಸಕ್ರಿಯ. ಅದೂ ಒಳ್ಳೆಯದೇ. ಆದರೆ ಅವರ 'ಒಳಗಿನ' ನಿಜವಾದ ರಾಜಕೀಯ[…] ಬಣ್ಣ ಏನೂ ಅಂತ ಕೆಲವರಿಗೆ ಇನ್ನೂ ಪ್ರಶ್ನೆಯಿತ್ತು. ಇದೊಂದು ವಿಷಯ ಕೇಳಿದರೆ ಪ್ರಶ್ನೆಗೆ ಉತ್ತರ[…] ಸಿಗಬಹುದೇನೋ?

ಪ್ರಜಾವಾಣಿ ಪತ್ರಿಕೆಯಲ್ಲಿ ಅವರು ಮೊನ್ನೆ[…] ಒಂದು ಲೇಖನ ಬರೆದಿದ್ದಾರೆ. "ಗಿರಿಜನರಲ್ಲಿ[…] ಆಶಾಕಿರಣ ಮೂಡಿಸಿದ ಅರಣ್ಯ ಕಾಯ್ದೆ" ಅಂತ[…] ಅದರ ತಲೆಬರಹ. ಸರಿಯಾಗಿಯೇ ಇದೆ. ಅದರಲ್ಲೂ ತಪ್ಪೇನಿಲ್ಲ. ಲೇಖನದಲ್ಲಿ ಹೇಳದೇ[…] 'ತಪ್ಪಿ' ಹೋಗಿರುವ ಮುಖ್ಯ ಅಂಶ ಒಂದಿದೆ. ಅರಣ್ಯ, ಆದಿವಾಸಿಗಳು ಅಂತಾ ಬ್ರಿಟಿಷ್ ಪೂರ್ವ ಚರಿತ್ರೆಯಿಂದ ಆರಂಭಿಸಿ[…] ವರ್ತಮಾನದವರೆಗೆ ಬರುವ ಇವರಿಗೆ ಈ ಕಾಯ್ದೆ[…] ರೂಪುಗೊಳ್ಳಲು ದೇಶದ ಎಡಪಕ್ಷಗಳು ವಹಿಸಿದ[…] ಪಾತ್ರವೇ ಕಣ್ಣಿಗೆ ಬಿದ್ದಿಲ್ಲ. ಕಾಯ್ದೆ[…] ರೂಪಿಸಬೇಕೆಂದು ರಾಷ್ಟ್ರವ್ಯಾಪಿ ಚಳುವಳಿ[…] ಮಾಡಿ, ಕಾಯ್ದೆಯ ಕಲಮು, ಕಲಮೂ[…] ಜನಪರವಾಗಿರಬೇಕೆಂದು ಗುದ್ದಾಡಿ, ಇದೀಗ[…] ಅಂತಿಮ ಅಧಿಸೂಚನೆ ಹೊರಡಿಸುವವರೆಗೂ[…] ಬಡಿದಾಡಿದವರೇ ಇವರಿಗೆ ನೆನಪಾಗುವುದಿಲ್ಲ[…] ಎಂದರೆ? ಈ ತರದ ಆತ್ಮವಂಚನೆ ನೋಡಿದರೆ[…] ನಗುಬರುತ್ತದೆ. ಅಲ್ಲವೇ?

ಬಿಲ್ಕಿಸ್ ಬಾನೊ ಮೊಕದ್ದಮೆ ತೀರ್ಪು :

ಮೋದಿ ಸರಕಾರದ ಕರಾಳ ಸ್ವರೂಪಕ್ಕೆ ಮತ್ತೊಂದು ಸಾಕ್ಷಿ

ಇತ್ತೀಚೆಗೆ ಗುಜರಾತಿನಲ್ಲಿ ಬಿಜೆಪಿ ಮತ್ತೆ ಅಧಿಕಾರಕ್ಕೆ ಬಂದ ನಂತರ ಕರ್ನಾಟಕವನ್ನು ಗುಜರಾತ್ ಮಾಡುತ್ತೇವೆ ಎಂಬ ಘೋಷಣೆ ಇನ್ನಷ್ಟು ಜೋರಾಗಿ ಕೇಳಬರುತ್ತಿದೆ. ಅದರ ನಿಜವಾದ ಅರ್ಥವೇನು ಎಂಬುದನ್ನು ಆ ರಾಜ್ಯದ ಹೊರಗೆ ವಿಚಾರಣೆ ನಡೆಸಬೇಕಾಗಿ ಬಂದ ಇನ್ನೊಂದು ಮೊಕದ್ದಮೆಯ ಈ ತೀರ್ಪು ಈಗ ಮತ್ತೊಮ್ಮೆ ನೆನಪಿಸಿದೆ. ಕರ್ನಾಟಕದ ಜನತೆ ಎಚ್ಚರದಿಂದಿರಬೇಕು.

ಕೊನೆಗೂ 2002ರಲ್ಲಿ ಗುಜರಾತಿನಲ್ಲಿ ನಡೆದ ಕೋಮುವಾದಿ ನರಮೇಧದ ಸಾವಿರಾರು ಘಟನೆಗಳಲ್ಲಿ ಒಂದರಲ್ಲಿ ನ್ಯಾಯ ದೊರೆತಿರುವಂತೆ ಕಾಣುತ್ತದೆ. ಬಿಲ್ಕಿಸ್ ಬಾನೊ ಮೊಕದ್ದಮೆಯಲ್ಲಿ ಹನ್ನೊಂದು ಮಂದಿಗೆ ಜೀವಾವಧಿ ಶಿಕ್ಷೆಯಾಗಿದೆ. ಒಬ್ಬ ಪೋಲೀಸ್ ಅಧಿಕಾರಿಗೆ ಈ ಘೋರ ಕೃತ್ಯದಲ್ಲಿ ಶಾಮೀಲಾಗಿರುವ ಅಪರಾಧಕ್ಕೆ ಮೂರು ವರ್ಷಗಳ ಕಠಿಣ ಶಿಕ್ಷೆಯಾಗಿದೆ. ಈ ತೀರ್ಪು ಕೂಡಾ ಗುಜರಾತಿನ ಹೊರಗೆ ನಡೆದ ವಿಚಾರಣೆಯಿಂದ ಮಾತ್ರ ಸಾಧ್ಯವಾಗಿದೆ ಎಂಬುದು ಗಮನಾರ್ಹ.

ಅಮಾನವೀಯತೆಯ ಶಿಖರ

2002ರ ಗುಜರಾತ್ ನರಮೇಧದ ಈ ಅತ್ಯಂತ ಅಮಾನವೀಯ ಕೃತ್ಯ ನಮ್ಮ ಓದುಗರಿಗೆ ನೆನಪಿರಬಹುದು. ಮಾರ್ಚ್ 3, 2002 ರಂದು ದಾಹೋಡ್ ಜಿಲ್ಲೆಯಲ್ಲಿ ಕೋಮು ಗಲಭೆಗಳಿಗೆ ತುತ್ತಾದ ರಂದಿಕ್‌ಪುರ ಎಂಬಲ್ಲಿ ಗಲಭೆಗಳಿಂದ ಪಾರಾಗಲು ಯತ್ನಿಸುತ್ತಿದ್ದ ಒಂದು ಕುಟುಂಬದ ಮೇಲೆಎರಡು ಜೀಪುಗಳಲ್ಲಿ ಬಂದ 12 ಮಂದಿ ಎರಗಿ ನರಮೇಧ,

> ಬಿಲ್ಕಿಸ್‌ಬಾನೋ ಪ್ರಕರಣದ ತೀರ್ಪೇನೋ ಹೊರಬಿತ್ತು. ಉಳಿಧ ಪ್ರಕರಣಗಳ ಕತೆ ಏನು?

ಮಹಿಳೆಯರ ಮೇಲೆ ಅತ್ಯಾಚಾರಕ್ಕಿಳಿದರು. ಆರು ತಿಂಗಳ ಗರ್ಭಿಣಿ ಬಿಲ್ಕಿಸ್ ಬಾನೊ ಮೇಲೆ ಸಾಮೂಹಿಕ ಅತ್ಯಾಚಾರ ನಡೆಯಿತು. ಮೂರ್ಛಿತಳಾದ ಆಕೆಗೆ ಎಚ್ಚರವಾದಾಗ ಸುತ್ತಲೂ ಕುಟುಂಬದ ಸದಸ್ಯರ ಹೆಣಗಳು ಬಿದ್ದಿದ್ದವು. ಪಕ್ಕದಲ್ಲೇ ಮೂರು ವರ್ಷದ ಆಕೆಯ ಮೊದಲ ಮಗು ಕೂಡಾ ತಲೆ ಜಜ್ಜಲ್ಪಟ್ಟು ಸತ್ತು ಬಿದ್ದಿತ್ತು. ಆಕೆಯ ಕುಟುಂಬದ ಒಟ್ಟು 14 ಮಂದಿಯ ಕೊಲೆ ಯಾಯಿತು. ಇದರಲ್ಲಿ ಆರು ಮಹಿಳೆಯರು ಮತ್ತು ನಾಲ್ಕು ಮಕ್ಕಳು. ಬಿಲ್ಕಿಸ್ ಬಾನೊ ಎದೆಗುಂದಲಿಲ್ಲ. ಈ ಘೋರ ಅಪರಾಧಗಳಿಗೆ ಶಿಕ್ಷೆಯಾಗ ಬೇಕು ಎಂದು ಪೋಲೀಸ್ ಸಿಬ್ಬಂದಿ ಮತ್ತು


ಬಿಲ್ಕಿಸ್ ಬಾನೋ

ವೈದ್ಯಾಧಿಕಾರಿಗಳು ಸೇರಿದಂತೆಇಪ್ಪತ್ತು ಮಂದಿಯ ಮೇಲೆ ಪೋಲೀಸ್ ಠಾಣೆಯಲ್ಲಿ ದೂರು ನೀಡಿದಳು. ಆರಂಭದಲ್ಲಿ ದೂರು ದಾಖಲಿಸಿಕೊಳ್ಳಲು ಕೂಡಾ ನಿರಾಕರಿಸಿದ ಪೋಲೀಸರ ವರ್ತನೆಗಳಿಂದ ಪೋಲೀಸರು ಮತ್ತು ಆಡಳಿತ ಆಪಾದಿತರೊಂದಿಗೆ ಶಾಮೀಲಾಗಿರುವುದು ಕಂಡು ಬಂದಾಗ ಬಿಲ್ಕಿಸ್ ಕೋಮುವಾದಿಗಳ ಬೆದರಿಕೆಗಳಿಗೆ, ಆಮಿಷಗಳಿಗೆ ಮಣಿಯದೆ ನ್ಯಾಯಾಂಗದ ಮೊರೆ ಹೋದಳು. ಸುಪ್ರೀಂ ಕೋರ್ಟ್ ಡಿಸೆಂಬರ್ 2003ರಲ್ಲಿ ಈ ಮೊಕದ್ದಮೆಯ ತನಿಖೆಯನ್ನು ಸಿಬಿಐಗೆ ಒಪ್ಪಿಸಿ ಗುಜರಾತದಲ್ಲಿ ನ್ಯಾಯ ಸಿಗಲಿಕ್ಕಿಲ್ಲ ಎಂಬ ಸಂದೇಹದಿಂದಾಗಿ ಮೊಕದ್ದಮೆಯನ್ನು ಮಹಾರಾಷ್ಟ್ರಕ್ಕೆ ವರ್ಗಾಯಿಸಲಾಯಿತು ಮುಂಬೈಯ ವಿಶೇಷ ನ್ಯಾಯಾಲಯ ಈ ಬಗ್ಗೆ ದೀರ್ಘ ವಿಚಾರಣೆಯ ನಂತರ ಕಳೆದ ವಾರ ತೀರ್ಪು ನೀಡಿದೆ. ಈ ಹೀನ ಕೃತ್ಯ ನಡೆಸಿದವರಿಗೆ ಜೀವಾವಧಿ ಶಿಕ್ಷೆಯಾಗಿದೆ. ಒಬ್ಬ ಆರೋಪಿ ಈ ನಡುವೆ ಸತ್ತಿದ್ದು ಈ ಘೋರ ಕೃತ್ಯದಲ್ಲಿ ಶಾಮೀಲಾಗಿ ದ್ದರು ಎಂದು ಆಪಾದನೆ ಗೊಳಗಾದ ಆರು ಪೋಲೀಸ್ ಸಿಬ್ಬಂದಿಗಳಲ್ಲಿ ಒಬ್ಬನಿಗೆ ಮೇಲೆ ಹೇಳಿದಂತೆ ಮೂರು ವರ್ಷಗಳ ಕಠಿಣ ಸಜೆ ಯಾಗಿದೆ. ಆದರೆ ಇತರ ಐವರು ಮತ್ತು ಸುಳ್ಳು ಪ್ರಮಾಣ ಪತ್ರ ನೀಡಿದ ಆಪಾದನೆಗೊಳಗಾಗಿದ್ದ ಇಬ್ಬರು ವೈದ್ಯರನ್ನು ಸರಿಯಾದ ಆಧಾರಗಳಿಲ್ಲವೆಂದು ಖುಲಾಸೆ ಮಾಡಲಾಗಿದೆ.

ಇನ್ನೂ ಇವೆ

ಇದು ಸುಪ್ರಿಂ ಕೋರ್ಟ್ ಸಿಬಿಐ ತನಿಖೆ ಮಾಡಬೇಕೆಂದು ನಿರ್ದಿಷ್ಟವಾಗಿ ನಿರ್ದೇಶಿಸಿದ ಆರು ಘಟನೆಗಳಲ್ಲಿ ಒಂದು. ಅವುಗಳಲ್ಲಿ ಒಂದಾದ ಬೆಸ್ಟ್ ಬೇಕರಿ ಮೊಕದ್ದಮೆಯ ನಂತರ ಈಗಷ್ಟೇ ಈ ಮೊಕದ್ದಮೆಯ ತೀರ್ಪು ಬಂದಿದೆ. ಆದರೆ ಆರು ವರ್ಷಗಳು ಕಳೆದರೂ ಉಳಿದ ಮೊಕದ್ದಮೆಗಳಲ್ಲಿ ನ್ಯಾಯ ಇನ್ನೂ ದೊರೆತಿಲ್ಲ. ನರೋದಾ ಪತಿಯಾ ನರಮೇಧ ಮತ್ತು ಅಹಮದಾಬಾದಿನಲ್ಲೇ ಕೈಕಾಲುಗಳನ್ನು ಕಡಿದು ಜೀವಂತ ದಹಿಸಲ್ಪಟ್ಟ ಮಾಜಿ ಸಂಸತ್ ಸದಸ್ಯ ಎಹಸಾನ್ ಜಾಫ್ರಿಯವರ ಕುಟುಂಬದವರು ಇನ್ನೂ ನ್ಯಾಯಾಲಯದ ಬಾಗಿಲು ಬಡಿಯುತ್ತಿದ್ದಾರೆ. ಇವುಗಳಲ್ಲಿ ಹೆಚ್ಚಿನವು ವಿಚಾರಣೆಯ ಹಂತವನ್ನೂ ತಲುಪಿಲ್ಲ ಎಂಬುದನ್ನು ಗಮನಿಸಬೇಕು. ಇದಕ್ಕೆ ಮೊದಲು ಗುಜರಾತಿನ ಮೋದಿ ಸರಕಾರ 1600ಕ್ಕೂ ಹೆಚ್ಚು ಮೊಕದ್ದಮೆಗಳನ್ನು ಸಾಕ್ಷಿಗಳಿಲ್ಲ ಎಂದು ಹೇಳಿ ಮುಚ್ಚಿ ಬಿಟ್ಟಿತ್ತು, ಸುಪ್ರಿಂ ಕೋರ್ಟಿನ ಮಧ್ಯಪ್ರವೇಶದಿಂದಾಗಿ ಇಂತಹ ಕೆಲವು ಮೊಕದ್ದಮೆಗಳನ್ನು ಮತ್ತೆ ತೆರೆಯಲಾಯಿತು.

ಈಗಲೂ ಹಲವಾರು ಮೊಕದ್ದಮೆಗಳು ನ್ಯಾಯಲಯಗಳ ಮುಂದಿವೆ. ಗೋಧ್ರಾ ರೈಲು ಸುಟ್ಟ ಕೇಸಿನಲ್ಲಿ 84 ಜನರನ್ನು ಪೋಟಾದ ಅಡಿಯಲ್ಲಿ ಬಂಧಿಸಲಾಗಿತ್ತು. ಆದರೆ ಕೇಂದ್ರೀಯ ಪರಾಮರ್ಶೆ ಸಮಿತಿ ಇದು ಪೋಟಾದ ಅಡಿಯಲ್ಲಿ ಬರುವುದಿಲ್ಲ ಎಂದು ಹೇಳಿತ್ತು. ನಂತರ ಸುಪ್ರಿಂ ಕೋರ್ಟ್ ಈ ಆಪಾದಿತರು ಜಾಮೀನು ಅರ್ಜಿ ಸಲ್ಲಿಸಬಹುದು

ಪುಟ 12 ಕ್ಕೆ

ಸಿಪಿಐ(ಎಂ)ನ 19ನೇ ಮಹಾಧಿವೇಶನದ ರಾಜಕೀಯ ನಿರ್ಣಯದ ಕರಡು ಪ್ರಕಟ


'ಮೂರನೇ ಪರ್ಯಾಯ ಬೆಸೆಯುವುದು ಅಗತ್ಯ'

'ಕಾಂಗ್ರೆಸ್ ಮತ್ತು ಬಿಜೆಪಿ ನೇತೃತ್ವದ ಕೂಟಗಳಿಗೆ ಒಂದು ಪರ್ಯಾಯ ಬೇಕೇ ಬೇಕು. ಇದಕ್ಕೆ ಎಡ ಪಕ್ಷಗಳೇ ಮುಂದಾಗಬೇಕು. ಇದಕ್ಕಾಗಿ ಒಂದು ಮೂರನೇ ಪರ್ಯಾಯವನ್ನು ಬೆಸೆಯುವುದು ಅಗತ್ಯ. ಇಂತಹ ಒಂದು ವೇದಿಕೆ ಒಂದು ಸುಸಂಗತ ಕೋಮುವಾದ-ವಿರೋಧಿ ಕಣ್ಣೋಟದ ಮೇಲೆ ಆಧಾರಿತವಾಗಿದ್ದು ಜನಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಕೈಗೆತ್ತಿಕೊಳ್ಳಬೇಕು ಹಾಗೂ ಜನಪರ ಆರ್ಥಿಕ ಕ್ರಮಗಳನ್ನು ಪ್ರತಿಪಾದಿಸಬೇಕು; ಅದು ಸಾಮಾಜಿಕ ಕಲ್ಯಾಣಕ್ಕೆ ಮತ್ತು ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಬಲಪಡಿಸಲು ಏರ್ಪಾಟು ಮಾಡಬೇಕು; ರಾಷ್ಟ್ರೀಯ ಸಾರ್ವಭೌಮತೆಯ ರಕ್ಷಣೆ ಮತ್ತು ಸ್ವತಂತ್ರ ವಿದೇಶಾಂಗ ನೀತಿಯಿರಬೇಕು? ಎಂದು ಸಿಪಿಐ(ಎಂ)ನ ಕರಡು ರಾಜಕೀಯ ನಿರ್ಣಯ ಹೇಳಿದೆ.

ದೇಶದ ಪ್ರಮುಖ ಎಡ ಪಕ್ಷವಾದ ಸಿಪಿಐ(ಎಂ)ನ 19 ನೇ ಮಹಾಧಿವೇಶನ ಕೊಯಮತ್ತೂರಿನಲ್ಲಿ ಮಾರ್ಚ್ 29ರಿಂದ ಎಪ್ರಿಲ್3 ರವರೆಗೆ ನಡೆಯಲಿದೆ. ಅಲ್ಲಿ ಅಂಗೀಕರಿಸಬೇಕಾದ ರಾಜಕೀಯ ನಿರ್ಣಯದ ಕರಡನ್ನು ಜನವರಿ 20ರಂದು ಪಕ್ಷದ ಪ್ರಧಾನ ಕಾರ್ಯದರ್ಶಿ ಪ್ರಕಾಶ್ ಕಾರಟ್ ಬಿಡುಗಡೆ ಮಾಡಿದರು. ಇನ್ನೊಬ್ಬ ಪೊಲಿಟ್ ಬ್ಯೂರೊ ಸದಸ್ಯರಾದ ಸೀತಾರಾಂ ಯೆಚೂರಿಯವರು ಕೂಡ ಜತೆಗಿದ್ದರು. ಮೂರು ವರ್ಷಕ್ಕೊಮ್ಮೆ ನಡೆಯುವ ಪಕ್ಷದ ಮಹಾಧಿವೇಶನ ಹಿಂದಿನ ಅವಧಿಯ ಬೆಳವಣಿಗೆಗಳ, ಅನುಭವಗಳ ಪರಾಮರ್ಶೆ ನಡೆಸಿ ಮುಂದಿನ ಅವಧಿಯಲ್ಲಿ ತನ್ನ ಧೋರಣೆಯ ದಿಕ್ಕನ್ನು ರೂಪಿಸಿಕೊಳ್ಳುತ್ತದೆ. ಇದಕ್ಕಾಗಿ ಒಂದು ರಾಜಕೀಯ ನಿರ್ಣಯವನ್ನು ಅಂಗೀಕರಿಸುತ್ತದೆ. ಪಕ್ಷದ ಕೇಂದ್ರ ಸಮಿತಿ ಈ ನಿರ್ಣಯದ ಕರಡನ್ನು ತಯಾರಿಸಿ ಮಹಾಧಿವೇಶನದ ಎರಡು ತಿಂಗಳ ಮೊದಲು ಇಡೀ ಪಕ್ಷದಲ್ಲಿ ಚರ್ಚೆಗಾಗಿ ಬಿಡುಗಡೆ ಮಾಡುತ್ತದೆ.

'ಎಡಪಕ್ಷಗಳು ಮತ್ತು ಸಿಪಿಐ(ಎಂ)ಗೆ ಒಂದು ಕಾಂಗ್ರೆಸ್ಸೇತರ, ಬಿಜೆಪಿಯೇತರ ಪರ್ಯಾಯವನ್ನು ರಚಿಸುವ ಪ್ರಕ್ರಿಯೆಯನ್ನು ಆರಂಭಿಸುವ ಒಂದು ಜವಾಬ್ದಾರಿಯಿದೆ' ಎಂದು ಕರಡು ನಿರ್ಣಯವನ್ನು ಬಿಡುಗಡೆ ಮಾಡುತ್ತಾ ಹೇಳಿದ ಪ್ರಕಾಶ್ ಕಾರಟ್ ರವರು 'ನಾವು ಈ ಪಕ್ಷಗಳ ಧೋರಣೆಗಳನ್ನು ಒಪ್ಪುವುದಿಲ್ಲವಾದ್ದರಿಂದ ಇದು ಅಗತ್ಯ' ಎಂದರು.

ಕರಡು ರಾಜಕೀಯ ನಿರ್ಣಯ ಬಿಡುಗಡೆ ಸಮಾರಂಭದ ದೃಶ್ಯ



ಇದು ಕೇವಲ ಚುನಾವಣಾ ಮೈತ್ರಿಯ ಮಟ್ಟಕ್ಕೆ ಇಳಿಯುವುದಿಲ್ಲ, ಬದಲಿಗೆ ಕಾಂಗ್ರೆಸ್ ಮತ್ತು ಬಿಜೆಪಿಗಿಂತ ಸಂಪೂರ್ಣ ಭಿನ್ನವಾದ ಧೋರಣೆಗಳನ್ನು ಕುರಿತಂತೆ ಒಂದು ದೀರ್ಘಕಾಲೀನ ಆಧಾರದಲ್ಲಿ ಒಂದು ಚುನಾವಣಾ ಒಡಂಬಡಿಕೆಯ ಮೇಲೆ ಗಮನ ಕೇಂದ್ರೀಕರಿಸುತ್ತದೆ ಎಂದು ಅವರು ವಿವರಿಸಿದರು. ಸಿಪಿಐ(ಎಂ) ಬಿಜೆಪಿಯನ್ನು ಏಕಾಂಗಿಯಾಗಿಸುವ ಮತ್ತು ಸೋಲಿಸುವ ಕಾರ್ಯತಂತ್ರಗಳನ್ನು ಮುಂದುವರೆಸುತ್ತದೆ ಎಂದ ಅವರು ಆದರೆ ಕಾಂಗ್ರೆಸ್‌ನೊಂದಿಗೆ ಯಾವುದೇ ಮೈತ್ರಿ ಮಾಡಿಕೊಳ್ಳುವುದಿಲ್ಲ ಎಂದರು.

ಪಕ್ಷದ ಮುಂದಿನ ದಿಕ್ಕು ಮತ್ತು ಕರ್ತವ್ಯಗಳ ಬಗ್ಗೆ ಹೇಳುತ್ತಾ ಕರಡು ನಿರ್ಣಯ ನಾಲ್ಕು ಮುಖ್ಯ ಅಂಶಗಳನ್ನು ಗುರುತಿಸಿದೆ.

- ರಾಷ್ಟ್ರೀಯ ಸಾರ್ವಭೌಮತೆಯನ್ನು ರಕ್ಷಿಸಲು, ನವ-ಉದಾರವಾದಿ ಧೋರಣೆಗಳನ್ನು ಪ್ರತಿರೋಧಿಸಲು, ದುಡಿಯುವ ಜನಗಳ ಹಿತಾಸಕ್ತಿಗಳನ್ನು ರಕ್ಷಿಸಲು ಪಕ್ಷ ಹೋರಾಡುತ್ತದೆ ಮತ್ತು ಪರ್ಯಾಯ ಧೋರಣೆಗಳಿಗಾಗಿ ದುಡಿಯುತ್ತದೆ.
- ದೇಶದಲ್ಲಿ ಕೋಮುವಾದಿ ಶಕ್ತಿಗಳ ಮುಂಚೂಣಿಯಲ್ಲಿರುವ ಬಿಜೆಪಿ-ಆರೆಸ್ಸೆಸ್ ಕೂಟವನ್ನು ಜನಗಳಿಂದ ದೂರಮಾಡಲು ಪಕ್ಷ ಸರ್ವಪ್ರಯತ್ನ ನಡೆಸುತ್ತದೆ.
- ಭಾರತವನ್ನು ತನ್ನ ಸಾಮರಿಕ ಮಿತ್ರನಾಗಿ ಪರಿವರ್ತಿಸುವ ಅಮೆರಿಕನ್ ಸಾಮ್ರಾಜ್ಯಶಾಹಿಯ ಹುನ್ನಾರಗಳನ್ನು ವಿಫಲಗೊಳಿಸಲು ಪಕ್ಷ ಎಲ್ಲಾ ದೇಶಪ್ರೇಮಿ ಹಾಗೂ ಪ್ರಜಾಪ್ರಭುತ್ವವಾದಿ ಶಕ್ತಿಗಳನ್ನು ಅಣಿನೆರೆಸುತ್ತದೆ.
- ದಲಿತರು, ಬುಡಕಟ್ಟು ಜನಗಳು, ಮಹಿಳೆಯರು , ಅಲ್ಪಸಂಖ್ಯಾತರು ಮತ್ತು ಇತರ ದಮನಕ್ಕೊಳಗಾಗಿರುವ ಜನವಿಭಾಗ ಗಳಿಗೆ ಸಾಮಾಜಿಕ ನ್ಯಾಯವನ್ನು ಪ್ರತಿಪಾದಿಸುತ್ತದೆ. ಈ ಸಾಮಾಜಿಕ ಸನ್ನದು ಎಡ ಮತ್ತು ಪ್ರಜಾಪ್ರಭುತ್ವವಾದಿ ಕಾರ್ಯಕ್ರಮದ ಭಾಗ.

ಪ್ರಕಾಶ್ ಕಾರಟ್‌ರವರು ಪ್ರಶ್ನೆಯೊಂದಕ್ಕೆ ಉತ್ತರಿಸುತ್ತಾ, ಮೂರನೇ ಪರ್ಯಾಯ ಕೇವಲ ಚುನಾವಣಾ ಮೈತ್ರಿಯಾಗಿ ಉಳಿಯುವುದಿಲ್ಲ ಎಂದು ಒತ್ತಿ ಹೇಳಿದರು. 'ನಮಗೆ ಈಗಲೂ ಕೇಂದ್ರದಲ್ಲಿ ಒಂದು ಜಾತ್ಯಾತೀತ ಸರಕಾರ ಬೇಕು, ಈಗಿನಂತಹ ಆರ್ಥಿಕ ನೀತಿಗಳನ್ನು ಅನುಸರಿಸದ ಸರಕಾರ. ಅದನ್ನು ಹೇಗೆ ಸಾಧಿಸುವುದೋ ನೋಡೋಣ' ಎಂದು ಮುಂದಿನ ಲೋಕಸಭಾ ಚುನಾವಣೆಗಳನ್ನು ಕುರಿತಂತೆ ಪಕ್ಷದ ಯೋಜನೆಗಳೇನು ಎಂಬ ಪ್ರಶ್ನೆಗೆ ಉತ್ತರಿಸುತ್ತಾ ಅವರು ಹೇಳಿದರು. 'ನಾವೀಗ ಕೆಲವು ಪಕ್ಷಗಳು ಮತ್ತು ಶಕ್ತಿಗಳೊಂದಿಗೆ ಯಾವ ಪ್ರಶ್ನೆಗಳ ಮೇಲೆ ಒಟ್ಟುಗೂಡಿ ಕೆಲಸ ಮಾಡಬಹುದು ಎಂದು ಪರಿಶೀಲಿಸುವ ಹಂತದಲ್ಲಿದ್ದೇವೆ' ಎಂದು ಅವರು ಮುಂದುವರೆದು ಹೇಳಿದರು.

ಎಡಪಕ್ಷಗಳ ಒತ್ತಡದಿಂದಾಗಿ ಯುಪಿಎ ಸರಕಾರ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ, ಅರಣ್ಯ ಬುಡಕಟ್ಟು ಕಾನೂನು ಮುಂತಾದ ಜನಪರ ಕ್ರಮಗಳನ್ನು ಕೈಗೊಳ್ಳುವಂತಾಗಿದೆ ಎಂದು ಮತ್ತೊಂದು ಪ್ರಶ್ನೆಯನ್ನು ಉತ್ತರಿಸುತ್ತಾ ಹೇಳಿದ ಪ್ರಕಾಶ ಕಾರಟ್‌ರವರು ಸರಕಾರ ನವ-ಉದಾರವಾದಿ ನೀತಿಗಳನ್ನು ಅನುಸರಿಸುವ ವೇಗವನ್ನು ಮಂದಗೊಳಿಸುವಲ್ಲಿಯೂ ಯಶಸ್ವಿಯಾಗಿದ್ದೇವೆ ಎಂದರು.

ಈ ಕರಡು ರಾಜಕೀಯ ನಿರ್ಣಯ ಅಂತರ್‍ರಾಷ್ಟ್ರೀಯ ಸನ್ನಿವೇಶವನ್ನು, ರಾಷ್ಟ್ರೀಯ ಸನ್ನಿವೇಶದಲ್ಲಿ ಬಿಜೆಪಿ ಮತ್ತು ಕೋಮುಶಕ್ತಿಗಳ ಪಾತ್ರ, ಆರ್ಥಿಕ ಸ್ಥಿತಿಗತಿ, ಆಹಾರ ಭದ್ರತೆ, ವಿದೇಶಾಂಗ ನೀತಿ, ಜಮ್ಮು-ಕಾಶ್ಮೀರ, ಕೇಂದ್ರ -ರಾಜ್ಯ ಸಂಬಂಧಗಳು, ಭಯೋತ್ಪಾದಕ ಹಿಂಸಾಚಾರ, ಶಿಕ್ಷಣ ಮತ್ತು ಆರೋಗ್ಯ, ಸಿಪಿಐ(ಎಂ) ಮತ್ತು ಎಡ ಪಕ್ಷಗಳ ಪಾತ್ರ ಹಾಗೂ ಮೂರನೇ ಪರ್ಯಾಯದ ಬಗ್ಗೆ ವಿವರವಾಗಿ ಚರ್ಚಿಸಿದೆ. ಮುಂದಿನ ಎರಡು ತಿಂಗಳಲ್ಲಿ ದೇಶವ್ಯಾಪಿ ಚರ್ಚೆಗಳು ಮತ್ತು ಮಹಾಧಿವೇಶನದಲ್ಲಿ ಚರ್ಚೆಗಳ ಆಧಾರದಲ್ಲಿ ಇದನ್ನು ಅಂಗೀಕರಿಸ ಲಾಗುವುದು.

ಮೈಸೂರಿನಲ್ಲಿ ಕೆಂಬಾವುಟಗಳ ಕಲರವ

ಯುಪಿಎ ಸರ್ಕಾರ ತನ್ನ ನೀತಿ ಬದಲಿಸಿಕೊಳ್ಳಲೇಬೇಕು

- ಸೀತಾರಾಂ ಯೆಚೂರಿ

ಆಲ್ಲಿ ಕೆಂಬಾವುಟಗಳ ಕಲರವ. ದುಡಿಯುವ ಜನರ ಸಂಭ್ರಮ. ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ 19ನೇ ರಾಜ್ಯ ಸಮ್ಮೇಳನ ಅಂಗವಾಗಿ ಜನವರಿ 21ರಂದು ಮೆರವಣಿಗೆ ಬಹಿರಂಗ ಸಭೆ ನಡೆದು 4 ದಿನಗಳ ಮಹತ್ವದ ಸಮ್ಮೇಳನಕ್ಕೆ ಮುನ್ನುಡಿ ಬರೆಯಿತು.

ಮುಂದೆ 19 ಕೆಂಬಾವುಟಗಳನ್ನು ಹಿಡಿದ ಕೆಂಪು ಸಮವಸ್ತ್ರಧಾರಿ ಸ್ವಯಂ ಸೇವಕರು. ಹಿಂದೆ ದುಡಿಯುವ ವರ್ಗದ ಚಳುವಳಿಯ ಕಾರ್ಯಕರ್ತರು, ಮುಖಂಡರು, ಮೈಸೂರು ಮತ್ತು ಅಕ್ಕಪಕ್ಕದ ಜಿಲ್ಲೆಗಳಿಂದ ಬಂದ ಜನರ ಸಾಲು... ಸಾಲು....

"ಅಗತ್ಯ ವಸ್ತುಗಳ ಬೆಲೆ ಏರಿಕೆಗೆ ಧಿಕ್ಕಾರ... ಎಲ್ಲ ಜನರಿಗೆ ಸಮರ್ಪಕ ರೇಷನ್ ವ್ಯವಸ್ಥೆ ಆಗಲೇಬೇಕು... ದುಡಿಯುವ ಜನರ ಐಕ್ಯತೆ ಮುರಿಯುವ ಕೋಮುವಾದಿ ಶಕ್ತಿಗಳಿಗೆ ಧಿಕ್ಕಾರ, ಪೆಟ್ರೋಲ್, ಡಿಸೇಲ್ ಬೆಲೆ ಏರಿಕೆಗೆ ಬೇಡವೇ ಬೇಡ... ಅಮೇರಿಕಾದ ಸಾಮ್ರಾಜ್ಯಶಾಹಿ ಆಕ್ರಮಣಗಳಿಗೆ ಹೇಳಿ ಧಿಕ್ಕಾರ.." ಘೋಷಣೆಗಳು ಮೊಳಗಿದವು. ಶಿಸ್ತುಬದ್ಧ ಮೆರವಣಿಗೆ ಹೊರಟಿತು, ಮೈಸೂರು ಮಹಾನಗರ ಪಾಲಿಕೆಯ ಮುಂಭಾಗದಿಂದ. ಹಿನ್ನೆಲೆಯಲ್ಲಿ ತಲೆ ಎತ್ತಿ ನಿಂತ ಚಾಮುಂಡಿ ಬೆಟ್ಟ. ಬಲಕ್ಕೆ ಮೈಸೂರು ಅರಮನೆಯ ಕೋಟೆಯಂತಹ ತಡೆಗೋಡೆ, ರಸ್ತೆಯಲ್ಲಿ ಕಾರು, ಬಸ್ಸು, ಸ್ಕೂಟರು, ಬೈಕು, ಕಾಲ್ನಡಿಗೆಯಲ್ಲಿ ಸಾಗುವ ಜನ. ಕೆ.ಆರ್.ವೃತ್ತ ದಾಟಿ, ಡಿ.ದೇವರಾಜ ಅರಸು ರಸ್ತೆಯಲ್ಲಿ ಮೆರವಣಿಗೆ.

"ಚಿಲ್ಲರೆ ವ್ಯಾಪಾರ ಕ್ಷೇತ್ರದಲ್ಲಿ ವಿದೇಶಿ ಬಂಡವಾಳ ಬೇಡವೇ ಬೇಡ". ಎದ್ದಿತು ಇನ್ನೊಂದು ಘೋಷಣೆ. 'ಧನಲಕ್ಷ್ಮಿ ಟ್ರೇಡರ್ಸ್' ಎಂಬ ಬೋರ್ಡ್ ಹಾಕಿಕೊಂಡ ಚಿಲ್ಲರೆ ಅಂಗಡಿಯೊಳಗೆ ಗಲ್ಲಾಪೆಟ್ಟಿಗೆಯ ಮೇಲೆ ಕುಳಿತ ಸುಂದರರಾಜ್ ಅವರ ಮನಸ್ಸಿನಲ್ಲಿ ಆಗ ಮೂಡಿದ ಭಾವನೆ ಏನು? ಹೌದು, ಚಿಲ್ಲರೆ ವ್ಯಾಪಾರಕ್ಕೂ ವಿದೇಶಿ ಬಂಡವಾಳಿಗರು ಬಂದರೆ.... ನಾವೆಲ್ಲಾ ಬೀದಿ ಪಾಲಾಗಬೇಕಾಗಬಹುದು...

ಮೆರವಣಿಗೆ ಮುಂದೆ ಮತ್ತೊಂದು ರಸ್ತೆಗೆ ತಿರುಗುತ್ತದೆ.. ಆಸ್ಪತ್ರೆಯ ಮುಂದೆ ಆಟೋ ನಿಲ್ದಾಣದಲ್ಲಿ, ಆಟೋ ನಿಲ್ಲಿಸಿಕೊಂಡು ಪ್ರಯಾಣಿಕರನ್ನು ಕಾಯುತ್ತಿರುವ ಆಟೋ ಚಾಲಕರಾದ ಸತೀಶ್, ರಂಗಸ್ವಾಮಿ ಈ ಮೆರವಣಿಗೆಯನ್ನು ನೋಡಿದ್ದಾರೆ. ಆ ಮೆರವಣಿಗೆ ಯಾವುದು ಅಂತ ಅವರಿಗೆ ಗೊತ್ತಿಲ್ಲ. ಸಿಪಿಐ(ಎಂ) ಅನ್ನೋ ಪಕ್ಷದ ಹೆಸರು ಅವರಿಗೆ ಅಷ್ಟಾಗಿ ಪರಿಚಯವಿಲ್ಲ. ಆದರೆ ಅದು ಕೆಂಬಾವುಟದ ಜನರ ಮೆರವಣಿಗೆ ಅಂತ ಗೊತ್ತು.

"ಬಡವರು ಬದುಕುವುದು ಕಷ್ಟ ಆಗಿದೆ ಸಾರ್. ಇದರಿಂದ (ಅಂದರೆ ಮೆರವಣಿಗೆ, ಪ್ರತಿಭಟನೆ) ಏನಾದರೂ ಜನಕ್ಕೆ ಅನುಕೂಲವಾದರೆ ಒಳ್ಳೆಯದು" ಅನ್ನುತ್ತಾರೆ ಸತೀಶ್. ಕೆಂಬಾವುಟದ ಹೋರಾಟ ಅಂದರೆ ಅದು ಒಳ್ಳೆಯದೇ ಆಗಿರುತ್ತೆ ಅಂತಾನೂ ಅವರು ಹೇಳುತ್ತಾರೆ.

ಹೀಗೆ ನಾಡಿನ ಜನರ ದುಃಖ ದುಮ್ಮಾನ, ಬವಣೆಗಳಿಗೆ ಸ್ಪಂದಿಸುವ ಘೋಷಣೆ ಗಳೊಂದಿಗೆ ಜನವರಿ 21ರಂದು ಮೈಸೂರು ನಗರದಲ್ಲಿ ನಡೆದದ್ದು ಸಿಪಿಐ(ಎಂ) ಪಕ್ಷದ 19ನೇ ರಾಜ್ಯ ಸಮ್ಮೇಳನ ಅಂಗವಾಗಿ ನಡೆದ ಬಹಿರಂಗ ಸಭೆಯ ಪೂರಕ ಮೆರವಣಿಗೆ. ಟೌನ್‌ಹಾಲ್ ಮೈದಾನದಲ್ಲಿ ಬಹಿರಂಗ ಸಭೆ. ಜನವರಿ ತಿಂಗಳೂ ಮುಕ್ಕಾಲು ಪಾಲು ಮುಗಿದೇ ಹೋಗಿದೆ. ತಲೆಯ ಮೇಲೆ ಬಿಸಿಲಿನ ಝಳ. ಆದರೆ ನಾಯಕರ ಮಾತುಗಳನ್ನು ಕೇಳುವ ಉತ್ಸಾಹಕ್ಕೆ ಅದೇನು ತಟ್ಟಿಲ್ಲ. ಬಿಸಿಲು ಸಹಿಸಲಾರದ ಹಲವರು ಕುರ್ಚಿ ಬಿಟ್ಟು ಮೈದಾನದ ತುದಿಯ ಮರದ ನೆರಳಿಗೆ ಕೂತರು. ಬಿಸಿಲೆಂದು ಯಾರಿಗೂ ಬೇಸರವಿಲ್ಲ. ಬಂಡವಾಳಗರ ಪಕ್ಷಗಳಂತೆ ಇಡೀ ಮೈದಾನಕ್ಕೆ ಪೆಂಡಾಲ್ ಎಂಬ ದುಬಾರಿ ಚಪ್ಪರ ಹಾಕಿಸುವುದು ದುಡಿಯುವ ವರ್ಗದ ಪಕ್ಷಕ್ಕೆ ಕಷ್ಟ ಅಂತ ಅವರಿಗೂ ಗೊತ್ತು. ಕರವಸ್ತ್ರ, ಚೌಕ, ಪೇಪರ್ ಮತ್ತೇನೋ ತಲೆಗೆ ಅಡ್ಡ ಹಿಡಿದು ಕುರ್ಚಿಯಲ್ಲಿ ಕೂತವರದೂ ದೊಡ್ಡ ಸಂಖ್ಯೆಯೇ.





ವೇದಿಕೆಯ ಮೇಲೆ ಸಿಪಿಐ(ಎಂ) ಪಾಲಿಟ್‌ಬ್ಯೂರೋ ಸದಸ್ಯ ಸೀತಾರಾಮ ಯೆಚೂರಿ ಯುಪಿಎ ಸರ್ಕಾರದ 'ಸಾಧನೆ', ವೈಫಲ್ಯಗಳ ಪುಸ್ತಕ ತೆರೆದಿಟ್ಟರು. 60 ವರ್ಷಗಳ ಇತಿಹಾಸದಲ್ಲೇ ಇಲ್ಲದ ಅರಣ್ಯಭೂಮಿ ಮತ್ತು ಅರಣ್ಯ ಉತ್ಪನ್ನಗಳ ಮೇಲೆ ಅರಣ್ಯವಾಸಿಗಳಿಗೆ ಹಕ್ಕು ನೀಡುವ ಕಾಯ್ದೆ, ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ, ಹಲವು ಸಾರ್ವಜನಿಕ ಉದ್ದಿಮೆಗಳ ಖಾಸಗೀಕರಣ ಪ್ರಕ್ರಿಯೆಗೆ ತಡೆ ಇತ್ಯಾದಿ... ಇತ್ಯಾದಿ. ಇದೆಲ್ಲಾ ಆಗಿದ್ದು 61 ಜನ ಇರುವ ಎಡಪಕ್ಷಗಳ ಸಂಸದರು ಮತ್ತು ಎಡಪಕ್ಷಗಳ ಒತ್ತಡದಿಂದಾಗಿ, ಆದರೆ ಇವುಗಳ ಜಾರಿಯಲ್ಲಿ ಎಷ್ಟೆಷ್ಟೋ ಕೊರತೆಗಳು, ವಿಳಂಬ....ಅರೆ ಮನಸ್ಸಿನ 'ಸಂಕಲ್ಪ' ಕಾಂಗ್ರೆಸ್ ನೇತೃತ್ವದ ಕೇಂದ್ರ ಯುಪಿಎ ಸರ್ಕಾರದ್ದು.

ಆದರೆ ಕೃಷಿಗೆ ಅಗತ್ಯವಾದಷ್ಟು ಹೂಡಿಕೆ ಹೆಚ್ಚಲಿಲ್ಲ. ಸುಲಭ ಸಾಲ ಸಿಗಲಿಲ್ಲ. ಸಾಮಾನ್ಯ ಕನಿಷ್ಟ ಕಾರ್ಯಕ್ರಮದಲ್ಲಿ ಜನತೆಗೆ ಭರವಸೆ ಕೊಟ್ಟಂತೆ ಶಿಕ್ಷಣ, ಆರೋಗ್ಯಕ್ಕೆ ಹಣ ಹರಿದು ಬರಲಿಲ್ಲ. ಚೂರು ಪಾರು ಹೆಚ್ಚಳ ಮಾತ್ರ. ಎನ್.ಡಿ.ಎ. ಸರ್ಕಾರದ ಕಾಲದಂತೆ ಇನ್ನಷ್ಟು ಕುಸಿಯಲಿಲ್ಲ ಎಂದು 'ಸಂತೋಷ' ಪಡಬೇಕಷ್ಟೆ. ಈಗಲೂ ವರ್ಷಕ್ಕೆ ಲಕ್ಷಾಂತರ ರೈತರ ಆತ್ಮಹತ್ಯೆಗಳ ಮುಂದುವರಿಕೆ, ಔಷಧಿಗಳು ದುಬಾರಿ..., ಎಷ್ಟೇ ಒತ್ತಡ ಹಾಕಿದರೂ ಅಂಗನವಾಡಿ ನೌಕರರ ಬಗೆಗೆ ಪ್ರಧಾನಿಗಳು ಕೊಟ್ಟ ಭಾರಿ ಭರವಸೆಗಳು ಹುಸಿ, ಕೃತಿಯಲ್ಲಿ 'ಶೂನ್ಯ ಸಂಪಾದನೆ', ಗೋಧಿಗೆ ಮಾತ್ರ ಬೆಂಬಲ ಬೆಲೆ ಹೆಚ್ಚಳ. ಅಕ್ಕಿಗೆ ಇಲ್ಲ.... ಪೆಟ್ರೋಲ್, ಡೀಸೆಲ್, ಗ್ಯಾಸ್, ಬೆಲೆ ಹೆಚ್ಚಳದ ಪ್ರಯತ್ನ. ಪರ್ಯಾಯ ಮಾರ್ಗಗಳಿದ್ದರೂ ಪರಿಶೀಲಿಸದೆ ವಿದ್ಯುತ್ ಅಗತ್ಯತೆ, ಆರ್ಥಿಕ ಬೆಳವಣಿಗೆ ಹೆಸರಲ್ಲಿ ಭಾರತವನ್ನು ಅಮೇರಿಕಾದ ಅತ್ಯಂತ ದುಬಾರಿಯಾದ ಅಣು ವಿದ್ಯುತ್ ಸ್ಥಾವರಗಳ ಖರೀದಿ ಒಪ್ಪಂದಕ್ಕೆ ಸಿಲುಕಿಸುವುದು, ಆ ಮೂಲಕ ದೇಶದ ಸ್ವಾತಂತ್ರ್ಯ, ಸಾರ್ವಭೌಮತೆಗೆ ಮಾರಕವಾದ ಅಮೇರಿಕಾ ಎಂಬ ಸಾಮ್ರಾಜ್ಯಶಾಹಿ ಶಕ್ತಿಯ ದುಷ್ಟ ಕಾರ್ಯತಂತ್ರದ ಜಾರಿಗೆ ಉಪಕರಣವಾಗುವುದು. ಇದರತ್ತ ಕೇಂದ್ರ ಸರ್ಕಾರ ತುಡಿತ... ಹೀಗೆ ಯೆಚೂರಿ ವಿವರಿಸುತ್ತಾ ಹೋದರು.

ಸಿಪಿಐ(ಎಂ) ಮತ್ತು ಎಡಪಕ್ಷಗಳು ಕಾಂಗ್ರೆಸ್‌ಗೆ ಬೆಂಬಲ ನೀಡಿದ್ದಾದರೂ ಯಾಕೆ? ಕೇಂದ್ರದಲ್ಲಿ ಕೋಮುವಾದಿ ಸರ್ಕಾರ ಬರಲು ಬಿಡಬಾರದು ಎಂದು, ಆದರೆ ಕಾಂಗ್ರೆಸ್‌ಗೆ ಕೋಮುವಾದಿಗಳನ್ನು ಎದುರಿಸುವಲ್ಲಿಯೂ ಹಿಂಜರಿಕೆ. ದೃಢತೆ ಇಲ್ಲ... ಸಿಪಿಐ(ಎಂ) ಪಕ್ಷವು ಕಾಂಗ್ರೆಸ್, ಬಿಜೆಪಿ ಕೂಟಗಳಿಗೆ ಪರ್ಯಾಯವಾಗಿ ಮೂರನೇ ರಂಗವನ್ನು ರೂಪಿಸಲು ಶ್ರಮಿಸುವುದು ... ಸಿಪಿಐ(ಎಂ)ನ ನಿಲುವನ್ನು ಯೆಚೂರಿ ಘೋಷಿಸಿದರು.

ಈ ಕೂಟ ಕೇವಲ ಚುನಾವಣಾ ಮೈತ್ರಿಯಲ್ಲ. ಕೋಮುವಾದ, ಜನ ವಿರೋಧಿ ಆರ್ಥಿಕ ನೀತಿಗಳ ವಿರುದ್ಧ, ಸ್ವತಂತ್ರ ವಿದೇಶಾಂಗ ನೀತಿ, ಜನಪರ ಪರ್ಯಾಯಕ್ಕಾಗಿ ಹೋರಾಡುವ ಒಂದು ರಾಜಕೀಯ ಮೈತ್ರಿ... ಎಂಬುದನ್ನು ಹೇಳಲು ಯೆಚೂರಿ ಮರೆಯಲಿಲ್ಲ.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದವರು ಅಂದಿನ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ಎನ್.ನಾಗರಾಜ್, 'ಸರ್ವ ಜನಾಂಗದ ಶಾಂತಿಯ ತೋಟ' ವಾದ ಕರ್ನಾಟಕವನ್ನು

ಪುಟ 12 ಕ್ಕೆ

ಜೆಡಿಎಸ್ ಕುರಿತು -ಯೆಚೂರಿ

ಬಿಜೆಪಿಗೆ ಅಧಿಕಾರ ನೀಡದೆ ಅದರ ಜೊತೆ ಸಖ್ಯತೆ ಬಿಟ್ಟು ಹೊರಬಂದಿರುವ ಜೆಡಿ(ಎಸ್) ನಿಲುವು ಸರಿಯಾದದ್ದು. ಆದರೆ ಅದು ತನ್ನ ಜಾತ್ಯಾತೀತ ನೀತಿಯ ಬಗೆಗೆ ನಿರಂತರವಾದ ನಿಲುವನ್ನು ದೃಢಪಡಿಸಬೇಕಿದೆ. ಉದ್ದೇಶಿತ ಮೂರನೇ ರಂಗದಲ್ಲಿ ಜೆಡಿ(ಎಸ್) ಅನ್ನು ಸೇರಿಸಿಕೊಳ್ಳುವ ಬಗೆಗೆ ಇನ್ನೂ ಚರ್ಚಿಸಿಲ್ಲ.



'ಏಕಪಕ್ಷ - ದ್ವಿಪಕ್ಷಗಳ ಆಳ್ವಿಕೆ ಮುಗಿಯಿತು'

- ಎಸ್.ರಾಮಚಂದ್ರನ್ ಪಿಳ್ಳೈ



ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಎಸ್.ಆರ್.ಪಿ.

ಜನವರಿ 21ರಂದು ಕಾ: ಎಂ.ಎನ್.ಉಗ್ರಪ್ಪ ನಗರದ ಕಾ: ಟಿ.ಎಸ್.ಮಣಿ ವೇದಿಕೆಯಲ್ಲಿ ಭಾರತ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ 19ನೇ ಕರ್ನಾಟಕ ರಾಜ್ಯ ಸಮ್ಮೇಳನವನ್ನು ಸಿಪಿಐ(ಎಂ) ಪಕ್ಷದ ಪೊಲಿಟ್ ಬ್ಯೂರೋ ಸದಸ್ಯರೂ ಮತ್ತು ಅಖಿಲ ಭಾರತ ಕಿಸಾನ್ ಸಭಾದ ಅಧ್ಯಕ್ಷರೂ ಆದ ಕಾ: ಎಸ್.ರಾಮಚಂದ್ರ ಪಿಳ್ಳೈರವರು ವಿದ್ಯುಕ್ತವಾಗಿ ಉದ್ಘಾಟಿಸಿದರು. ಇದಕ್ಕೆ ಮುಂಚೆ 19ನೇ ಕರ್ನಾಟಕ ರಾಜ್ಯ ಸಮ್ಮೇಳನದ ಸ್ವಾಗತ ಸಮಿತಿ ಅಧ್ಯಕ್ಷರು ಮತ್ತು ವಿಕ್ರಾಂತ್ ಕಾರ್ಖಾನೆ ಕಾರ್ಮಿಕ ಸಂಘಟನೆಯ ಅಧ್ಯಕ್ಷರೂ ಆದ ಕಾಂ: ಜಯರಾಮ್ ರವರು ಪ್ರಾಸ್ತವಿಕ ಭಾಷಣವನ್ನು ಮಾಡಿದರು. ಸಿಪಿಐ(ಎಂ) ಕರ್ನಾಟಕ ರಾಜ್ಯ ಕಾರ್ಯಕಾರಿ ಮಂಡಳಿ ಸದಸ್ಯರಾದ ಕಾ: ನಿತ್ಯಾನಂದ ಸ್ವಾಮಿಯವರು ಈ ಹಿಂದಿನ ಮೂರು ವರ್ಷಗಳಲ್ಲಿ ಅಗಲಿದ ಹುತಾತ್ಮರಿಗೆ ಶ್ರದ್ಧಾಂಜಲಿ ಅರ್ಪಿಸಿದರು.

ಸಾಮ್ರಾಜ್ಯಶಾಹಿಗೆ ಪ್ರತಿರೋಧ

ಕಾ: ಎಸ್.ರಾಮಚಂದ್ರ ಪಿಳ್ಳೈಯವರು ಮಾತನಾಡಿ ಜಾಗತಿಕ ಮಟ್ಟದಲ್ಲಿ ತನ್ನ ಯಜಮಾನಿಕೆ ಸ್ಥಾಪಿಸಲು ನಿರಂತರವಾಗಿ ಹವಣಿಸುತ್ತಿರುವ ಸಾಮ್ರಾಜ್ಯಶಾಹಿ-ಪ್ರೇರಿತ ಅಮೇರಿಕಾ ವಿಶ್ವದಲ್ಲಿ ಒಂದು 'ಹೊಸ ವ್ಯವಸ್ಥೆ' ಮತ್ತು ನವ-ಉದಾರವಾದಿ ನೀತಿಗಳನ್ನು ಜಾರಿಗೆ ತರಲು ಕ್ಷಿಪಣಿ-ವಿರೋಧಿ ರಕ್ಷಣಾ ವ್ಯವಸ್ಥೆಯನ್ನು ನಿರ್ಮಿಸುತ್ತಿದೆ ಎಂದರು. ಇನ್ನೊಂದೆಡೆ ಪ್ಯಾಲೇಸ್ಟೇನ್, ಅಫ್ಘಾನಿಸ್ತಾನ, ಇರಾಕ್, ಇತ್ಯಾದಿ ರಾಷ್ಟ್ರಗಳಲ್ಲಿ ವ್ಯಕ್ತವಾಗುತ್ತಿರುವ ಸಶಸ್ತ್ರ ಪ್ರತಿರೋಧಗಳು ಮತ್ತು ಇಟಲಿ, ಗ್ರೀಸ್, ಲ್ಯಾಟಿನ್ ಅಮೇರಿಕಾ, ಫ್ರಾನ್ಸ್, ಭಾರತ, ಜರ್ಮನಿ, ಪೋರ್ಚುಗಲ್, ಮುಂತಾದೆಡೆಗಳಲ್ಲಿ ಸಾಮೂಹಿಕ ಹೋರಾಟಗಳು ಮೂಡಿ ಬರುತ್ತಿವೆ. ಉತ್ತರ ಕೊರಿಯಾ ಮತ್ತು ಕ್ಯೂಬಾ ರಾಷ್ಟ್ರಗಳು ಅಮೇರಿಕಾಗೆ ಸೆಡ್ಡು ಹೊಡೆದು ನಿಂತಿರುವುದು, ಚೀನಾ ಮತ್ತು ವಿಯೆಟ್ನಾಂ ದೇಶಗಳು

ಪುಟ 12 ಕ್ಕೆ

ಜನ ಸಂಘರ್ಷದ ಅನುಭವ ಮಂಥನ

ಜನ ಸಮೂಹಗಳ ನಡುವಿನಿಂದ, ಹೋರಾಟದ ಕುಲುಮೆಯಿಂದ ಬೆಂದುಬಂದ ಪ್ರತಿನಿಧಿಗಳು ಭವಿಷ್ಯದ ಆಂದೋಲನದ ಹಾದಿ ರೂಪಿಸಲು ಆಧಾರವಾದ ತಮ್ಮ ಅನುಭವಗಳ ಮಂಥನ ನಡೆಸಿದರು.

ಕಾಂ: ಎಂ.ಎನ್.ಉಗ್ರಪ್ಪನಗರ, ಕಾಂ:ಟಿ.ಎಸ್.ಮಣಿ ವೇದಿಕೆಯಲ್ಲಿ ರಾಜ್ಯದ 24 ಜಿಲ್ಲೆಗಳನ್ನು ಪ್ರತಿನಿಧಿಸಿ ಬಂದ ಪ್ರತಿನಿಧಿಗಳು ಹಂಚಿಕೊಂಡ ಚಳುವಳಿಯ ಕೆಲವು ಪ್ರಮುಖ ಅನುಭವಗಳು, ಹೋರಾಟದ ಮಾದರಿಗಳು ಚರ್ಚೆಯಸಾರ ಇದು.

ದಕ್ಷಿಣ ಭಾರತದ ಪ್ರವೇಶಕ್ಕೆ ಕರ್ನಾಟಕವೇ ಹೆಬ್ಬಾಗಿಲು, ಕರ್ನಾಟಕವನ್ನು ಗುಜರಾತ್ ಮಾಡುತ್ತೇವೆ ಮುಂತಾದ ಮಾತುಗಳನ್ನಾಡುತ್ತಿರುವ, ಘೋಷಣೆ ನೀಡುತ್ತಿರುವ ಕೋಮುವಾದಿ ಬಿಜೆಪಿ ಮತ್ತು ಸಂಘ ಪರಿವಾರವು ರಾಜ್ಯಾದ್ಯಂತ ನಡೆಸುತ್ತಿರುವ ರಕ್ತದಾಹಿ ಆವುಟಗಳು, ಮತ್ತು ಅದನ್ನು ವಿಫಲಗೊಳಿಸಲು ಸಿಪಿಐ(ಎಂ) ನಡೆಸಿದ ಯತ್ನ, ಸವಾಲನ್ನು ಎದುರುಗೊಂಡ ಬಗೆ ಸಮ್ಮೇಳನದ ಚರ್ಚೆಯ ಒಂದು ಪ್ರಧಾನ ವಿಷಯವಾಗಿತ್ತು.

ಗುಲ್ಬರ್ಗ ಜಿಲ್ಲೆಯಲ್ಲಿ ವೀರಶೈವ ಮಠಾಧೀಶರುಗಳನ್ನು ಸೆಳೆಯಲು ಯತ್ನಿಸುತ್ತಾ ಆ ಭಾಗದಲ್ಲಿ ಕೋಮುದ್ವೇಷದ ವಿಷ ಕಾರುವ ಹಿಂದೂ ಸಮಾಜೋತ್ಸವವನ್ನು ನಡೆಸುವ ಸಂಘ ಪರಿವಾರದ ದುಷ್ಟ ಯತ್ನವನ್ನು ವಿವಿಧ ಪ್ರಗತಿಪರ ಶಕ್ತಿಗಳನ್ನು ಅಣಿನೆರೆಸಿ ವಿಫಲಗೊಳಿಸಿದ ಗುಲ್ಬರ್ಗಾ ಸಂಗಾತಿಗಳ ಅನುಭವ ಇತರ ಹಲವು ಜಿಲ್ಲೆಗಳಿಗೆ ಮಾದರಿ ಎನಿಸಿತು. ವಚನ ಚಳುವಳಿಯ ಆಶಯಗಳಿಗೂ ದ್ರೋಹವೆಸಗುವ ಜನಾಂಗ ದ್ವೇಷಿ ಸಮಾವೇಶದಲ್ಲಿ ವೀರಶೈವ ಮಠಾಧೀಶರು ಪಾಲ್ಗೊಳ್ಳದಂತೆ ಆಗಿದ್ದೂ ಜನರಿಲ್ಲ ಸಮಾವೇಶ ವಿಫಲವಾಗಿದ್ದು ಪ್ರಗತಿಪರರ ಯಶಸ್ಸಿನ ಸಂಕೇತದಂತಿತ್ತು. ಅದೇ ರೀತಿ ಹೇಳಿಕೊಳ್ಳುವಂತ ನೆಲೆ ಇಲ್ಲದಿದ್ದರೂ ಕೋಲಾರ ಜಿಲ್ಲೆಯಲ್ಲಿ ಹೇಗಾದರೂ ನೆಲೆ ಮಾಡಿಕೊಳ್ಳಬೇಕೆಂದು ಬಾರಿ ಅಬ್ಬರದೊಂದಿಗೆ ಬಾಬಾಬುಡನ್‌ಗಿರಿಯನ್ನು ಅಯೋಧ್ಯೆಯನ್ನಾಗಿಸುವ ಸಂಘ ಪರಿವಾರದ ಕುತಂತ್ರಗಳ ವಿರುದ್ಧ 'ದತ್ತ ಜಯಂತಿ' ನೆಪದ ಆಕ್ರಮಣ ವಿರೋಧಿಸಿ ಡಿವೈಎಫ್‌ಐ ಚಿಕ್ಕಮಗಳೂರುನಿಂದ ಸೌಹಾರ್ದತೆಯೆಡೆಗೆ ಯುವಜನರ ನಡೆಗೆ, ಉದ್ಯೋಗದ ವಿಷಯದಲ್ಲಿ ಮಧ್ಯಪ್ರವೇಶ ಗಮನಸೆಳೆದವು. ವಿರಾಟ ಹಿಂದೂ ಸಮಾವೇಶ, ಹಲವು ಪ್ರದೇಶಗಳಲ್ಲಿ ಕೋಮುಭಾವನೆ ಕೆರಳಿಸಿ ಸಂಘ ಪರಿವಾರವು ಉಂಟು ಮಾಡಿದ್ದ ವಿಷಮಯ ವಾತಾವರಣದ ನಿವಾರಣೆಗೆ ಕೋಲಾರ ಸಿಪಿಐ(ಎಂ) ಪಕ್ಷವು ಹಮ್ಮಿಕೊಂಡ ಕಾರ್ಯಕ್ರಮ ವಿಶಾಲ ಜನ ಸಮುದಾಯವನ್ನು ತಲುಪಿದ್ದು ಒಂದು ಸ್ಫೂರ್ತಿಯುತ ಅನುಭವವಾಗಿತ್ತು.

ದೇಶಪ್ರೇಮಿ ಯುವ ಜನೋತ್ಸವದ ಮೂಲಕ ಡಿವೈಎಫ್‌ಐ-ಎಸ್‌ಎಫ್‌ಐ ಜಾತ್ಯಾತೀತ ಮೌಲ್ಯಗಳನ್ನು, ನೈಜ ದೇಶಪ್ರೇಮದ ಸಂದೇಶವನ್ನು ಹಳ್ಳಿ ಹಳ್ಳಿಗಳಿಗೆ ತೆಗೆದುಕೊಂಡು ಹೋಗಿರುವುದು ಜನರಿಂದ ದೊರೆತ ಅಪೂರ್ವ ಜನಸ್ಪಂದನದ ವರದಿ ಸ್ಫೂರ್ತಿಯುತವಾಗಿತ್ತು. ಅದೇ ರೀತಿಯಲ್ಲಿ ಆದಿ ಉಡುಪಿ ಪ್ರಕರಣದ ವಿರುದ್ಧ, ಕುಂದಾಪುರ ಗಲಭೆಯ ವಿರುದ್ಧ ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಗಳ ಸಂಗಾತಿಗಳು ಬಿಡಿಸಿಟ್ಟ ಹೋರಾಟದ ಚಿತ್ರಣಗಳು, ಅನುಭವಗಳು ಕೋಮುವಾದ ವಿರೋಧಿ ಹೋರಾಟದ ಮತ್ತೊಂದು ಮಾದರಿಯಾಗಿದ್ದವು.

ಪಡಿತರ ಚೀಟಿಯ ಅವ್ಯವಸ್ಥೆ, ಬಡವರ ಹೊಟ್ಟೆಯ ಮೇಲೆ ಹೊಡೆಯುವ ಸರ್ಕಾರದ ಪಡಿತರ ನೀತಿ, ರೇಷನ್ ಕಾರ್ಡ್ ಅವ್ಯವಸ್ಥೆಯ ವಿರುದ್ಧ ಮಂಡ್ಯ ಜಿಲ್ಲೆಯಲ್ಲಿ ನಡೆದ ಸಮರಶೀಲ ಚಳುವಳಿಯ ಅನುಭವ, ಪೋಲೀಸರ ಲಾಠಿ, ಬೂಟುಗಳ ಪ್ರಹಾರವನ್ನೆದುರಿಸಿದ ಸಂಗಾತಿಗಳ ಧೀಮಂತಿಕೆಯ ನಿಲುವು. ಇದೇ ವಿಚಾರದಲ್ಲಿ ಗುಲ್ಬರ್ಗಾ ಸಂಗಾತಿಗಳು ನಡೆಸಿದ ವ್ಯಾಪಕ ಪ್ರಚಾರ, ಕರಾಳ ಎಪಿಎಂಸಿ ಕಾಯ್ದೆ ವಿರೋಧಿ ವರ್ತಕರ ಸಂಘದೊಂದಿಗೆ ಸೇರಿ, ಕಾರ್ಮಿಕ, ರೈತ, ಕೂಲಿಕಾರ ಸಂಘಗಳು ನಡೆಸಿದ ರಾಜ್ಯವ್ಯಾಪಿ ಎಪಿಎಂಸಿ ಬಂದ್ ಯಶಸ್ವಿಯಾಗಿದ್ದು, ಬೆಂಗಳೂರು ಜಿಲ್ಲೆಯಲ್ಲಿ ಸರ್ಕಾರಿ ಜಮೀನು ಹರಾಜು ವಿರುದ್ಧ ನಿವೇಶನರಹಿತರಿಗೆ ನಿವೇಶನಕ್ಕಾಗಿ ಒತ್ತಾಯಿಸಿ ನಡೆದ ಬೃಹತ್ ಚಳುವಳಿ ಇತ್ಯಾದಿಗಳ ಅನುಭವಗಳು ಇತ್ತೀಚೆಗೆ ನಿವೇಶನದಾರರನ್ನು ಹಿಂಡುವ ಬೆಂಗಳೂರು ಮಹಾನಗರ ಪಾಲಿಕೆಯ ಅಕ್ರಮ ಸಕ್ರಮದ ವಿರುದ್ಧದ ಹೋರಾಟಗಳು ಮತ್ತು ಈ ಕುರಿತ ಚರ್ಚೆ ಸಮ್ಮೇಳನದಲ್ಲಿ ಸ್ಫೂರ್ತಿಯ ವಾತಾವರಣ ಉಂಟು ಮಾಡಿದ್ದವು. ಗುಲ್ಬರ್ಗಾದಲ್ಲಿ ಸಾವಿರಾರು ಬಡವರಿಗೆ ಉಚಿತ ನಿವೇಶನ ಕೊಡಿಸುವಲ್ಲಿ ಯಶಸ್ವಿಯಾದ ಬೃಹತ್ ಹೋರಾಟ, ಸರ್ಕಾರಿ ಆಸ್ಪತ್ರೆ, ಕುಡಿಯುವ ನೀರಿನ ವಿಷಯವಾಗಿ ನಡೆದ ಯಶಸ್ವಿ ಹೋರಾಟಗಳೂ ಇದೇ ರೀತಿಯವಾಗಿದ್ದವು.



ಕೋಲಾರ ಜಿಲ್ಲೆಯ ಕೆ.ಜಿ.ಎಫ್. ಪುನರಾರಂಭಕ್ಕಾಗಿ ಒತ್ತಾಯಿಸಿ ನಡೆದ ಕೋಲಾರ ಬಂದ್, ಗೌರಿಬಿದನೂರು ಕೆರೆ ರಕ್ಷಣೆಗಾಗಿ ನಡೆದ

ಪುಟ 13 ಕ್ಕೆ

ಮುನ್ನಡೆಗೆ ಇದೀಗ ಅತ್ಯುತ್ತಮ ಅವಕಾಶ...

- ಕೆ.ವರದರಾಜನ್

ಮೂರು ದಿನಗಳ ಕಾಲದ ವರದಿ, ವರದಿಯ ಮೇಲಿನ ಚರ್ಚೆ ಇದನ್ನೆಲ್ಲಾ ಗಮನಿಸಿದರೆ, ಪಕ್ಷ ಇಂದು ಒಂದು ಬಲಿಷ್ಠವಾದ ಶಕ್ತಿಯಾಗಿ ಬೆಳೆದಿಲ್ಲದಿರಬಹುದು ಆದರೆ ಮುಂದಿನ ದಿನಗಳಲ್ಲಿ ಖಂಡಿತ ಒಂದು ಬಲಿಷ್ಟ ಶಕ್ತಿಯಾಗಿ ಬೆಳೆಯುವ ವಿಶ್ವಾಸ ಕಂಡು ಬರುತ್ತಿದೆ. 1964ರ ನಂತರ ಪಕ್ಷದ ಬೆಳವಣಿಗೆಗೆ ಈಗ ಅತ್ಯುತ್ತಮ ಅವಕಾಶ ಮೂಡಿ ಬಂದಿದೆ.

ದೇಶದಲ್ಲಿ ಆಂಧ್ರಪ್ರದೇಶ, ತಮಿಳುನಾಡು ವಿನಂತಹ ಬಲವಾದ ಚಳುವಳಿ ಇರುವ ರಾಜ್ಯಗಳಲ್ಲಿ ಮಾತ್ರವಲ್ಲ, ದುರ್ಬಲ ಎಂದು ಪರಿಗಣಿಸಲಾದ ಒರಿಸ್ಸಾ, ಮಹಾರಾಷ್ಟ್ರ, ರಾಜಸ್ಥಾನ, ಮಧ್ಯಪ್ರದೇಶ.... ಹೀಗೆ ಎಲ್ಲಿಂದ ಎಲ್ಲಿಗೆ ಹೋದರೂ ಕೂಡ ಜನಸ್ಪಂದನೆ ಅಪೂರ್ವವಾಗಿರುವುದು ಕಂಡು ಬರುತ್ತಿದೆ.

ರಾಜಸ್ಥಾನ ಮತ್ತು ಆಂಧ್ರಪ್ರದೇಶಗಳಲ್ಲಿ ನಡೆದ ರೈತ ಚಳುವಳಿ, ಮತ್ತು ಭೂ ಹೋರಾಟಗಳ ನಂತರ ಅಲ್ಲಿನ ಪತ್ರಿಕೆಗಳು-ಚಳುವಳಿ ಹೀಗೆ ಮುಂದುವರಿದರೆ ಆಳುವ ಪಕ್ಷಗಳಿಗೆ ಸಿಪಿಐ(ಎಂ) ಪರ್ಯಾಯವಾಗಿ ಮೂಡಿ ಬರಲಿದೆ ಎಂದು ಬರೆದವು. ಈ ಹಿಂದೆ ಅಷ್ಟು ಬಲ ಇಲ್ಲದಿದ್ದ ಹೈದರಾಬಾದ್‌ನಲ್ಲಿಗ ಪಕ್ಷದ ಹೋರಾಟಗಳಲ್ಲಿ 30-40 ಸಾವಿರ ಮಂದಿ ಸೇರುವಂತಾಗಿದೆ.


15 ವರ್ಷದ ಹಿಂದೆ ಜಾಗತೀಕರಣ, ಉದಾರೀಕರಣ, ಖಾಸಗೀಕರಣ ನೀತಿಗಳು ಜಾರಿಯಾಗುವಾಗ ಅದು ಒಳ್ಳೆಯದು ಎಂಬ ವಾದಗಳಿದ್ದವು. ಆದರೆ ಇಂದು ಲಕ್ಷಾಂತರ ರೈತರ ಆತ್ಮಹತ್ಯೆಗಳು ನಡೆಯುತ್ತಿದೆ. ಈ ನೀತಿಗಳು ಜನರ ಬದುಕಿನ ಮೇಲೆ ಗಂಭೀರ ಪರಿಣಾಮ ಬೀರಿವೆ.ಜನ ನಮ್ಮೊಂದಿಗೆ ಬರಲು ಸಿದ್ಧವಾಗಿದ್ದಾರೆ. ನಾವು ಮನಸ್ಸು ಮಾಡಿದರೆ ಬೆಳವಣಿಗೆ ಸಾಧ್ಯ. ಇಲ್ಲಿರುವ 300 ಜನ ಪ್ರತಿನಿಧಿಗಳು ದೃಢವಾಗಿ ಮನಸ್ಸು ಮಾಡಿದರೆ ಹೊಸ ಕರ್ನಾಟಕ ಮೂಡಿ ಬರಲು ಸಾಧ್ಯ.

ಸಿಪಿಐ(ಎಂ) ಪಕ್ಷ ಮತ್ತು ಚಳುವಳಿಗಳ ಬಗ್ಗೆ ನಮಗಿಂತ ನಮ್ಮ ಶತ್ರುಗಳು ಜಾಗ್ರತವಾಗಿದ್ದಾರೆ. ಲೇಖಕಿ ತಸ್ಲಿಮ ಪ್ರಕರಣವನ್ನೇ ನೋಡೋಣ. ಬಾಂಗ್ಲಾ ದೇಶದಿಂದ ತಸ್ಲಿಮಾ ಭಾರತಕ್ಕೆ ಬಂದಾಗ ಪಶ್ಚಿಮ ಬಂಗಾಳದಲ್ಲಿ ಆಶ್ರಯ ನೀಡಲಾಯಿತು. ಇಲ್ಲಿ ಬಂದ ಮೇಲೆ ಅವರು ತಮ್ಮ ಕೃತಿಯನ್ನು ಪರಿಷ್ಕರಿಸಿ ಕೆಲವು ಪುಟಗಳನ್ನು ಸೇರಿಸಿ ಹೊಸ ಆವೃತ್ತಿಯನ್ನು ತಂದರು. ಮೊದಲು ಈ ಅಂಶಗಳು ಅದರಲ್ಲಿರಲಿಲ್ಲ.

'ಪ್ರವಾದಿ ಮಹಮದರಿಗೆ 12 ಜನ ಹೆಂಡತಿಯರು. ಅವರು ಪ್ರತಿದಿನ ರಾತ್ರಿ ಒಬ್ಬೊಬ್ಬ ಮಹಿಳೆಯರೊಂದಿಗೆ ಕಳೆಯುತ್ತಿದ್ದರು... ಒಂದು ದಿನ ರಾತ್ರಿ 12ನೇಯ ಹೆಂಡತಿಯನ್ನು ಕಾಣಲು ಮಹಮದ್ ಬರಲಿಲ್ಲ. ಏಕೆಂದರೆ ಅವರು ತಮ್ಮ 13ನೇ ಹೆಂಡತಿಯ ಜೊತೆಗಿದ್ದರು.... ಇಸ್ಲಾಂ ಒಂದು ಧರ್ಮವಲ್ಲ, ಒಬ್ಬ ಅಶ್ಲೀಲ ವ್ಯಕ್ತಿಯ ರಾಜಕೀಯ' ಎಂಬಂತಹ ಮಾತುಗಳನ್ನೆಲ್ಲಾ ಸೇರಿಸಲಾಗಿತ್ತು. ಇಂತಹ ಕೃತಿಯನ್ನು ಹಾಗೆಯೇ ಬಿಟ್ಟರೆ ಏನಾಗಬಹುದು.

ಈ ವಿಷಯದಲ್ಲಿ ಲೇಖಕಿಯ ಅಭಿವ್ಯಕ್ತಿಯ ಸ್ವಾತಂತ್ರ್ಯವನ್ನು ರಕ್ಷಿಸುತ್ತಿಲ್ಲ ಎನ್ನುವವರು, ಮತ್ತು ಲೇಖಕಿಯನ್ನು ವಿರೋಧಿಸುವ ಧಾರ್ಮಿಕ ಮೂಲಭೂತ ವಾದಿಗಳು ಇಬ್ಬರೂ ಸಿಪಿಐ(ಎಂ) ವಿರುದ್ಧ ದಾಳಿ ಮಾಡುತ್ತಿದ್ದಾರೆ.

ಇತ್ತೀಚೆಗೆ ತಿಳಿದು ಬಂದಿರುವುದೇನೆಂದರೆ ತಸ್ಲೀಮಾ ಈಗೀಗ್ಗೆ ಪದೇ ಪದೇ ಇಂಗ್ಲೆಂಡ್ ಮುಂತಾದ ದೇಶಗಳಿಗೆ ಭೇಟಿ ನೀಡುತ್ತಿದ್ದಾರೆ. ಅವರನ್ನು ಅಲ್ಲಿಗೆ ಕರೆಸಿಕೊಳ್ಳಲಾಗುತ್ತಿದೆ. ಆಕೆಗೆ



ಸಾಕಷ್ಟು ಹಣಕಾಸು ದೊರೆಯುತ್ತಿದೆ ಮತ್ತು ಆಕೆಯನ್ನು ಸಿಪಿಐ(ಎಂ) ವಿರುದ್ಧದ ಸಾಧನವಾಗಿ ಬಳಸಲಾಗಿದೆ.

ಇತ್ತೀಚೆಗೆ ನಂದಿಗ್ರಾಮದ ವಿಷಯದಲ್ಲಿ ನಡೆದದ್ದೇನು ನಂದಿಗ್ರಾಮದಲ್ಲಿ ಸಿಪಿಐ(ಎಂ) ಕಾರ್ಯಕರ್ತರು ಅತ್ಯಾಚಾರ, ಲೂಟಿ, ಕೊಲೆ ಮಾಡಿದ್ದಾರೆ ಎಂದು ಸಿಬಿಐ ವರದಿ ನೀಡಿದೆ ಎಂದು ವ್ಯಾಪಕವಾಗಿ ಮಾಧ್ಯಮಗಳಲ್ಲೆಲ್ಲಾ ಪ್ರಚಾರ ಮಾಡಲಾಯಿತು.

ಆ ನಂತರ ಕೋರ್ಟು, ಸಿಬಿಐ ಅಂತಹ ವರದಿ ನೀಡಿಲ್ಲ ಎಂದು ಸ್ಪಷ್ಟಪಡಿಸಿತು. ಹಾಗಾದರೆ ಈ ಮಧ್ಯೆ ನಡೆದದ್ದೇನು ? ಸಿಪಿಐ(ಎಂ) ಕಾರ್ಯಕರ್ತರು ಲೂಟಿ, ಕೊಲೆ, ಅತ್ಯಾಚಾರ ಮಾಡಿದ್ದಾರೆ ಎಂದು ತೃಣಮೂಲ ಕಾರ್ಯಕರ್ತರು ಸಿಬಿಐಗೆ ನೀಡಿದ ಸುಳ್ಳು ದೂರಿನ ಪ್ರತಿಗಳನ್ನೇ ತೋರಿಸಿ ಇಂತಹ ಗುಲ್ಲೆಬ್ಬಿಸಲಾಯಿತು.

ಬಲಿಷ್ಟ ಪಕ್ಷ ಚಳುವಳಿ ರೂಪಿಸಬೇಕಿದೆ

- ಎ.ಜೆ.ಕೆ. ನಾಯರ್

ಕರ್ನಾಟಕ ರಾಜ್ಯದಲ್ಲಿ ಬಲಿಷ್ಠವಾದ ಚಳುವಳಿಯನ್ನು ರೂಪಿಸಬೇಕಾಗಿದೆ, ಬಲಿಷ್ಠವಾದ ಪಕ್ಷವನ್ನು ಕಟ್ಟಬೇಕಿದೆ. ಈ ನಿಟ್ಟಿನಲ್ಲಿ ನಾವು ಮುಂದೆ ಸಾಗಬೇಕಾದರೆ 'ಸಾಮೂಹಿಕ ಕ್ರಾಂತಿಕಾರಿ' ಪಕ್ಷವನ್ನೇ ಕಟ್ಟದೇ ಬೇರೆ ದಾರಿ ಇಲ್ಲ. ನಾವು ನಮ್ಮ ವಿರೋಧಿ ವರ್ಗವನ್ನು ಬೆನ್ನು ಹತ್ತುವುದು, ಕೋಮುವಾದಿ ಶಕ್ತಿಗಳನ್ನು ಎದುರಿಸುವುದು ನಮ್ಮ ಮುಂದಿರುವ ಗಂಭೀರ ಸವಾಲು. ರಾಜ್ಯದಲ್ಲಿ 140 ಕಡೆ ಕೆಂಬಾವುಟ ಇದೆ. ಅಲ್ಲಿ ಪಕ್ಷ ಮತ್ತು ಸಾಮೂಹಿಕ ಸಂಘಟನೆಗಳು ಗಟ್ಟಿಯಾಗಬೇಕು, ಬೆಳೆಯಬೇಕು.

ನಮಗೆ ಒಂದು ನೋವಿದೆ. ಅಕ್ಕಪಕ್ಕದ ಕೇರಳ, ತಮಿಳುನಾಡು, ಆಂಧ್ರದಲ್ಲಿ ಪಕ್ಷ ಮತ್ತು ಚಳುವಳಿ ಪ್ರಬಲಗೊಂಡು ಮುಂದೆ ಹೋಗುತ್ತಿದೆ. ಅದೇ ರೀತಿ ಕರ್ನಾಟಕದ ಚಳುವಳಿಯನ್ನು ನಾವೆಲ್ಲ ಸೇರಿ ಮುಂದೆ ತೆಗೆದುಕೊಂಡು ಹೋಗಬೇಕಿದೆ.



ಸಮಾರೋಪದಲ್ಲಿ ಕಾಂ.ವಿ.ಜೆ.ಕೆ. ನಾಯರ್

ಬದಲಾಗುತ್ತಿರುವ ಪರಿಸರದಲ್ಲಿ ಮಹಿಳೆಯ ಮೇಲಿನ ಹಿಂಸೆಯ ಸ್ವರೂಪವೂ ಬದಲಾಗುತ್ತಿದೆ. ಮತ್ತು ಹೆಚ್ಚುತ್ತಿದೆ. ಇಲ್ಲಿ ಅಪರಾಧಿ ಯಾರು?

ಅಪರಾಧಿ ಕೌನ್ ಹೈ?

ಕೆ.ಎಸ್.ವಿಮಲಾ


'ಹಿಂದೆಲ್ಲ ಹಿಂಸೆ ಎಂದ್ರೆ ಹೊಡೀತಿದ್ರು, ಈಗ ನೋಡಿ ಎಷ್ಟು ಅಮಾನುಷವಾಗಿ ಆ್ಯಸಿಡ್ ಹಾಕ್ತಾರೆ"- ಇದು ಇತ್ತೀಚೆಗೆ ಮೈಸೂರಿನಲ್ಲಿ ತಂದೆಯ ಮನೆಯಿಂದ ತಾನು ಕೇಳಿದಷ್ಟು ಹಣ ತರಲಿಲ್ಲವೆಂಬ ಕಾರಣಕ್ಕೆ ಗಂಡನೇ ಹೆಂಡತಿಗೆ ಮೈಮೇಲೆಲ್ಲ ಆ್ಯಸಿಡ್ ಸುರಿದು, ಕುಡಿಸಿ, ಪೈಶಾಚಿಕತೆಯನ್ನು ಮೆರೆದ ಪ್ರಕರಣಕ್ಕೆ ನನ್ನ ಗೆಳತಿಯೊಬ್ಬಳು ಪ್ರತಿಕ್ರಯಿಸಿದ್ದು, ಹಿಂಸೆಯ ಸ್ವರೂಪ ಬದಲಾದ ಹಾಗೆಲ್ಲ, ಅದು ಕ್ರೌರ್ಯದ ಗರಿಷ್ಠ ಮಜಲನ್ನು ತಲುಪಿದ ಹಾಗೆಲ್ಲ ಹಿಂದೆ ನಡೆಯುತ್ತಿದ್ದ ಹೊಡೆತ, ಬೈಗುಳಗಳು ಸಹನೀಯ ಹಿಂಸೆಯಾಗಿದ್ದವು ಎನಿಸಿ ಬಿಡುವ ಮಟ್ಟಕ್ಕೆ ನಾವು ತಲುಪುತ್ತಿದ್ದೇವೆ. ಕ್ರಮೇಣ ಮನುಷ್ಯರೆನಿಸಿಕೊಂಡವರೂ ಇಂತಹ ಘಟನೆಗಳನ್ನು "ಇಂದು ನಗರದಲ್ಲಿ ವಿದ್ಯುತ್ ವ್ಯತಯ' ಎಂಬ ಶೀರ್ಷಿಕೆಯನ್ನೋದಿದಷ್ಟೇ ನಿರ್ವಿಕಾರವಾಗಿ ಓದಿ ಪಕ್ಕಕ್ಕಿಡುವ ಮಟ್ಟಿಗೆ ಸಂವೇದನಾರಹಿತರಾಗಿ ಬಿಡುವ ಅಪಾಯದ ಘಟ್ಟ ಇದು. ಪ್ರತಿನಿತ್ಯ ಅತ್ಯಾಚಾರ, ಮಾನಭಂಗ, ವರದಕ್ಷಿಣೆಗಾಗಿ ಹಿಂಸೆ, ಕೊಲೆ, ಒಂಟಿ ಮಹಿಳೆ, ವೃದ್ಧೆಯರನ್ನು ಆಸ್ತಿಗಾಗಿ, ಕೊಲ್ಲುವುದು ಹಾಲುಗಲ್ಲದ ಹಸುಳೆಗಳ ಮೇಲೆ ಕಾಮುಕರ ಪೈಶಾಚಿಕ ಆಕ್ರಮಣ ಹೀಗೆ ನಡೆಯುತ್ತಲೇ ಇದೆ. ಮೇಲ್ನೋಟಕ್ಕೆ ಇದು ಪಾಳೆಯಗಾರಿ ವ್ಯವಸ್ಥೆಯ ಪ್ರತಿಬಿಂಬವೆನಿಸಿದರೂ, ಅದು ಅಷ್ಟೇ ಅಲ್ಲ.

ವ್ಯಕ್ತಿತ್ವವಲ್ಲ ವಸ್ತು

"ಮಹಿಳೆ" ವ್ಯಕ್ತಿ ಎನಿಸಿಕೊಳ್ಳದೇ ವಸ್ತುವಾಗಿಯೇ ಪರಿಗಣಿಸಲ್ಪಡುವ ಅವಳ ಸ್ವತಂತ್ರ ಅಸ್ತಿತ್ವಕ್ಕೆ ಎಂದೂ ಬೆಲೆಕೊಡದ ಪರಂಪರೆಯೇ ನಮ್ಮದು. ಹಾಗೆಂದೇ ಪುರುಷಾಧಿಪತ್ಯದ ಬಲದ ಮುಂದೆ ಸಂಪೂರ್ಣ ಶರಣಾಗಿ ಹೋದ- "ಅಹಲ್ಯೆ, ದ್ರೌಪದಿ, ಸೀತೆ, ತಾರಾ, ಮಂಡೋದರಿ" ಎಂಬ ಪಂಚಕನ್ನೆಯರನ್ನು ಮಾದರಿಗಳಾಗಿ ವರ್ಣಿಸಿ ಅವರ ನಾಮ ಸ್ಮರಣೆಯೇ ಮಹಾಘಾತಕಗಳನ್ನು ನಾಶ ಮಾಡುತ್ತದೆಂಬ ಶ್ಲೋಕ ಇಂದಿಗೂ ಬೋಧಿಸಲ್ಪಡುತ್ತಿದೆ (ಅಹಲ್ಯಾ, ದ್ರೌಪದಿ, ಸೀತಾ, ತಾರಾ, ಮಂಡೋದರಿ ತಥಾ, ಪಂಚಕನ್ಯಾ ಸ್ಮರೇ ನಿತ್ಯಂ ಮಹಾಪಾತಕ ನಾಶನಂ) ಈ ಪರಂಪರೆಯ ಮಾದರಿಗಳ ಅಮಲಿನಲ್ಲಿಯೇ ತೇಲಾಡುತ್ತಿರುವ ಈ ಸಮಾಜಕ್ಕೊಂದು ಮಂಗನಿಗೆ ಭಂಗಿ ಕುಡಿಸಿದ ಹಾಗೆ ಬಂಡವಾಳದ ಅಟ್ಟಹಾಸ ಸೇರಿಕೊಂಡಿದೆ.

ಝಣ ಝಣ ಕಾಂಚಾಣ ಮತ್ತು ಸಂಸ್ಕೃತಿ

ಮನುಷ್ಯರ ಬದುಕಿನ ಅವಶ್ಯಕತೆಗಾಗಿ ಹಣವೆಂಬುದು ಬದಲಾಗಿ ಹಣಕ್ಕಾಗಿಯೇ ಮನುಷ್ಯರೆಂಬ ಹೊಸ ಭಾಷ್ಯ ಚಾಲ್ತಿಗೆ ಬಂದಿದೆ. ಝಣ ಝಣ ಕಾಂಚಾಣದ ಮೋಡಿಯಲ್ಲಿ ಸಿಲುಕಿರುವ ವ್ಯಕ್ತಿಗಳಿಗೆ ಹಣ ಗಳಿಕೆಯ ದಾರಿ ಯಾವುದಾದರೂ ಸರಿ ಎಂಬಂತಾಗಿದೆ. ಮಾರುಕಟ್ಟೆ ಸಂಸ್ಕೃತಿಯಲ್ಲಿ ವಸ್ತುವಿನ ವಿಕ್ರಯ ಮಹಿಳೆಯ ಮೈಮಾಟ, ಹಾವಭಾವ, ಭಂಗಿಗಳ ಮೇಲೆ ಅವಲಂಬಿತವಾಗಿದೆ. ವಿಕ್ರಯಕ್ಕಿಟ್ಟ ವಸ್ತು ಏನೇ ಇರಲಿ, ಅದರ ಪ್ರಚಾರಕ್ಕೆ ಹದಿಹರೆಯದ ಆಕರ್ಷಕ ಮೈಮಾಟದ, ಮತ್ತು 'ಪ್ರದರ್ಶನಕ್ಕೆ ನಾಚದ' ತರುಣಿಯೇ ಆಗಬೇಕು. ತೊಡಗಿಸಿದ ಬಂಡವಾಳಕ್ಕೆ ನಿಗದಿತ ಲಾಭ ಬರಬೇಕೆಂದರೆ ಬಂಡವಾಳದ ಭಾಗವಾಗಿಯೇ ಜಾಹಿರಾತು ಕೂಡ ಬರುತ್ತದೆ ಮತ್ತು ಪೈಪೋಟಿಯ ಯುಗದಲ್ಲಿ ಯಾವುದಕ್ಕೂ ಎಲ್ಲೆ ಇಲ್ಲ. ಬೆಳ್ಳಿ ತೆರೆಯ ಮೇಲೆ ಮಿಂಚುಳ್ಳಿಗಳ ಹಾಗೆ ಹರಿದಾಡುವ ಲಲನಾಮಣಿಯರ ತಳುಕು, ಬಳುಕುಗಳು ಹುಟ್ಟಿಸುವ ಆಸೆಗಳು ಒಂದೆಡೆ ಧನದಾಹಕ್ಕೆ ಕುಮ್ಮಕ್ಕು ನೀಡಿದರೆ ಮತ್ತೊಂದೆಡೆ ಮಹಿಳಾ ಜಾತಿಯಾದರೆ ಸಾಕು, ಮಗುವಾದರೇನು, ಮುದುಕಿಯಾದರೇನು ತನ್ನ ಈ ಕ್ಷಣದ ತೃಷೆ ತೀರಿಸಿಕೊಳ್ಳಲು ಬೇಕೆಂಬ ಕೀಳು ಪ್ರವೃತ್ತಿಗೆ ಪ್ರಚೋದನೆ ನೀಡುತ್ತದೆ.



ಗ್ರಾಹಕ ಸಂಸ್ಕೃತಿಯ ನಗ್ನ ನೃತ್ಯ ಹುಟ್ಟು ಹಾಕುತ್ತಿರುವ ಕೊಳ್ಳುಬಾಕ ಸಂಸ್ಕೃತಿ ಹಣ ಹೊಂದಿಸಲು ಮನೆಗೆ ಬಂದ ಸೊಸೆ, ಹೆಂಡತಿಯು-ತವರು ಆಧಾರವಾಗಬೇಕೆಂದು ನಿರೀಕ್ಷಿಸುತ್ತಿದೆ. ಇದರ ಪರಿಣಾಮವೇ ಎಂತಹ ಕಾನೂನಿಗೂ ಜಗ್ಗದ ವರದಕ್ಷಿಣೆ ಹಿಂಸಾಚಾರ.

'ಸಿ.ಡಿ.ದರ್ಶನ'

ಇನ್ನೊಂದೆಡೆ ಮಾಧ್ಯಮಗಳು ವಹಿಸುತ್ತಿರುವ ಪಾತ್ರಗಳು ಕೂಡ ನಗಣ್ಯವಲ್ಲ. ನಡೆದ ಘಟನೆಗಳನ್ನು ಜನರಿಗೆ ತೋರಿಸುವುದೆಂದರೆ ಅದನ್ನು ಅನಗತ್ಯ ವೈಭವೀಕರಿಸಿ ಹಿಂಸೆಯ ವಿವಿಧ ಸ್ವರೂಪಗಳ ಬಗ್ಗೆ ತಿಳುವಳಿಕೆ ನೀಡುವ ಕಾರ್ಯಕ್ರಮದಂತೆ ಇರುತ್ತದೆ. ಕಳೆದ ಕೆಲವು ದಿನಗಳ ಹಿಂದೆ ಮೈಸೂರಿನಲ್ಲಿ ಕಾಮುಕನೊಬ್ಬ ಮಹಿಳೆಯರನ್ನು ದುರ್ಬಳಕೆ ಮಾಡಿಕೊಂಡು ನಡೆಸುತ್ತಿದ್ದ ಸಿ.ಡಿ.ಜಾಲವನ್ನು ಒಂದು ಟಿ.ವಿ.ಚಾನೆಲ್ ಪ್ರದರ್ಶಿಸಿದ ರೀತಿ ಹೇಗಿತ್ತೆಂದರೆ ಪುಕ್ಕಟೆ ಇಡೀ ರಾಜ್ಯದ ಜನತೆಗೆ ಸಿ.ಡಿ.ಪ್ರದರ್ಶನ ಏರ್ಪಡಿಸಿದಂತಿತ್ತು. ಇಲ್ಲಿ ಉಲ್ಲೇಖಿಸಲಾರದ ಮೂಲಗಳ ಪ್ರಕಾರ ಉನ್ನತ ಹುದ್ದೆಯಲ್ಲಿರುವ ವ್ಯಕ್ತಿಗಳೂ ಸೇರಿದಂತೆ ಸಿ.ಡಿ. ಕೊಂಡುಕೊಳ್ಳಲು ತೀವ್ರ ಪ್ರಯತ್ನ ನಡೆಸಿದರೆಂದು ಪಿಸುಮಾತುಗಳು ಕೇಳಿ ಬಂದವು. ಚೆಲುವಿನ ಚಿತ್ತಾರವೆಂಬ ಬೇರೆ ಭಾಷೆಯಿಂದ ಕನ್ನಡಕ್ಕೆ ಆಮದು ಮಾಡಿಕೊಂಡ ಕಥೆ.(ನಿಜವಾಗಿ ನಡೆದ ಘಟನೆ ಎಂಬ ಸಮಜಾಯಿಷಿ ಬೇರೆ)ಯ ಸಿನಿಮಾವೊಂದು ತಂದಿಟ್ಟ ಅಪಾಯ ಟಿ.ವಿ. ಧಾರಾವಾಹಿಯಂತೆ ಪ್ರಸಾರವಾಯಿತು. ಹದಿಹರೆಯವೆಂದೂ ಕರೆಯಲಾಗದ ಹೈಸ್ಕೂಲ್ ಮಕ್ಕಳು ಪ್ರೇಮಪಾಶದಲ್ಲಿ ಸಿಕ್ಕು, ಮನೆ ಬಿಟ್ಟು ಓಡಿ ಹೋಗಿ ಗೋವಾದ ಬೀಚ್‌ನಲ್ಲಿ ಗುಡಿಸಲು ಕಟ್ಟಿಕೊಂಡು ಕೂಲಿ-ನಾಲಿ ಮಾಡಿ ಬದುಕಿದಂತಹ ಸಿನಿಮೀಯ ಘಟನೆಗಳು ಒಂದೆರಡಲ್ಲ. ಈಗ ಪ್ರಶ್ನೆ-ನೈಜ ಕಥೆಯನ್ನಾಧರಿಸಿ ಸಿನಿಮಾವೋ ಸಿನಿಮಾದಿಂದ ಘಟನೆಯೋ? ಈ ಎಲ್ಲ ಟ್ರೆಂಡ್‌ಗಳು ಹುಟ್ಟಿಕೊಂಡಿದ್ದಕ್ಕೆ ಕಾರಣಗಳನ್ನು ಹುಡುಕಬೇಕು. ಹುಡುಕಿದಾಗ ಸಮಾಜಮುಖಿ ಮನಸ್ಸುಗಳಿಗೆ ತಕ್ಷಣ ಗೋಚರಿಸುವುದು ಸಂಕಷ್ಟಗಳ ಸರಮಾಲೆಯನ್ನೇ ಹುಟ್ಟುಹಾಕಿದ ಉದಾರೀಕರಣ, ಜಾಗತೀಕರಣದ ನೀತಿಗಳು. ನಮ್ಮ ಸಮಾಜದಲ್ಲಿರುವ ಪಾಳೆಯಗಾರಿ, ಪುರುಷ ಪ್ರಧಾನ ಮೌಲ್ಯಗಳಿಗೆ ಇನ್ನಷ್ಟು ಪುಷ್ಟಿ ಕೊಡುವ ರೀತಿಯಲ್ಲಿ ಈ ನೀತಿಗಳು ಕೆಲಸ ಮಾಡುತ್ತಿವೆ.

ಅಗಾಧ ಸ್ಥಿತ್ಯಂತರ

ಇವು ಹೆಚ್ಚಾಗಿ ನಗರಗಳಲ್ಲಿಯ ಸ್ಥಿತಿ ಎಂಬುದು ಅರ್ಧಸತ್ಯ. ಇನ್ನೂ ಗ್ರಾಮೀಣ ಪ್ರದೇಶದತ್ತ ಒಂದು ದೃಷ್ಟಿ ಹಾಯಿಸಿದರೆ ಹಿಂದಿನ ಮುಗ್ಧ ಶ್ರಮಿಕ ಗ್ರಾಮೀಣ ಭಾರತವಿಂದು ನಿಧಾನವಾಗಿ ಗತಿ ಬದಲಿಸಿಕೊಂಡಿದೆ. 20 ವರ್ಷಗಳ ಕೆಳಗೆ- ಒಂದು ಸಮಾಜದ ಆಯಸ್ಸಿಗೆ ಈ ಅವಧಿ ಏನೂ ಅಲ್ಲ- ಆದರೆ ಸಾಮಾಜಿಕ ಸ್ಥಿತ್ಯಂತರದಲ್ಲಿ ಅಗಾಧ ಬೆಳವಣಿಗೆ ಕಂಡು ಬರುತ್ತದೆ. ಅಂದು ಮನೆಗಳಲ್ಲಿ ಸ್ನಾನಗೃಹಗಳಿಗೆ ಬಾಗಿಲುಗಳೇ ಇಲ್ಲದಿದ್ದ ಸಂದರ್ಭವೂ ನಮಗೆ ಕಷ್ಟವೆನಿಸುತ್ತಿರಲಿಲ್ಲ. ಆದರಿಂದು ರಸ್ತೆಯ ಮೇಲೆ ನಡೆದುಕೊಂಡು ಹೋಗಿ ಸೇರಬೇಕಾದ ಸ್ಥಳವನ್ನು ಸುರಕ್ಷಿತವಾಗಿ ತಲುಪುವ ಭರವಸೆ ಇಲ್ಲ. ಪ್ರತಿನಿತ್ಯ ಯಾವುದೋ ಒಂದು ಜಿಲ್ಲೆಯ ಹಳ್ಳಿ ಮೂಲೆಯಲ್ಲಿ ಮಗುವಿನ ಮೇಲೆ ಅತ್ಯಾಚಾರ, ಅಪ್ರಾಪ್ತ ಬಾಲಕಿಯ ಮೇಲೆ ಅತ್ಯಾಚಾರ ಆರೋಪಿ ಪರಾರಿ ಎಂಬ ವರದಿಗಳು ಬರುತ್ತಲೇ ಇರುತ್ತವೆ. ಪುಟ್ಟ ಹುಡುಗಿಯರ ಮೇಲೆ ಆಕ್ರಮಣ ನಡೆಸಿ, ಲೈಂಗಿಕ ಕ್ರಿಯೆ ಎಂದರೇನೆಂದೇ ತಿಳಿಯದ ಮುಗ್ಧ ಬಾಲಕಿಯರು, ಬಾಲ್ಯದ ಎಳಸಿನಲ್ಲಿಯೇ ತಾಯಂದಿರಾಗಿ-ಆಡುವ ಕೂಸಿಗೊಂದು ಕಾಡುವ ಕೂಸಿಗೆ ಜನ್ಮ ನೀಡುವಂತಾಗಿದೆ. ಈ ಎಲ್ಲಾ ಅಪರಾಧಗಳ ವಿರುದ್ಧ ಪ್ರತಿಭಟನೆ, ಅಪರಾಧಿಗೆ ಶಿಕ್ಷೆಗೆ ಒತ್ತಾಯಗಳು ನಡೆಯುತ್ತಲೇ ಇರುತ್ತವಾದರೂ ಎಲ್ಲೋ ಒಂದು ಕಡೆ ಸಾಂಕೇತಿಕತೆಯ ಮಟ್ಟಕ್ಕೆ ನಿಂತು ಬಿಡುತ್ತದೆ ಎನಿಸುತ್ತಿದೆ ಮತ್ತು ಎಸಗಿದ ಅಪರಾಧಕ್ಕೆ ಅಪರಾಧಿಗೆ ಶಿಕ್ಷೆ ಕೊಡಿಸುವುದನ್ನು ಒತ್ತಾಯಿಸುತ್ತಲೇ ಅಂತಹ ವಾತಾವರಣ ನಿರ್ಮಾಣಕ್ಕೆ ಪೂರಕವಾದ ಹಲವು ಸಂಗತಿಗಳನ್ನು ವಿಶ್ಲೇಷಿಸಬೇಕಾದ ತುರ್ತಿದೆ. ಅಲ್ಲಿ ಮಾಧ್ಯಮಗಳ ಪಾತ್ರ ಪ್ರಮುಖವಾಗಿ ಕಂಡು ಬರುತ್ತದೆ. ಬಹುಶಃ ಅಪರಾಧಿಗಳ ಮನೋ ವೈಜ್ಞಾನಿಕ ವಿಶ್ಲೇಷಣೆಯಂತಹ ಪ್ರಯತ್ನಗಳು ಅಪರಾಧಕ್ಕೆ ಒಂದು ಒಳನೋಟ ನೀಡಲು ಸಾಧ್ಯವಾಗಬಹುದು.

ಸುಧಾರಣ ಯುಗದ ನರಳಿಕೆಗಳು

ಇನ್ನು ಸುಧಾರಣಾಯುಗದ ನರಳಿಕೆಗಳು ತೆರೆದಿಟ್ಟ ಅಪಾಯಗಳಂತೂ ಮಹಿಳೆಯರ ಬದುಕಿಗೆ ಶಾಪವೇ ಆಗಿದೆ. ಹೆಚ್ಚುತ್ತಿರುವ ಕಾರ್ಷಿಕ ಬಿಕ್ಕಟ್ಟು ಬಿಗಡಾಯಿಸುತ್ತಿರುವ ಉದ್ಯೋಗ ಪರಿಸ್ಥಿತಿ, ಹೆಚ್ಚುತ್ತಿರುವ ವಲಸೆ, ದೈಹಿಕ ಶ್ರಮಕ್ಕೆ ಆಸ್ಪದವಿಲ್ಲದೇ ದೇಹ ವಿಕ್ರಯ ಆ ಜಾಗವನ್ನು ಕ್ರಮಿಸುತ್ತಿರುವುದು ಇವೆಲ್ಲವೂ ಈ ಹಂತದ ವಿಪರೀತಗಳು. ಒಂದು ವಸ್ತುನಿಷ್ಠ ವಿಶ್ಲೇಷಣೆ ಮತ್ತು ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯಗಳು ಕೇವಲ ಅವರ ಮೇಲಲ್ಲ. ಬದಲಿಗೆ ಒಬ್ಬ ಮಹಿಳೆಯ ಮೇಲೆ ಅತ್ಯಾಚಾರ ನಡೆದರೆ ಅದು ಇಡೀ ಸಮಾಜದ ಮೇಲೆ ನಡೆದಂತೆ ಮತ್ತು ಹಾಗೆ ಘಟಿಸಿದ ಅಪರಾಧ ಕೇವಲ ಎಸಗಿದ ವ್ಯಕ್ತಿಯದು ಮಾತ್ರವಲ್ಲ. ಇಡೀ ಸಮಾಜ ಅದರ ಹೊಣೆ ಹೊರಬೇಕೆಂಬ ಅಂಶವೇ ನಿರ್ದಿಷ್ಟವಾಗಬೇಕು. ಯಾವುದೇ ಹಿತಾಸಕ್ತಿಗಳಿಂದಾಗಿ ಅಪರಾಧಿಯನ್ನು ಅಪರಾಧವನ್ನು ಮುಚ್ಚಿಹಾಕಲಾಯಿತೆಂದರೆ ಅದು ಇಡೀ ಸಮಾಜಕ್ಕೆ ಅಂಟುವ ಕಳಂಕವೆಂಬಂತಾಗಬೇಕು. ಆಗ ಮಾತ್ರವೇ ಇಂತಹ ಪ್ರಕರಣಗಳು ಹಿಡಿತಕ್ಕೆ ಬರಲು ಸಾಧ್ಯ. ಅದಿಲ್ಲದೇ ಈಗ ಜಾರಿಗೆ ಬಂದಿರುವ ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆಯಂತಹ ಕಾನೂನುಗಳು ಕೂಡ ಹಲ್ಲಿಲ್ಲದ ಹಾವಾಗಿ ಹಾವಾಡಿಗನ ಬುಟ್ಟಿಯಲ್ಲಿ ಬಿದ್ದು ಕೊಂಡಿರುವಂತಾಗಿ ಬಿಡುತ್ತದೆ. ●

ಬಡತನದ ಪ್ರಮಾಣ ಮತ್ತು ಪಡಿತರ ಚೀಟಿಗಳು

ಕೇಂದ್ರ ಸರ್ಕಾರ ಮತ್ತು ಯೋಜನಾ ಆಯೋಗ ಬಡತನ ರೇಖೆಯನ್ನು ಕೆಳಕ್ಕೆ ತುಳಿದು ಬಡತನದ ಪ್ರಮಾಣವನ್ನು ಕಡಿಮೆ ಮಾಡುವ ಕುತಂತ್ರದಲ್ಲಿ ಒಂದೆರಡು ದಶಕಗಳಿಂದ ತೊಡಗಿದೆ. ಈ ಅಂಕಿ ಅಂಶಗಳ ಪ್ರಕಾರ ಕರ್ನಾಟಕದಲ್ಲಿ ಬಡತನದ ಪ್ರಮಾಣ ಈ ರೀತಿ ಇದೆ. ನಗರ-25.25; ಗ್ರಾಮೀಣ 17.38 ಒಟ್ಟು 20.04. ಕೇಂದ್ರ ಸಕಾರ ಈ ಬಡತನದ ಪ್ರಮಾಣಕ್ಕೆ ಅನುಗುಣವಾಗಿ ಬಿಪಿಎಲ್ ಪಡಿತರ ಚೀಟಿಗಳನ್ನು ಕಡಿತ ಮಾಡಬೇಕೆಂದೂ, ಈ ಪ್ರಮಾಣಕ್ಕನುಗುಣವಾಗಿ ಮಾತ್ರ ರಿಯಾಯತಿ ದರದ ಧಾನ್ಯವನ್ನು ಕೇಂದ್ರ ಸರ್ಕಾರ ಒದಗಿಸುತ್ತದೆಂದೂ, ಇದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಬಿಪಿಎಲ್ ಕಾರ್ಡ್ ನೀಡಿದರೆ ಆಗ ಹೆಚ್ಚಿನ ಸಹಾಯ ಧನ ಹೊರೆಯನ್ನು ರಾಜ್ಯ ಸರ್ಕಾರಗಳೇ ಹೊರಬೇಕಾಗುತ್ತದೆಂದು ನಿರ್ದೇಶನ ನೀಡಿದೆ.

ಅದಕ್ಕನುಗುಣವಾಗಿ ಬಿಪಿಎಲ್ ಕಾರ್ಡ್‌ಗಳನ್ನು ಕಡಿತ ಮಾಡುವ ಪ್ರಯತ್ನದಲ್ಲಿ ಎಸ್.ಎಂ.ಕೃಷ್ಣ ಸರ್ಕಾರದಿಂದ ಆರಂಭವಾದ ಪ್ರಯತ್ನಗಳು ಹಾಗೇ ನಡೆಯುತ್ತಾ ಬಂದಿವೆ. ಕೊಟ್ಟ ಕಾರ್ಡಗಳನ್ನು ಕಸಿದುಕೊಳ್ಳುವುದು ಬೇರೆ ಬಣ್ಣದ ಕಾರ್ಡ್‌ಗಳನ್ನು ನೀಡುವುದು ಹಲವುಬಾರಿ ನಡೆದು ಇಡೀ ಪಡಿತರ ವ್ಯವಸ್ಥೆಯನ್ನೇ ಗೊಂದಲಕ್ಕೆ ನೂಕಿದೆ. ವಿಶ್ವಬ್ಯಾಂಕ್ ನಿರ್ದೇಶನದಂತೆ ಕಂಪ್ಯೂಟರ್ ಭಾವಚಿತ್ರ ಹಾಗೂ ಬೆರಳಚ್ಚಿನ ಗುರುತನ್ನುಳ್ಳ ಕಾರ್ಡ್ ನೀಡಲು ಪ್ರಯತ್ನಿಸಲಾಗಿದೆ. ಅದರಲ್ಲಿ ಸೈಕಲ್, ಚಪ್ಪಲಿ, ಟಿ.ವಿ, ಕೈಗಡಿಯಾರ ಇತ್ಯಾದಿ ಸಲಕರಣೆಗಳನ್ನುಳ್ಳವರನ್ನೆಲ್ಲಾ ಬಿಪಿಎಲ್ ಪಟ್ಟಿಯಿಂದ ಕಿತ್ತುಹಾಕಲು ಪ್ರಯತ್ನಿಸಲಾಗಿದೆ. ಯೂನಿಟ್ ಪದ್ಧತಿಯ ಹೆಸರಿನಲ್ಲಿ ಒಬ್ಬರಿಗೆ ಒಂದು ತಿಂಗಳಿಗೆ ಕೇವಲ ನಾಲ್ಕು ಕೆಜಿಯಂತೆ ಅಕ್ಕಿಯನ್ನು ನೀಡುವ ಮೂಲಕ ಆಹಾರ ಧಾನ್ಯಗಳ ಪ್ರಮಾಣವನ್ನು ತೀವ್ರವಾಗಿ ಕಡಿತ ಮಾಡಲಾಗಿದೆ. ಬಿಪಿಎಲ್ ಪಡಿತರ ಚೀಟಿಯನ್ನು ಆಸ್ಪತ್ರೆ, ಶಿಕ್ಷಣ ಸಂಸ್ಥೆಗಳಿಗಾಗಿ ಬಳಸುವುದನ್ನು ನಿಷೇಧಿಸಲಾಗಿದೆ.



ಆದರೆ ಅದೇ ಸಮಯದಲ್ಲಿ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ ಕರ್ನಾಟಕದಲ್ಲಿ ಬಡತನ ಬಹಳ ಗಂಭೀರ ಪ್ರಮಾಣದಲ್ಲಿದೆಯೆಂದು ಎತ್ತಿ ತೋರಿಸಿದೆ. ಮೂರು ವರ್ಷದೊಳಗಿನ ಮಕ್ಕಳಲ್ಲಿ ವಯಸ್ಸಿಗೆ ತಕ್ಕ ತೂಕವಿಲ್ಲದ ಮಕ್ಕಳು ಶೇ 60.4 ರಷ್ಟು, ತೂಕ ಕಡಿಮೆ ಇರುವ ಮಹಿಳೆಯರು ಶೇ 31.4ರಷ್ಟು, ರಕ್ತಹೀನತೆಯಿಂದ ಬಳಲುವ ಮಹಿಳೆಯರು ಶೇ 50.3ರಷ್ಟು ಎಂದು ಎತ್ತಿತೋರಿಸಿದೆ. ಆಹಾರದ ಲಭ್ಯತೆಯನ್ನು ಮಾಪನಮಾಡಿದ ಮತ್ತೊಂದು ಸಮೀಕ್ಷೆ ಮಾನವನ ಕನಿಷ್ಠ ಅಗತ್ಯವಾದ 2600 ಕ್ಯಾಲೋರಿ ಆಹಾರ ಲಭ್ಯವಾಗದ ಜನರ ಸಂಖ್ಯೆ ಕರ್ನಾಟಕದಲ್ಲಿ ಶೇ 84 ಎಂದು ಲೆಕ್ಕಿಸಿದೆ. ಅಂದರೆ ಶೇ 84 ಜನಕ್ಕೆ ಆಹಾರದ ತೀವ್ರ ಅಗತ್ಯವಾಗಿರುವಾಗ ಅದನ್ನು ಕೇವಲ ಶೇ 20ಕ್ಕೆ ನೂಕಿ ಪಡಿತರ ವ್ಯವಸ್ಥೆಯನ್ನೇ ನಾಶಮಾಡುವ ಹುನ್ನಾರ ಅಡಗಿದೆ.

ಸರ್ಕಾರಗಳ ಇಂತಹ ನೀತಿಯ ವಿರುದ್ಧ ಕರ್ನಾಟಕದ ಜನತೆ ದಿಟ್ಟವಾಗಿ, ಸ್ವಯಂಪ್ರೇರಿತರಾಗಿ ಪ್ರತಿಭಟಿಸಿದರು. ವಿವಿಧ ಕಡೆಗಳಲ್ಲಿ ಕಛೇರಿಗಳಿಗೆ ನುಗ್ಗಿ ಅಧಿಕಾರಿಗಳಿಗೆ ಬೆದರಿಕೆ ಹಾಕಿದರು. ಈ ಬೆದರಿಕೆಗಳಿಗೆ ಮಣಿದ ಸರ್ಕಾರ ತಾತ್ಕಾಲಿಕ ಕಾರ್ಡ್‌ಗಳನ್ನು ನೀಡಿ ಪಡಿತರ ಮುಂದುವರೆಸಬೇಕಾಯಿತು. ಬಿಪಿಎಲ್ ಕಾರ್ಡ್ ನೀಡುವ ಬಗ್ಗೆ ಯೂನಿಟ್ ಪದ್ಧತಿಗೆ ವಿರೋಧವಾಗಿ ಮಹಿಳಾ ಮತ್ತು ಕೂಲಿಕಾರ ಸಂಘಟನೆಯಿಂದ ಮಂಡ್ಯದಲ್ಲಿ ಪ್ರತಿಭಟನೆಗಳು ತೀವ್ರವಾಗಿ ನಡೆದು ಪೋಲೀಸ್‌ರ ಲಾಠಿಏಟು, ಬೂಟುಕಾಲು ತುಳಿತವನ್ನು ಎದುರಿಸಿದರು ಇನ್ನೂ ಬಿಪಿಎಲ್ ಕಾರ್ಡ್ ನೀಡಿಲ್ಲ. ಮುಂದಿನ ದಿನಗಳಲ್ಲಿ ಮತ್ತೆ ಇದೇ ಪ್ರಯತ್ನಗಳು ಆರಂಭವಾಗಲಿವೆ. ಮತ್ತೆ ತೀವ್ರವಾದ ಪ್ರತಿಭಟನೆಗೆ ಸಜ್ಜಾಗಬೇಕಾಗಿದೆ.

ಸಿಪಿಐ(ಎಂ) ಸಮ್ಮೇಳನ ಭಿನ್ನ ಹೇಗೆ?



ಕಮ್ಯೂನಿಸ್ಟ್ ಪಕ್ಷಗಳಿಗೆ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇಲ್ಲ. ಅವುಗಳಲ್ಲಿ ಸರ್ವಾಧಿಕಾರಿ ಧೋರಣೆ ಇರುತ್ತದೆ ಎಂಬುದು ಹಳೆಯ ಆರೋಪ. ದುರಂತವೆಂದರೆ ಹೀಗೆ ಆಪಾದನೆ ಮಾಡುವ ಪಕ್ಷಗಳೊಳಗೆ ಆಂತರಿಕ ಪ್ರಜಾಪ್ರಭುತ್ವವೇ ಇರುವುದಿಲ್ಲ. ಕಮ್ಯೂನಿಸ್ಟ್ ಪಕ್ಷಗಳನ್ನು ಹೊರತುಪಡಿಸಿ ಬೇರೆ ಯಾವ ರಾಜಕೀಯ ಪಕ್ಷಗಳಿಗೂ ಪ್ರಜಾಪ್ರಭುತ್ವದ ಪರಿಕಲ್ಪನೆಗಳೇ ಇಲ್ಲ. ಬಿಜೆಪಿ-ಕಾಂಗ್ರೆಸ್- ಜೆಡಿ(ಎಸ್)- ಬಿಎಸ್‌ಪಿ ಯಂತಹ ಪಕ್ಷಗಳಲ್ಲಿ ವ್ಯಕ್ತಿಪೂಜೆ, ಬಹುಪರಾಕ್ ಸಂಸ್ಕೃತಿ ಮನೆ ಮಾಡಿದೆ ಆದರೆ ಸಿಪಿಐ(ಎಂ) ಪಕ್ಷದ ಸಮ್ಮೇಳನಗಳ ವಿಧಾನವನ್ನು ಹತ್ತಿರದಿಂದ ಗಮನಿಸಿದರೆ



ಧ್ವಜಾರೋಹಣ ಹಿರಿಯ ಸಂಗಾತಿ
ಕೆ.ಆರ್.ಶ್ರೀಯಾನ್‌ರಿಂದ

ಸಿಪಿಐ(ಎಂ) ಅಳವಡಿಸಿಕೊಂಡಿರುವ ನೈಜ ಪ್ರಜಾಪ್ರಭುತ್ವದ ವಿಧಾನ ಅದರ ಅನನ್ಯತೆ ಅರ್ಥವಾಗುತ್ತದೆ. ಕಾರ್ಯಕರ್ತರೇ ಸ್ವತಃ ತಮ್ಮ ಬೆವರುಹರಿಸಿ ಸಮ್ಮೇಳನಗಳನ್ನು ಯಶಸ್ವಿಗೊಳಿಸುವ ರೀತಿ ಅಚ್ಚರಿ ಮೂಡಿಸುತ್ತದೆ.


ಸಮ್ಮೇಳನದ ಮಹತ್ವ: ಸಿಪಿಐ(ಎಂ) ಪಕ್ಷದಲ್ಲಿ ಸಮ್ಮೇಳನಗಳಿಗೆ ಅತ್ಯುನ್ನತ ಸ್ಥಾನವನ್ನು ಕಲ್ಪಿಸಲಾಗಿದೆ. ಪಕ್ಷದ ಅಖಿಲ ಭಾರತ ಸಮ್ಮೇಳನದ ನಿಗದಿಯಾದ ನಂತರ ಉಳಿದ ಕೆಳ ಹಂತದ ಎಲ್ಲಾ ಸಮ್ಮೇಳನಗಳು ಅದಕ್ಕೆ ಪೂರ್ವಾಭಾವಿಯಾಗಿ



ಹುತಾತ್ಮ ಸಂಗಾತಿಗಳಿಗೆ ಗೌರವ ವಂದನೆ...
ಮಾಜಿ ಶಾಸಕ ಜಿ.ವಿ.ಶ್ರೀರಾಮರೆಡ್ಡಿ

ನಡೆಯುತ್ತವೆ. ಪ್ರತಿ ಮೂರು ವರ್ಷಕ್ಕೊಮ್ಮೆ ನಡೆಯುವ ಈ ಸಮ್ಮೇಳನಗಳೇ ಎಲ್ಲ ಸಮಿತಿಗಳಿಗಿಂತ ಉನ್ನತವಾದಂತಹವು.

ಸಮ್ಮೇಳನದಲ್ಲಿ ಏನನ್ನು ಚರ್ಚಿಸಲಾಗುತ್ತದೆ: ಬಂಡವಾಳಶಾಹಿ ರಾಜಕೀಯ ಪಕ್ಷಗಳ ಸಭೆ ಸಮಾರಂಭ, ಸಮಾವೇಶಗಳಲ್ಲಿ ಬೃಹತ್ ಗಾತ್ರದ ವೇದಿಕೆ ನಿರ್ಮಾಣಗೊಂಡು ಅದರಲ್ಲಿ ಆ ಪಕ್ಷದ



ದಾಖಲಾತಿ ಸಮಿತಿ

ರಾಜ್ಯ-ರಾಷ್ಟ್ರೀಯ ಮುಖಂಡರು ಬಂದು ಭಾಷಣ ಮಾಡಿದರೆ, ಅವರಿಗೆ ಹಾರ ತುರಾಯಿಗಳನ್ನು ಹಾಕಿದರೆ ನಾಯಕರಿಗೆ ಜೈಕಾರಗಳನ್ನು ಕೂಗಿದರೆ ಅಲ್ಲಿಗೆ ಎಲ್ಲವೂ ಮುಕ್ತಾಯ. ಆದರೆ ಸಿಪಿಐ(ಎಂ)ನ ಸಮ್ಮೇಳನ ಅತ್ಯಂತ ವಿಭಿನ್ನ.

ಪ್ರತಿನಿಧಿಗಳನ್ನು ಎಲ್ಲಿಂದ ಕರೆ ತರಲಾಗುತ್ತದೆ: ರಾಜ್ಯ ಸಮ್ಮೇಳನಕ್ಕೆ ಪೂರ್ವಾಭಾವಿಯಾಗಿ ಎಲ್ಲಾ ಜಿಲ್ಲೆಗಳಲ್ಲೂ ಜಿಲ್ಲಾ ಸಮ್ಮೇಳನಗಳು ನಡೆದು ಅಲ್ಲಿಂದ ಪ್ರಜಾಸತ್ತಾತ್ಮಕವಾಗಿ ಪ್ರತಿನಿಧಿಗಳ ಆಯ್ಕೆ ನಡೆಯುತ್ತದೆ. ಹೀಗೆ ಆಯ್ಕೆಯಾದವರನ್ನು ಹೊರತುಪಡಿಸಿ ಈ ಸಮ್ಮೇಳನದ ಒಳಗೆ ಯಾವೊಬ್ಬ ವ್ಯಕ್ತಿಯೂ ಅವರು ಎಷ್ಟೇ ಪ್ರತಿಷ್ಠಿತರಾಗಲಿ,



ದೊಡ್ಡರವಾಗಲಿ ಸುಳಿಯಲು ಅವಕಾಶವಿಲ್ಲ. ಇಲ್ಲಿಗೆ ಆಯ್ಕೆಯಾಗುವವರೆಗೆ ಜಿಲ್ಲಾ ತಾಲ್ಲೂಕು ಸ್ಥಳೀಯ ಮಟ್ಟಗಳಲ್ಲಿ ರೈತ-ಕಾರ್ಮಿಕ- ವಿದ್ಯಾರ್ಥಿ -ಯುವಜನ -ಮಹಿಳಾ ಚಳುವಳಿಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಮೂಲಕ ಜನರ ಸಮಸ್ಯೆಗಳಿಗೆ ಸ್ಪಂದಿಸುವವರೇ ಆಗಿರುತ್ತಾರೆ.

ವೇದಿಕೆಗೆ ನುಗ್ಗುವವರಿಲ್ಲ

ಬೆಂಗಳೂರಿನ ಹೊಂಗಸಂದ್ರ ಪ್ರದೇಶದಲ್ಲೊಮ್ಮೆ ಸಿಪಿಐ(ಎಂ) ಪಕ್ಷದ ಜಿಲ್ಲಾ ಸಮ್ಮೇಳನ ನಡೆದಿತ್ತು. ಮೂರು ದಿನಗಳ ಸಮ್ಮೇಳನದ ಕಲಾಪಗಳ ಫೋಟೋ ತೆಗೆದ ಫೋಟೋ ಗ್ರಾಫರ್ ಅಚ್ಚರಿಯೋ ಅಚ್ಚರಿ. ಆತ ಬೇರೆ ಬೇರೆ ಪಕ್ಷಗಳ ಸಮಾರಂಭಗಳಲ್ಲಿ ಫೋಟೋ ತೆಗೆಯಲು ಹೋಗಿದ್ದರಂತೆ. 'ನನ್ನ ಫೋಟೋ ತೆಗಿ, ನನ್ನದು' ಎಂಬ ಕಿತ್ತಾಟ. ವರಾತಗಳನ್ನು ನೋಡಿ ತಲೆ ಚಿಟ್ಟು ಹಿಡಿದಿತ್ತಂತೆ. ಇಲ್ಲಿ ಮೂರು ದಿನಗಳ ಸಮ್ಮೇಳನದಲ್ಲಿ ಒಬ್ಬರಾದರೂ ಇವರ ಬಳಿ ಬಂದು ನನ್ನ ಫೋಟೋ ತೆಗೆಯಿರಿ ಎನ್ನಬಾರದೇ? ಏನಾಶ್ಚರ್ಯ!!!

ಸಮ್ಮೇಳನದಲ್ಲಿ ಭಾಗವಹಿಸಿದ ಸುಮಾರು 330 ಪ್ರತಿನಿಧಿ ವೀಕ್ಷಕರಲ್ಲಿ ಅತ್ಯಂತ ಕಿರಿಯ ವಯಸ್ಸಿನ 23 ವರ್ಷದ ಪ್ರತಿನಿಧಿಯಿಂದ ಅತ್ಯಂತ ಹಿರಿಯ ಸಂಗಾತಿ ಸವರಿದಾಸ್(88ವರ್ಷ) ರವರೆಗೆ ಎಲ್ಲರೂ ಸಮ್ಮೇಳನದ ಎಲ್ಲಾ ಕಲಾಪಗಳಲ್ಲೂ ಅತ್ಯಂತ ಶಿಸ್ತಿನಿಂದ ಭಾಗವಹಿಸಿದ್ದರು. ಈ ಶಿಸ್ತು ಆರ್‌ಆರ್‌ಎಸ್‌ನ ಸರ್ಕಸ್ ಪ್ರಾಣಿಗಳ ಶಿಸ್ತಿನಂತಿರಲಿಲ್ಲ. ಬದಲಾಗಿ ಸ್ವಯಂ ಪ್ರೇರಣೆಯಿಂದ ತಮ್ಮ ಜವಾಬ್ದಾರಿಯನ್ನು ಅರಿತು ಪಾಲ್ಗೊಳ್ಳುತ್ತಿದ್ದ ಶಿಸ್ತಾಗಿತ್ತು. ಬೇರೆ ರಾಜಕೀಯ ಪಕ್ಷದ ಸಮಾರಂಭಗಳಲ್ಲಿ ವೇದಿಕೆಗೆ ಏರಲು ನೂಕುನುಗ್ಗಲು ಆದರೆ ಅಲ್ಲಿ ಸಂಬಂಧಪಟ್ಟವರನ್ನು ಹೊರತುಪಡಿಸಿ ಯಾರು ವೇದಿಕೆಯ ಹತ್ತಿರವೂ ಸುಳಿಯುವುದಿಲ್ಲ.

ರಾಜ್ಯದ ಮಟ್ಟಿಗೆ ಹೇಳುವುದಾದರೆ ರಾಜ್ಯ ಸಮ್ಮೇಳನವೇ ಸಿಪಿಐ(ಎಂ)ನ ಅತ್ಯುನ್ನತ ಸಮಿತಿ. ಕೇಂದ್ರ ಮಟ್ಟದಲ್ಲಾದರೆ ಮಹಾಧಿವೇಶನ. ಅಖಿಲ ಭಾರತ ಮಟ್ಟದ ಸಮ್ಮೇಳನದ ಪ್ರಕ್ರಿಯೆ ಆರಂಭವಾಯಿತು. ಅಂದರೆ ಅದರ ಅರ್ಥ ಗ್ರಾಮ, ಅಥವಾ ವಾರ್ಡ್, ಕಾರ್ಖಾನೆ ಅಥವಾ ತ್ಯಂತ

> ಎಲ್ಲಾ ಪಕ್ಷಗಳಲ್ಲೂ ಆದ್ದೂರಿ
> ಕಾರ್ಯಕ್ರಮಗಳು ನಡೆಯುತ್ತವೆ.
> ಆದರೆ ಸಿಪಿಐ(ಎಂ)ನ
> ಈ ಸಮ್ಮೇಳನ ತುಂಬಾ ಭಿನ್ನ.

ತಳಮಟ್ಟದ ಪಕ್ಷದ ಶಾಖೆಗಳಲ್ಲಿ ಇರುವ ಎಲ್ಲ ಸದಸ್ಯರೂ ಸೇರಿ ಚರ್ಚಿಸುವ ಸಮ್ಮೇಳನಗಳು ಆರಂಭವಾದರು ಅಂತಲೇ ಅರ್ಥ. ಹೀಗೆ ಗ್ರಾಮ, ಪ್ರದೇಶ, ತಾಲ್ಲೂಕು ಜಿಲ್ಲೆ ಪ್ರತಿ ಹಂತದ ಸಮ್ಮೇಳನಗಳೂ ತಮ್ಮ ತಮ್ಮ ಮೇಲಿನ ಸಮಿತಿಗಳ ಸಮ್ಮೇಳನಗಳಿಗೆ ಪ್ರತಿನಿಧಿಗಳನ್ನು ಚುನಾಯಿಸುತ್ತದೆ. ಪ್ರತಿನಿಧಿಗಳೂ ಅಷ್ಟೆ ತಮ್ಮ ವ್ಯಾಪ್ತಿಯಲ್ಲಿನ ಪಕ್ಷದ ಸದಸ್ಯರಿಗೆ ತಕ್ಕಂತೆ ಮಾತ್ರ ಪ್ರಾತಿನಿಧ್ಯ.


ಯಾವುದೇ ಹಂತದಲ್ಲೂ ಆ ಹಂತದ ಸಮ್ಮೇಳನವೇ ಅತ್ಯುನ್ನತ ಸಮಿತಿ ಅಂತಾದ ಮೇಲೆ ಸಮ್ಮೇಳನ ಹೇಗೆ ನಡೆಸಬೇಕು ಎಂಬುದು ಬಹಳ ಮುಖ್ಯವಾದ ಪ್ರಶ್ನೆಯಾಗುತ್ತದೆ. ಏಕೆಂದರೆ ಕಳೆದ ಮೂರು ವರ್ಷಗಳ ಸಂಬಂಧಿಸಿದ ಸಮಿತಿಯ ಕಾರ್ಯ ನಿರ್ವಹಣೆ ಯನ್ನು ವಿಮರ್ಶಿಸುವ, ಟೀಕಿಸುವ ಹಕ್ಕು ಸಮ್ಮೇಳನಕ್ಕೆ ಇರುತ್ತದೆ ಮಾತ್ರವಲ್ಲ. ಮುಂದಿನ ಅವಧಿಗೆ ಹೊಸ ನಾಯಕತ್ವವನ್ನು ಅಂದರೆ

ಪ್ರತಿನಿಧಿ ಸಮೂಹ



ಸಮಿತಿಯನ್ನು ಆಯ್ಕೆ ಮಾಡುವ ಅಧಿಕಾರವು ಈ ಸಮ್ಮೇಳನಕ್ಕೆ ಇರುವುದು. ಇಂತಹ ಮಹತ್ವವುಳ್ಳ ಸಮ್ಮೇಳನದಲ್ಲಿ ಗೊಂದಲ ಗೋಜಲು ಇಲ್ಲದೇ ಕಲಾಪ ಸರಾಗವಾಗಿ, ನಿಷ್ಪಕ್ಷಪಾತವಾಗಿ ಸಾಗಬೇಕಲ್ಲ.

ರಾಜ್ಯಸಮ್ಮೇಳನದಲ್ಲಿ ಹಳೆಯ ರಾಜ್ಯಸಮಿತಿಯು ಸಮ್ಮೇಳನದ ಕಲಾಪ ನಡೆಸಲು ಅಧ್ಯಕ್ಷೀಯ ಮಂಡಳಿಯನ್ನು ಸೂಚಿಸುತ್ತದೆ. ಸೂಚನೆಗೆ ಸಮ್ಮೇಳನದ ಒಪ್ಪಿಗೆ ಕೊಟ್ಟರೆ ಆ ಮಂಡಳಿ ಕಲಾಪ ನಡೆಸಬಹುದು. ಆ ಸಮಿತಿಯು ಸರ್ವ ಸ್ವತಂತ್ರವಲ್ಲ. ವೇಳಾಪಟ್ಟಿ ಸೇರಿದಂತೆ ಸಮ್ಮೇಳನದ ಕಲಾಪ ಪಟ್ಟಿಗೆ ಅಧ್ಯಕ್ಷೀಯ ಮಂಡಳಿಯ ಸಮ್ಮೇಳನದ ಒಪ್ಪಿಗೆ ಪಡೆದುಕೊಳ್ಳಬೇಕು. ಹೆಜ್ಜೆ ಹೆಜ್ಜೆಯಲ್ಲಿ ಕ್ರಮಬದ್ಧತೆ, ಪ್ರಜಾಪ್ರಭುತ್ವ ವಿಧಾನ. ಯಾವುದೇ ಮುಖಂಡರ ವ್ಯಕ್ತಿಗತ ನಿರ್ದೇಶನಗಳಿಗೆ ಅವಕಾಶವಿಲ್ಲ.



ಸ್ವಾಗತ ಸಮಿತಿಯ ಪ್ರಧಾನ ಕಾರ್ಯದರ್ಶಿ
ಕಾಂ.ಪ್ರಭಾಕರ್


ಈ ರಾಜ್ಯ ಸಮ್ಮೇಳನ ವನ್ನು ಅಚ್ಚುಕಟ್ಟಾಗಿ ನಡೆಸಿಕೊಟ್ಟದ್ದು ಬಿ.ಮಾಧವ, ಎ.ಖಾನ್, ಅರ್ಜುನನ್, ಲೀಲಾವತಿ, ಗಂಗಾ, ಸಿದ್ಧಗಂಗಪ್ಪ ಅವರಿದ್ದ ಅಧ್ಯಕ್ಷೀಯ ಮಂಡಳಿ.

ಜನವರಿ 22, ರಾಜ್ಯಸಮಿತಿಯ ಪರವಾಗಿ ಕಾರ್ಯದರ್ಶಿ ಜಿ.ಎನ್.ನಾಗರಾಜ್ ಸಮ್ಮೇಳನದ ಮುಂದೆ ವರದಿ ಮಂಡಿಸಿದರು. ಅದು ಕರಡು ವರದಿ. ಮುಖ್ಯವಾಗಿ ರಾಜ್ಯದ ಸಾಮಾಜಿ, ಆರ್ಥಿಕ, ರಾಜಕೀಯ ಪರಿಸ್ಥಿತಿ, ದುಡಿಯುವ ಜನರ ಬದುಕಿನ ಮೇಲಿನ ಧಾಳಿಗಳು, ಒಂದು ವರ್ಷಗಳಲ್ಲಿ ನಡೆಸಲಾದ ಹೋರಾಟ, ಚಳುವಳಿಗಳು, ಪಕ್ಷದ ಮತ್ತು ಸಾಮೂಹಿಕ ಸಂಘಟನೆಗಳ ಬೆಳವಣಿಗೆ, ಕೊರತೆ, ದೌರ್ಬಲ್ಯಗಳು ಎಲ್ಲವೂ ಸೇರಿದ ವಿಮರ್ಶಾತ್ಮಕ ವರದಿ. ಜೊತೆಗೆ ಮುಂದಿನ ಅವಧಿಯ ಚಳುವಳಿಗೆ ಮಾರ್ಗದರ್ಶಕವಾಗುವ ಕಾರ್ಯಸೂಚಿಯ ಕರಡು.

ಇಂತಹ ವರದಿಯ ಮೇಲೆ ಒಟ್ಟು ಚರ್ಚೆ ನಡೆದದ್ದು 10 ಗಂಟೆ ಒಟ್ಟಾರೆ 70 ಪ್ರತಿನಿಧಿಗಳು ವಿವಿಧ ಜಿಲ್ಲೆ ವಿವಿಧ ಸಮುದಾಯಗಳನ್ನು ಪ್ರತಿನಿಧಿಸಿ ವರದಿಯ ಮೇಲೆ ಚರ್ಚಿಸಿದರು. ತಮ್ಮ ತಮ್ಮ ಜಿಲ್ಲೆಗಳ ಉತ್ತಮ ಹೋರಾಟಗಳ ಅನುಭವ, ವಿಮರ್ಶೆ ಸ್ವಯಂ ವಿಮರ್ಶೆ, ಕೆಲಸಗಳ ಕುರಿತ ಮೆಚ್ಚುಗೆ, ಟೀಕೆ, ಸಲಹೆ ಎಲ್ಲವೂ ಇದ್ದವು. ಮಾತನಾಡುವ ಪ್ರತಿನಿಧಿಗೆ ನಿಗದಿತ ಸಮಯದ ನಿರ್ಬಂಧ ಬಿಟ್ಟರೆ ಬೇರೆ ಯಾವ ನಿರ್ಬಂಧ ಕಟ್ಟಳೆಗಳೂ ಇಲ್ಲ.

ಚರ್ಚೆಯ ನಂತರ ಸಮ್ಮೇಳನಕ್ಕೆ ಅಲ್ಲಿ ಮೂಡಿಬಂದ ವಿಮರ್ಶೆ, ಟೀಕೆಗಳಿಗೆ ರಾಜ್ಯಸಮಿತಿ ಉತ್ತರಿಸಬೇಕು. ಅಭಿಪ್ರಾಯಗಳನ್ನು ಕ್ರೋಢೀಕರಿಸಬೇಕು. ಮತ್ತೆ ರಾಜ್ಯಸಮಿತಿಯ ಪರವಾಗಿ, ರಾಜ್ಯ ಸಮಿತಿಯಲ್ಲಿ ಚರ್ಚಿಸಿದ ಉತ್ತರವನ್ನು ನೀಡಿದರು. ರಾಜ್ಯ ಕಾರ್ಯದರ್ಶಿಗಳು ಅದನ್ನು ಅಷ್ಟೇ ಸಮ್ಮೇಳನದ ಒಪ್ಪಬೇಕು. ಇಲ್ಲವಾದಲ್ಲಿ ಅದು ಅಂಗೀಕಾರವಾಗದು. ಕಾರ್ಯದರ್ಶಿಗಳ ಉತ್ತರಕ್ಕೆ ಸಮ್ಮೇಳನ ಸರ್ವಾನುಮತ ಒಪ್ಪಿಗೆ ನೀಡಿತು.

ಹೊಸ ಸಮಿತಿಯ ಆಯ್ಕೆಯ ವಿಧಾನವೂ ಅಷ್ಟೆ. ಹಳೆಯ ಸಮಿತಿಯು ತನ್ನ ಅನುಭವದ ಆಧಾರದಲ್ಲಿ ಸಮ್ಮೇಳನದ ಮುಂದೆ ಹೊಸ ಸಮಿತಿಯ ಸೂಚನೆಯನ್ನು ಇಡುತ್ತದೆ. ಯಾವುದೇ ಪ್ರತಿನಿಧಿ ರೀತಿಯ ಸೂಚನೆ ನೀಡಲು ಸ್ವತಂತ್ರರು. ಹಳೆಯ ಸಮಿತಿಯ ಸೂಚನೆ ಬದಲಿಗೆ ಬೇರೆ ಸೂಚನೆ ಇಲ್ಲವಾದಲ್ಲಿ



ಬೆಂಗಳೂರು ಪ್ರತಿನಿಧಿಗಳ ಗಂಭೀರ ಚರ್ಚೆ

ಪುಟ 12ಕ್ಕೆ

ಮೈಸೂರಿನಲ್ಲಿ ಕೆಂಬಾವುಟಗಳ ಕಲರವ

ಪುಟ 8 ರಿಂದ

'ಗುಜರಾತ್' ಮಾಡುತ್ತೇವೆ ಎಂಬ ಕೋಮುವಾದಿಗಳ ಬೊಬ್ಬೆಯನ್ನು ಖಂಡಿಸಿ, ಗುಜರಾತ್ ಮಾದರಿ ಎಂದರೆ ನರ ರಾಕ್ಷಸಿ ಮಾದರಿ, ಅದು ಕರ್ನಾಟಕಕ್ಕೆ ಬರಬಾರದು ಎಂದರು.

ಅಂದಿನ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ವಿಜೆಕೆ ನಾಯರ್ ಹೇಳಿದ ಮಾತುಗಳೇನು? ಕೆ.ಜಿ.ಜೋಳ 25 ರೂ ಆಗಿದೆ. ಆದರೆ ಕಾರು 1 ಲಕ್ಷ ಆಗಿದೆ. ಜೋಳದ ಬದಲಿಗೆ ಕಾರನ್ನು ತಿನ್ನಬೇಕೆ? ಅವರು ಕೇಳಿದರು. ದೇಶದಿಂದ ಗೋಧಿ ಕಳಿಸಿದ್ದು ಕೆ.ಜಿ.8 ರೂ.ಗೆ. ಆದರೆ ತರಿಸಿಕೊಂಡಿದ್ದು 16 ರೂ.ಗೆ. ಏನಿದು ಮೋಸ....? ಪ್ರಶ್ನಿಸಿದರು. 'ಭಾರತ ರತ್ನ' ಪ್ರಶಸ್ತಿಗಾಗಿ ಕಾಯುತ್ತಿರುವ ವಾಜಪೇಯಿ ಅಧಿಕಾರದಲ್ಲಿದ್ದಾಗ ಯಾಕೆ ಉದ್ಯೋಗ ಖಾತ್ರಿ ಯೋಜನೆ ಜಾರಿಗೆ ತರಲಿಲ್ಲ? ಸರಿಯಾದ ಪ್ರಶ್ನೆಯನ್ನೇ ಹಾಕಿದರು. ಏನು ಉತ್ತರ ಹೇಳಿಯಾರು, ಭಾರತ ಪ್ರಕಾಶಿಸುತ್ತಿದೆ ಅಂತ ಬೊಬ್ಬೆ ಹಾಕಿದವರು?

ಮಾಜಿ ಶಾಸಕರು, ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರೂ ಆದ ಜಿ.ವಿ.ಶ್ರೀರಾಮರೆಡ್ಡಿ ದೇಶದಲ್ಲಿ ಅಂಬಾನಿ ಕುಟುಂಬದ ಆಸ್ತಿ ಮಾತ್ರವೇ 3 ಲಕ್ಷ ಕೋಟಿಯಾಗಿದೆ ಎಂದು ದೇಶದ 'ಆರ್ಥಿಕ ಬೆಳವಣಿಗೆ' ಯ ಹೂರಣವನ್ನು ಬಿಡಿಸಿಟ್ಟರು.

ಭ್ರೂಣ ಹತ್ಯೆಯ ಕರಾಳ ಮುಖ, ಹೆಂಡತಿ ಎಂದು ಹೇಳಿಕೊಂಡು ಮಹಿಳೆಯನ್ನು ಅಕ್ರಮವಾಗಿ ವಿದೇಶಕ್ಕೆ ಸಾಗಿಸುವಾಗ ಸಿಕ್ಕಿಬಿದ್ದ ಗುಜರಾತ್‌ನ ಬಿಜೆಪಿ ಎಂ.ಪಿ. ಕಟಿಯಾರ್ ಮತ್ತು ಆತನ ಪಕ್ಷ ಬಿಜೆಪಿಯ ನೈತಿಕತೆಯನ್ನು ಬಯಲು ಮಾಡಿದವರು ಕೆ.ನೀಲಾ, ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರು. ಅವರು ಅಂಗನವಾಡಿಯಿಂದ ಹಿಡಿದು ಐಟಿ ಕ್ಷೇತ್ರದವರೆಗಿನ ಮಹಿಳೆಯರ ಅತಂತ್ರ ಸ್ಥಿತಿಯನ್ನು ವಿವರಿಸಿದರು.

"ಹಸಿವೆಂಬ ಹೆಬ್ಬಾವು

ಬಸಿರ ಬಂದು ಹಿಡಿದೆಡೆ..." ವಚನ ಹೇಳಿದ ನೀಲಾ, ಸಿಪಿಐ(ಎಂ) ಪಕ್ಷ ಎಂದರೆ 'ಹಸಿವಿಗನ್ನ ವಿಕ್ಕಿ ವಿಷವನಿಳುಹುವ ಗಾರುಡಿಗ' ಎಂದದ್ದು ತುಂಬಾ ಅರ್ಥಪೂರ್ಣವಾಗಿತ್ತು. ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರು, ಸ್ವಾಗತ ಸಮಿತಿಯ ಪದಾಧಿಕಾರಿಗಳು ವೇದಿಕೆಯಲ್ಲಿ ಹಾಜರಿದ್ದರು. ಆರಂಭದಲ್ಲಿ 'ಜನ್ನಿ'ಮತ್ತು ಸಂಗಡಿಗರು ಹಾಡಿದ ಹೋರಾಟದ ಹಾಡುಗಳು ಸಮಾರಂಭ ಮುಗಿದರೂ ಕಿವಿಯಲ್ಲಿ ಗುಯ್ ಗುಡುತ್ತಿದ್ದವು. ಈ ನಡುವೆಯೇ ಜನರು ಮೈದಾನದಲ್ಲಿ ಪುಸ್ತಕ, ಸಿ.ಡಿ. ಕ್ಯಾಸೆಟ್ ಹೀಗೆ ಜನಪರ ಚಳುವಳಿಗೆ ಬೇಕಾದದ್ದೆನ್ನೆಲ್ಲಾ ಕೊಂಡುಕೊಂಡರು. ■

ಬಿಲ್ಕಿಸ್ ಬಾನೊ ....

ಪುಟ 7ರಿಂದ

ಎಂದು ಹೇಳಿತ್ತು. ಆದರೆ ಇದುವರೆಗೂ ಅವರ ಜಾಮೀನು ಅರ್ಜಿಗಳ ವಿಚಾರಣೆಯೂ ಆಗಿಲ್ಲ, ಅವರೆಲ್ಲಾ ಜೈಲಿನಲ್ಲೇ ಕೊಳೆಯುತ್ತಿದ್ದಾರೆ.

ವಿಳಂಬ ಕೂಡದು

ಆರು ಕ್ರೂರ ವರ್ಷಗಳ ವರೆಗೆ ಕಾದ ನಂತರ ಬಂದಿರುವ ಈ ತೀರ್ಪಿನ ಹಿನ್ನೆಲೆಯಲ್ಲಿ ಕೆಲವು ಅಂಶಗಳನ್ನು ಗಮನಿಸಬೇಕು. ನಮ್ಮ ದೇಶದಲ್ಲಿ ನ್ಯಾಯ ಪಡೆಯಲು, ಅದರಲ್ಲೂ ಕೋಮುಗಲಭೆಗಳಿಂದ, ಪೀಡಿತರಾದವರು ನ್ಯಾಯ ಪಡೆಯಲು ಇಷ್ಟೊಂದು ಕಾಯಬೇಕೇ, ಉಳಿದ ಮೊಕದ್ದಮೆಗಳಲ್ಲಿ ಬೇಗನೇ ತೀರ್ಪು ನಿರೀಕ್ಷಿಸಬಹುದೇ? ಇನ್ನಷ್ಟು ವಿಳಂಬವಿಲ್ಲದೆ ತೀರ್ಪುಗಳು ಬರುವಂತಾಗುವುದು ಅತ್ಯಗತ್ಯ. ಏಕೆಂದರೆ ನ್ಯಾಯ ಒದಗಿಸುವುದು, ತಪ್ಪಿತಸ್ಥರಿಗೆ ಶಿಕ್ಷೆಯಾಗುವುದು ಯಾವುದೇ ಆಧುನಿಕ ನಾಗರಿಕ ಸಮಾಜದ ಮೂಲ ಅಂಶಗಳಲ್ಲೊಂದು, ಮಾತ್ರವೇ ಅಲ್ಲ, ಜನಗಳಲ್ಲಿ ನ್ಯಾಯವ್ಯವಸ್ಥೆಯ ಬಗ್ಗೆ ವಿಶ್ವಾಸ ಉಳಿಯಲು ಕೂಡಾ ಇದು ಅತ್ಯಗತ್ಯ. ಈ ವಿಶ್ವಾಸ ಮುರಿದರೆ ಅದು ಸಂಸದೀಯ ಪ್ರಜಾಪ್ರಭುತ್ವವನ್ನೇ ಬುಡಮೇಲು ಮಾಡುತ್ತದೆ. ಇದು ನಮ್ಮ ನ್ಯಾಯವ್ಯವಸ್ಥೆಯ ಮುಂದಿರುವ ಸವಾಲು ಮಾತ್ರವೇ ಅಲ್ಲ, ಸಮಸ್ತ ಭಾರತೀಯ ಪ್ರಜಾಪ್ರಭುತ್ವದ ಮುಂದಿರುವ ಸವಾಲು.

ಆದ್ದರಿಂದ ಸಿಬಿಐ ಸರ್ವೋಚ್ಚ ನ್ಯಾಯಲಯದ ನಿರ್ದೇಶನದಂತೆ ಕೆಲವು ಮೊಕದ್ದಮೆಗಳಲ್ಲಿ ನಡೆಸಬೇಕಾದ ತನಿಖೆಗಳನ್ನು ತ್ವರಿತಗೊಳಿಸಬೇಕಾದ್ದು ಅತ್ಯಗತ್ಯ. ಗುಜರಾತಿನ ಆಡಳಿತ ಮತ್ತು ಪೋಲೀಸರ ಬಗ್ಗೆ ಯಾರಿಗೂ ನಂಬಿಕೆ ಇಲ್ಲೆಂಬ ಸಂಗತಿ ನಮ್ಮ ಪ್ರಜಾಪ್ರಭುತ್ವಕ್ಕೆ, ನಮ್ಮ ನ್ಯಾಯಾಂಗ ವ್ಯವಸ್ಥೆಗೆ ಒಂದು ಕಳಂಕ. ಅಲ್ಲಿ ಪ್ರಭುತ್ವದ ಅಂಗಗಳೆಲ್ಲಾ ತಪ್ಪಿತಸ್ಥರನ್ನು ರಕ್ಷಿಸುವಲ್ಲಿ, ಈ ಗಲಭೆಗಳಿಗೆ ತುತ್ತಾದವರಿಗೆ ನ್ಯಾಯ ನಿರಾಕರಿಸುವಲ್ಲಿ ಶಾಮೀಲಾಗಿವೆ ಎಂಬುದು ಮತ್ತೆ-ಮತ್ತೆ ಸಾಬೀತಾಗಿದೆ.

ಈ ಸಂದರ್ಭದಲ್ಲಿ, ಕರ್ನಾಟಕವನ್ನು ಗುಜರಾತ್ ಮಾಡುತ್ತೇವೆ ಎಂದು ಬಿಜೆಪಿ ಪದೇ-ಪದೇ ಹೇಳಿಕೊಳ್ಳುತ್ತಿರುವುದು ರಾಜ್ಯಕ್ಕೆ ಎಷ್ಟೊಂದು ಆತಂಕಕಾರಿ ಎಂದು ಯಾರಾದರೂ ಅರ್ಥ ಮಾಡಿಕೊಳ್ಳಬಹುದು. ಪ್ರಧಾನ ಮಂತ್ರಿ ಪಟ್ಟಕ್ಕೇರಲು ಕಾಯುತ್ತಿರುವ ಅಡ್ವಾಣಿಯವರು ಬಿಜೆಪಿ/ಆರೆಸ್ಸೆಸ್ ಹಾಗೆಂದು ಸಾರಿದ ನಂತರವಂತೂ ಎಲ್ಲಾ ರಾಜ್ಯಗಳನ್ನು ಗುಜರಾತ್ ಮಾಡುತ್ತೇವೆ ಎಂಬ ರಾಗ ಆಲಾಪಿಸುತ್ತಲೇ ಇದ್ದಾರೆ. ಮುಂದಿನ ಸಾರ್ವತ್ರಿಕ ಚುನಾವಣೆಗಳಲ್ಲಿ ದಿಲ್ಲಿಯನ್ನು ವಶಪಡಿಸಿಕೊಳ್ಳಲು ದಂಡೆತ್ತಿ ಹೊರಟಿರುವ ಬಿಜೆಪಿಯ ರಥ ಈ ಅತ್ಯಂತ ಹೀನ ಕೋಮು ಹಿಂಸಾಚಾರವನ್ನು 'ಹಿಂದೂಗಳ ಹೆಮ್ಮೆ'ಯನ್ನು ಎತ್ತಿ ಹಿಡಿದ ಘಟನೆ ಎಂದು ಹೆಚ್ಚು-ಹೆಚ್ಚಾಗಿ ಬಿಂಬಿಸುವ ಪ್ರಯತ್ನದಲ್ಲಿ ತೊಡಗಿದೆ. ಬಿಲ್ಕಿಸ್ ಬಾನೊ ಮೊಕದ್ದಮೆಯ ತೀರ್ಪು ಇದರ ಹಿಂದಿರುವ ಭೀಕರ ನಿಜರೂಪವನ್ನು ಮತ್ತೊಮ್ಮೆ ಬಿಚ್ಚಿಟ್ಟಿದೆ. 'ಹಿಂದೂ ವೋಟ್ ಬ್ಯಾಂಕ್' ರಾಜಕೀಯದಲ್ಲಿ ಮಗ್ನವಾಗಿರುವ ಕೋಮುವಾದಿ ಶಕ್ತಿಗಳು ಮುಂಬರುವ ದಿನಗಳಲ್ಲಿ ಕೋಮು ಧೃವೀಕರಣವನ್ನು ತೀವ್ರಗೊಳಿಸಲು ಏನು ಮಾಡಲೂ ಹೇಸುವುದಿಲ್ಲ ಎಂಬುದು ಸ್ಪಷ್ಟ.. ಆದ್ದರಿಂದ ನ್ಯಾಯ ವ್ಯವಸ್ಥೆ ಚುರುಕುಗೊಳ್ಳಬೇಕು ಹಾಗೂ ಆಧುನಿಕ ಭಾರತದ ಜಾತ್ಯಾತೀತ ಅಡಿಗಲ್ಲಿಗೆ ಅಪಾಯಕಾರಿಯಾಗಿ ಮೇಲೆ ಬಂದಿರುವ ಈ ಸವಾಲನ್ನು ನೇರವಾಗಿ ಎದುರಿಸಬೇಕು ಎಂಬುದು ಎಲ್ಲಾ ಪ್ರಜಾಪ್ರಭುತ್ವವಾದಿಗಳ ಆಶಯ. ○

ಏಕಪಕ್ಷ, ದ್ವಿಪಕ್ಷಗಳ ಕಾಲ......

ಪುಟ 8 ರಿಂದ

ಸಮಾಜವಾದಿ ನೆಲೆಗಟ್ಟಿನಲ್ಲಿ ದೊಡ್ಡ ಶಕ್ತಿಯಾಗಿ ಮೂಡಿಬರುತ್ತಿವೆ ಹಾಗೂ ರಷ್ಯಾ ಕೂಡ ಅಮೇರಿಕಾದ ದಬ್ಬಾಳಿಕೆ ವಿರುದ್ಧ ದೃಢವಾಗಿ ದನಿಯೆತ್ತುತ್ತಿದೆ. ಈ ಹಿನ್ನೆಲೆಯಲ್ಲಿ ವಿಶ್ವವು ಬಹುಧ್ರುವೀಯ ಹಾದಿಯಲ್ಲಿ ಮೂಡಿಬರುತ್ತಿದೆ.

ದಕ್ಷಿಣ ಏಷ್ಯಾದ ಮಟ್ಟಿಗೆ ಹೇಳುವುದಾದರೆ, ಪಾಕಿಸ್ತಾನ ಮತ್ತು ಬಾಂಗ್ಲಾದೇಶಗಳಲ್ಲಿ ಪ್ರಜಾಪ್ರಭುತ್ವಕ್ಕಾಗಿ ಜರುಗುತ್ತಿರುವ ಹೋರಾಟಗಳು ಬಿರುಸುಗೊಳ್ಳುತ್ತಿವೆ. ನೇಪಾಳದಲ್ಲಿ ಸಂವಿಧಾನಿಕ ಅಸೆಂಬ್ಲಿಗೆ ಚುನಾವಣೆ ನಡೆಯುತ್ತಿದೆ. ಬರ್ಮಾದಲ್ಲಿ ಪ್ರಜಾಸತ್ತಾತ್ಮಕ ಚಳುವಳಿಯನ್ನು ಹತ್ತಿಕ್ಕಲಾಗುತ್ತಿದೆ. ಶ್ರೀಲಂಕಾದಲ್ಲಿ ಬೇಯುತ್ತಿರುವ ಬೇಗುದಿಯನ್ನು ತಣ್ಣಗಾಗಿಸಬೇಕಾದರೆ ತಮಿಳರಿಗೆ ಗಣರಾಜ್ಯದ ಚೌಕಟ್ಟಿನೊಳಗೆ ಸ್ವಾಯತ್ತತೆಯನ್ನು ನೀಡಬೇಕಿದೆ ಹಾಗೂ ಭಾರತವು ಮಧ್ಯಸ್ಥಿಕೆ ವಹಿಸಿ ಇದನ್ನು ಪರಿಹರಿಸಬೇಕಿದೆ.

ಅಮೇರಿಕಾವು ವಿಶ್ವಾದ್ಯಂತ ಬಹಳ ಕ್ರಿಯಾಶೀಲವಾಗಿ ಏಕಾಧಿಪತ್ಯದ ಬಲೆ ನೇಯುತ್ತಿದೆ. ಭಾರತವೂ ಒಳಗೊಂಡಂತೆ ಹಲವಾರು ದೇಶಗಳೊಂದಿಗೆ ಅದು 'ವ್ಯೂಹಾತ್ಮಕ ಒಪ್ಪಂದ'ಗಳನ್ನು ಮಾಡಿಕೊಳ್ಳುತ್ತಿದ್ದು, ಸಿಪಿಐ(ಎಂ) ಪಕ್ಷದ ದೃಢ ನಿಲುಮೆಯಿಂದಾಗಿ ಭಾರತದೊಂದಿಗಿನ ಒಪ್ಪಂದವನ್ನು ತಡೆಹಿಡಿಯಲಾಗಿದೆ.

ಅದೇ ಆರ್ಥಿಕ ನೀತಿ

ಪ್ರಸಕ್ತ ಸನ್ನಿವೇಶದಲ್ಲಿ ಯುಪಿಎ ಸರ್ಕಾರವು ಹಿಂದಿನ ಬಿಜೆಪಿ ನಾಯಕತ್ವದ ಎನ್‌ಡಿಎ ಅನುಸರಿಸುತ್ತಿದ್ದ ಜನ-ವಿರೋಧಿ ಆರ್ಥಿಕ ನೀತಿಗಳನ್ನೇ ಜಾರಿಗೊಳಿಸುತ್ತಿದೆ. ಕೋಮುವಾದಿ ಬಿಜೆಪಿಯು ಹಿಮಾಚಲ ಪ್ರದೇಶ, ಗುಜರಾತ್, ಪಂಜಾಬ್ ರಾಜ್ಯಗಳಲ್ಲಿ ಗೆದ್ದಿದ್ದು ಕೇಂದ್ರದಲ್ಲಿ ಮತ್ತೆ ಅಧಿಕಾರಕ್ಕೆ ಬರಲು ಹವಣಿಸುತ್ತಿದೆ. ಈ ಅಪಾಯವನ್ನು ತಡೆಗಟ್ಟಲು ಎಲ್ಲ ಶಕ್ತಿಗಳನ್ನು ನಾವು ಒಗ್ಗೂಡಿಸಬೇಕಿದೆ ಎಂದರು.

ಎಡಪಕ್ಷಗಳ ಐಕ್ಯತೆಯ ಕುರಿತು ಪ್ರಶಂಸಿದ ಅವರು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ, ಆದಿವಾಸಿಗಳು ಮತ್ತು ಅರಣ್ಯವಾಸಿಗಳ ಹಕ್ಕಿನ ರಕ್ಷಣೆ, ಮಾಹಿತಿ ಹಕ್ಕು ಕಾಯಿದೆ, ಕೌಟುಂಬಿಕ ಹಿಂಸೆ ವಿರುದ್ಧ ಕಾಯಿದೆ, ಪೋಟಾದಂತಹ ಅಪಾಯಕಾರಿ ಕಾಯಿದೆ ರದ್ದು ಮಾಡಿರುವುದು - ಇಂಥಹ ಪ್ರಮುಖ ಕಾರ್ಯಗಳನ್ನು ಎಡಪಕ್ಷಗಳ ಒತ್ತಡದಿಂದಾಗಿ ಕೇಂದ್ರ ಸರ್ಕಾರವು ಜಾರಿ ಮಾಡಿದೆ. ಹಾಗೆಯೇ ಜನ-ವಿರೋಧಿ ಕ್ರಮಗಳಾದ ಪೆಟ್ರೋಲ್ ಬೆಲೆ ಏರಿಕೆ, ಪಿಂಚಣಿ ನಿಯಂತ್ರಣ ಮಸೂದೆ, ಭಾರತ-ಅಮೇರಿಕಾ ಪರಮಾಣು ಒಪ್ಪಂದ, ಬ್ಯಾಂಕಿಂಗ್, ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ಬಂಡವಾಳ ರಿಯಲ್ ಎಸ್ಟೇಟ್ ವಲಯಗಳ ಖಾಸಗೀಕರಣ,, ವಿಶೇಷ ಆರ್ಥಿಕ ವಲಯ ಕಾಯಿದೆಯ ಕೊರತೆಗಳು - ಇಂಥವುಗಳ ಕುರಿತು ಸರ್ಕಾರದ ಮೇಲೆ ಒತ್ತಡ ಹೇರಲಾಗಿದೆ ಎಂದರು.

ಬಹುತೇಕ ಪ್ರಾದೇಶಿಕ ಪಕ್ಷಗಳು ಕೋಮುವಾದಿಗಳಲ್ಲವೆಂದು ನುಡಿದ ಅವರು, ಅಧಿಕಾರಕ್ಕಾಗಿ ಪ್ರಾದೇಶಿಕ ಪಕ್ಷಗಳು ಬಿಜೆಪಿಯೊಂದಿಗೆ ಕೈಜೋಡಿಸುತ್ತಿವೆ ಎಂದರು. ಸಾಮಾನ್ಯ ಜನಪರ ನೀತಿಗಳ ಆಧಾರದ ಮೇಲೆ ತೃತೀಯ ರಂಗದ ನಿರ್ಮಾಣಕ್ಕಾಗಿ ಇತರೆ ಪಕ್ಷಗಳೊಂದಿಗೆ ಪ್ರಯತ್ನ ನಡೆಸಲಾಗುತ್ತಿದೆ. ಕಳೆದ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷಗಳು ಒಟ್ಟಾರೆ ಗಳಿಸಿರುವ ಮತಪ್ರಮಾಣವು ಶೇ. 50ಕ್ಕಿಂತ ಕಡಿಮೆಯಿದ್ದು, ಪ್ರಾದೇಶಿಕ ಪಕ್ಷಗಳು ಶೇ. 50ಕ್ಕಿಂತ ಹೆಚ್ಚು ಮತಗಳಿಸಿವೆ. ಹೀಗಾಗಿ ಭಾರತದಲ್ಲಿ ಏಕಪಕ್ಷ ಮತ್ತು ದ್ವಿಪಕ್ಷ ಆಳ್ವಿಕೆಯ ಕಾಲ ಮುಗಿದಿದ್ದು, ಇನ್ನೇನಿದ್ದರೂ ಬಹುಪಕ್ಷೀಯ ಆಳ್ವಿಕೆಯದೇ ಪಾರುಪತ್ಯ ಎಂದರು.

ಕಳೆದ 18ನೇ ಮಹಾಧಿವೇಶನದ ನಿರ್ಣಯದಂತೆ, ಪಕ್ಷವನ್ನು ಕ್ಷಿಪ್ರವಾಗಿ ವಿಸ್ತರಿಸಿ ಬಲಗೊಳಿಸಬೇಕಾಗಿದೆ, ಉತ್ತಮ ಗುಣಮಟ್ಟದ ಸದಸ್ಯತ್ವವನ್ನು ಪಕ್ಷಕ್ಕೆ ತರಬೇಕಿದ್ದು, ಕೇವಲ ಘೋಷಣೆಗಳ ಮೂಲಕ ನಮಗಿರುವ ಕೊರತೆಯನ್ನು ನೀಗಿಸಲಾಗದು ಎಂದರು. ಮಾರ್ಕ್ಸ್‌ವಾದಿ-ಲೆನಿನ್‌ವಾದಿ ತತ್ವವನ್ನು ಸರಿಯಾಗಿ ಗ್ರಹಿಸಿಕೊಂಡು ಪಕ್ಷ ಮತ್ತು ಸಾಮೂಹಿಕ ಸಂಘಟನೆಗಳನ್ನು ವಿಸ್ತರಿಸಲು ಸಮ್ಮೇಳನದ ಪ್ರತಿನಿಧಿಗಳಿಗೆ ಕರೆನೀಡಿದರು.

- ಜಯ

ಸಿಪಿಐ(ಎಂ) ಸಮ್ಮೇಳನ ಭಿನ್ನ ಹೇಗೆ?

ಪುಟ 11 ರಿಂದ

ಸರ್ವಾನುಮತದ ಆಯ್ಕೆ ಬೇರೆ ಸೂಚನೆ ಇದ್ದಲ್ಲಿ ನಿಯಮಗಳ ಪ್ರಕಾರ ಚುನಾವಣೆ ರಹಸ್ಯ ಮತದಾನದ ವಿಧಾನ. ಗುಂಪುಗೂಡುವಿಕೆ, ಚರ್ಚೆಗೆ ಅವಕಾಶವಿಲ್ಲ. ಸ್ವಂತ ವಿವೇಚನೆ ಆಧಾರದಲ್ಲಿ ಮುಕ್ತ ಮತದಾನದ ಅವಕಾಶ. ಬಹುಮತದ ತೀರ್ಪಿಗೆ ಮನ್ನಣೆ, ಅಖಿಲ ಭಾರತ ಸಮ್ಮೇಳನಕ್ಕೆ ಪ್ರತಿನಿಧಿಗಳನ್ನು ಆರಿಸುವುದಕ್ಕೂ ಇದೇ ವಿಧಾನ.

ಇವುಗಳ ನಡುವೆಯೇ ರಾಜ್ಯದ ಜನರನ್ನು ಬಾಧಿಸುವ ಸಮಸ್ಯೆಗಳ ವಿರುದ್ಧ ಹತ್ತಾರು ನಿರ್ಣಯಗಳ ಅಂಗೀಕಾರ, ಜನಶಕ್ತಿ ವೆಬ್‌ಸೈಟ್ ಪ್ರದರ್ಶನ, ಮೈಸೂರಿನ ಹಿರಿಯ ಕಮ್ಯೂನಿಸ್ಟ್ ಮುಖಂಡರಾದ ಕಾಂ.ಎಂ.ಎನ್. ಉಗ್ರಪ್ಪನವರ ಆತ್ಮಕತೆಯ ಬಿಡುಗಡೆ, ಎಂ.ಎನ್.ಉಗ್ರಪ್ಪ ಕಾಂ.ಟಿ.ಎಸ್.ಮಣಿ ಇಬ್ಬರ ಭಾವಚಿತ್ರಗಳ ಬಿಡುಗಡೆ ಕೊನೆಗೆ ಸಮ್ಮೇಳನ ಯಶಸ್ವಿ ಮಾಡಿದ ಮುಖಂಡರು ಕಾರ್ಯಕರ್ತರಿಗೆ ಸ್ವಾಗತ ಸಮಿತಿಯ ಸಂಗಾತಿಗಳಿಗೆ ವಂದನೆ ಸಲ್ಲಿಕೆ...... ಗೆಲುವು ನಮ್ಮದು ಹಾಡು..... ಧ್ವಜ ಇಳಿಸಿದ್ದು......

ಸಮ್ಮೇಳನವನ್ನು ನಡೆಸಿದವರು ಯಾರು:

ಯಾವುದೋ ಉದ್ಯಮಪತಿಯಿಂದಲೋ ದೊಡ್ಡ ಬಂಡವಾಳಿಗನಿಂದಲೋ ಹಣವನ್ನು ತಂದು ಸಮ್ಮೇಳನವನ್ನು ನಡೆಸುವುದಿಲ್ಲ. ಈ ಸಮ್ಮೇಳನವನ್ನು ನಡೆಸಿದ್ದು ಮೈಸೂರಿನ ಮತ್ತು ರಾಜ್ಯದ ದುಡಿಯುವ ಜನತೆ ಮೈಸೂರಿನ ಸಹಸ್ರಾರು ದುಡಿಮೆಗಾರರು ತಮ್ಮ ದುಡಿಮೆಯೇ ಒಂದು ಪಾಲನ್ನು ಸಿಪಿಐ(ಎಂ)ನ ಸಮ್ಮೇಳನಕ್ಕೆ ಕೊಟ್ಟು ತನ್ನ ಸ್ವತಃ ಸ್ವಯಂಸ್ಫೂರ್ತಿಯಿಂದ ಕಾರ್ಯಕರ್ತರಾಗಿ ಸಮ್ಮೇಳನದ ತಯಾರಿಗಳಲ್ಲಿ ಹಗಲು ರಾತ್ರಿ ದುಡಿದು ಸಾವಿರಾರು ಸಂಖ್ಯೆಯಲ್ಲಿ ಮೆರವಣಿಗೆ ಬಹಿರಂಗ ಸಭೆಗಳಲ್ಲಿ ಭಾಗವಹಿಸಿದ್ದರು. ನಿಜವಾದ ಅರ್ಥದಲ್ಲಿ ಮೈಸೂರಿನಲ್ಲಿ ನಡೆದ ಸಿಪಿಐ(ಎಂ) ಸಮ್ಮೇಳನ ರಾಜ್ಯದ ದುಡಿವ ಜನರ ಸಮ್ಮೇಳನ, ದುಡಿವ ಜನರ ಜಾತ್ರೆ.

ಸಮ್ಮೇಳನದ ತಯಾರಿಯ ಪೂರ್ವಾಭಾವಿ ಕೆಲಸಗಳಾದ ಗೋಡೆ ಬರಹ, ಬಾನರ್ಸ್, ಬಂಟಿಂಗ್ಸ್, ನಿಧಿ ಸಂಗ್ರಹ, ಸಮ್ಮೇಳನದ ಕೆಲಸಗಳಿಗೆ ಬೇಕಾದ ಕಾರ್ಯಕರ್ತರನ್ನು ಯಾರು ಹಣಕೊಟ್ಟು ತಂಧಿರಲಿಲ್ಲ ಬದಲಾಗಿ ಅವರುಗಳ ತಮ್ಮ ಕೆಲಸಗಳನ್ನು ಬಿಟ್ಟು ಸಮ್ಮೇಳನದ ಯಶಸ್ಸಿಗೆ ದುಡಿದರು.

ರ್‍ಯಾಲಿಯಲ್ಲಿ ಭಾಗವಹಿಸಿದ ಕಾರ್ಯಕರ್ತರು ಸಮ್ಮೇಳನಕ್ಕೆ ಧನ ಸಹಾಯವನ್ನು ಮಾಡಿ ಮೆರವಣಿಗೆಗೆ ಭಾಗವಹಿಸಿದ್ದರು. ಬಿಜೆಪಿ ಪಕ್ಷವು ನಿಯಮಿತವಾಗಿ ಅಧಿವೇಶನಗಳನ್ನು ನಡೆಸುವಂತೆ, ಪ್ರಜಾಪ್ರಭುತ್ವದ ಪ್ರದರ್ಶನ, ಶಿಸ್ತನ್ನು ತೋರಿಸಿಕೊಂಡರೂ ಬಿಜೆಪಿಯನ್ನು ನಿಯಂತ್ರಿಸುವ ಹಿನ್ನೆಲೆಯ ಶಕ್ತಿ ಆರ್‌ಎಸ್‌ಎಸ್ ಎಂಬುದು ಬಹಿರಂಗ ಸತ್ಯ. ಆರ್‌ಎಸ್‌ಎಸ್‌ಗೆ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇಲ್ಲ. ಅದರ ಸರಸಂಘಚಾಲಕರು ಸಾಯುವ ಮುನ್ನ ಮುಚ್ಚಿದ ಲಕೋಟೆಯಲ್ಲಿ ಹೆಸರು ಬರೆದಿಟ್ಟು ಮುಂದಿನ ಸರಸಂಘ ಚಾಲಕ ಯಾರೆಂದು ಸೂಚಿಸಿ ಹೋಗುತ್ತಾರೆ. ಆಹಾ! ಎಂತಹ ಪ್ರಜಾಪ್ರಭುತ್ವ.

ಒಟ್ಟಾರೆ ಇದೆಲ್ಲವನ್ನು ಗಮನಿಸಿದರೆ ಬೇರೆ ಎಲ್ಲಾ ರಾಜಕೀಯ ಪಕ್ಷಗಳ ಕಾರ್ಯಕ್ರಮಗಳು ಸಿಪಿಐ(ಎಂ)ನ ಸಮ್ಮೇಳನಕ್ಕೂ ಅತ್ಯಂತ ಭಿನ್ನತೆಗಳು ಕಾಣಸುತ್ತವೆ. ಕಾರ್ಯಕರ್ತರು ಸ್ವಯಂ ಪ್ರೇರಣೆಯಿಂದ ದುಡಿದು ಈ ಸಮ್ಮೇಳನವನ್ನು ಯಶಸ್ವಿಗೊಳಿಸಿರುವುದಿರ ಹಿಂದಿನ ಅವರ ಶ್ರಮ, ತ್ಯಾಗ ಮತ್ತು ಬದ್ಧತೆ ಎದ್ದು ಕಾಣುತ್ತದೆ.

- ನವೀನ್ ಕುಮಾರ್.ಎಚ್.ಆರ್.

ಆರ್.ರಾಮಕೃಷ್ಣ

ಜನ ಸಂಘರ್ಷದ ಅನುಭವ ಮಂಥನ...

ಪುಟ 9 ರಿಂದ

ಚಳುವಳಿ, ವಿಜಾಪುರದಲ್ಲಿ ಸರ್ಕಾರಿ ಆಸ್ಪತ್ರೆಯ ಸುಧಾರಣೆಗಾಗಿ ನಡೆದ ಚಳುವಳಿ ಉತ್ತರ ಕರ್ನಾಟಕದಲ್ಲಿ ದೇವದಾಸಿ ಮಹಿಳೆಯರನ್ನು ಸಂಘಟಿಸಿ ಅವರನ್ನು ತೀವ್ರ ಹೋರಾಟಕ್ಕಿಸಿರುವುದು, ರಾಯಚೂರು, ಗುಲ್ಬರ್ಗಾ ಮುಂತಾದ ಜಿಲ್ಲೆಗಳಲ್ಲಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಸಮರ್ಪಕ ಜಾರಿಗಾಗಿ, ಕೂಲಿ ವಿತರಣೆಗಾಗಿ ನಡೆದ ಮಧ್ಯಪ್ರವೇಶಗಳು, ಉದ್ಯೋಗ ಖಾತ್ರಿ ಯೋಜನೆಯ ರಾಜ್ಯಾದ್ಯಂತ ಜಾರಿಯಾಗುವ ಈ ಸಂದರ್ಭದಲ್ಲಿ ಬಹಳ ಮಹತ್ವದ ಹೋರಾಟಗಳೆನಿಸಿದವು.

ಇರುವ ಶಕ್ತಿಯನ್ನು ಬಳಸಿ ಬಾಣೆ ಹಕ್ಕು, ಕಾಫಿ ಬೆಳೆಗಾರರ ಸಮಸ್ಯೆ, ಸ್ವಯಂಘೋಷಿತ ತೆರಿಗೆ ಪದ್ಧತಿ ವಿರುದ್ಧ ಕೊಡಗು ಜಿಲ್ಲೆಯ ಚಳುವಳಿ ಅನುಭವ ಭಿನ್ನವಾಗಿತ್ತು. ಶತ ಶತಮಾನಗಳು ಕಳೆದರೂ ತೊಲಗದ ಅಸ್ಪೃಶ್ಯತೆ, ಜಾತಿ ದಬ್ಬಾಳಿಕೆಯ ವಿರುದ್ಧ ಸಿಪಿಐ(ಎಂ) ತಜ್ಞ ನಡೆಸಿರುವ ಹೋರಾಟ, ವಹಿಸಿರುವ ಮುತುವರ್ಜಿಯು ದಲಿತ ಸಮುದಾಯದ ಗಮನ ಮಾತ್ರವಲ್ಲ ವಿಶಾಲ ಜನ ಸಮುದಾಯದ ಗಮನ ಸೆಳೆದಿದೆ ಎಂಬುದು ಚರ್ಚೆಯಲ್ಲಿ ಪ್ರತಿಫಲನ ಗೊಂಡಿತು.

ಕಂಬಾಲಪಲ್ಲಿ ದಲಿತರ ಸಜೀವ ಪ್ರಕರಣ ಸಂಬಂಧ ಮರು ತನಿಖೆಗಾಗಿ ಸಿಪಿಐ(ಎಂ) ಪಕ್ಷ ನಡೆಸಿದ ಕಾಲ್ನಡಿಗೆ ಜಾಥಾ, ನಡೆಸಿದ ಪ್ರಚಾರ, ಮುತುವರ್ಜಿ ಬಸವ ಕಲ್ಯಾಣದ ಚಿಟ್ಟಾ ದಲಿತರ ಮೇಲಿನ ದೌರ್ಜನ್ಯದ ವಿರುದ್ಧದ ಹೋರಾಟ; ದೇವಸ್ಥಾನ ಪ್ರವೇಶ ಚಳುವಳಿ, ವಿಜಾಪುರದ ಕಡಕೋಳ, ಅರೆಕೆರಾ ಚೆತ್ರಲ ಪ್ರಕರಣದಲ್ಲಿನ ಮುತುವರ್ಜಿ ವಿಶೇಷ ಪ್ರಶಂಸೆ ಅರ್ಹವಾದವು.

ಈ ನಡುವೆ ಅಂಗನವಾಡಿ, ಬಿಸಿಯೂಟ, ಬೀಡಿ, ಪಂಚಾಯಿತಿ ನೌಕರರು, ಹಮಾಲಿ, ಕಟ್ಟಡ ಕಾರ್ಮಿಕರು, ಗುತ್ತಿಗೆ ಕಾರ್ಮಿಕರು, ಮುಂತಾದ ವಿಭಾಗದ ಜನರ ಸಮಸ್ಯೆಗಳ ವಿರುದ್ಧ ಹಲವು ಹೋರಾಟಗಳು ನಡೆದು ಹಲವಾರು ಬೇಡಿಕೆಗಳನ್ನು ಈಡೇರಿಸಿಕೊಳ್ಳುವುದು ಸಾಧ್ಯವಾಗಿರುವುದು ಒಂದು ಗಮನಾರ್ಹ ಅಂಶವಾಗಿ ಚರ್ಚೆಗಳ ಮೂಲಕ ಕಂಡು ಬಂದಿತು.

ಜನಶಕ್ತಿ ವಾರಪತ್ರಿಕೆಯು ಬಹುವರ್ಣದ 16 ಪುಟಗಳ ಪತ್ರಿಕೆಯಾಗಿ 'ಸಮೂಹ ಸ್ವರೂಪ' ದಲ್ಲಿ ಹೊರಬರುತ್ತಿರುವುದರ ಬಗ್ಗೆ ಸಹ ಸಮ್ಮೇಳನವು ಚರ್ಚಿಸಿತು. ಶುಲ್ಕ ಹೆಚ್ಚಳ, ಶೈಕ್ಷಣಿಕ ಸೌಲಭ್ಯದಂತಹ ಪ್ರಶ್ನೆಗಳ ಬಗ್ಗೆ ವಿದ್ಯುತ್‌ಗಳಹೋರಾಟ, ಮಹಿಳೆಯರ ಮೇಲಿನದಂತಹವು ಮತ್ತು ಇತರೆ ಪ್ರಶ್ನೆಗಳ ಬಗ್ಗೆ ಮಧ್ಯಪ್ರವೇಶ ಸ್ಫೂರ್ತಿಯುತವಾಗಿದ್ದವು. ವಿಶೇಷವಾಗಿ ಬೆಳ್ತಂಗಡಿಯಲ್ಲಿ ರಚಿಸಲಾದ ಸ್ವ-ಸಹಾಯ ಗುಂಪುಗಳಾದ ಸಂಗಾತಿ ಗುಂಪು ರಚನೆ ವಿಶೇಷವಾಗಿ ಗಮನ ಸೆಳೆಯಿತು. ಇವೆಲ್ಲವೂಗಳ ಜೊತೆ ಜೊತೆ ರೈತ, ಕಾರ್ಮಿಕ, ಕೂಲಿಕಾರ, ವಿದ್ಯಾರ್ಥಿ, ಯುವಜನ, ಮಹಿಳಾ ಸಂಘಟನೆಗಳು ರಾಜ್ಯದ ವಿವಿಧ ಸಾಮೂಹಿಕ ಸಂಘಟನೆಗಳ ಸದಸ್ಯತ್ವವು ಸುಮಾರು 3.99 ಲಕ್ಷ ಇದ್ದದ್ದು ಸುಮಾರು 5.53 ಲಕ್ಷಕ್ಕೆ ಏರಿ ಶೇ.38.5 ರಷ್ಟು ಪ್ರಗತಿ ದಾಖಲಿಸಿರುವುದು ಇತ್ಯಾದಿ ಅಂಶಗಳನ್ನು ಸಮ್ಮೇಳನವು ಗುರುತಿಸಿತು.

ಪಕ್ಷದ ಹೊಸ ಸದಸ್ಯರಿಗೆ ಸೈದ್ಧಾಂತಿಕ ತರಬೇತಿ ನೀಡಿ ನಂತರ ಸದಸ್ಯತ್ವ ಕೊಡುವಲ್ಲಿ ಕೊರತೆ, ಹೀಗಾಗಿ ಗಣನೀಯ ಸಂಖ್ಯೆಯ ಸದಸ್ಯರು ನವೀಕರಣವಾಗದೇ ಹೋಗುವುದು. ಹೀಗಾಗಿ ಪಕ್ಷದ ಸದಸ್ಯತ್ವದಲ್ಲಿ ಅಷ್ಟಿಷ್ಟು ಏರಿಕೆಯಾಗಿದ್ದರೂ ಒಟ್ಟಾರೆ ಸದಸ್ಯತ್ವ ಪ್ರಮಾಣದಲ್ಲಿ ಹೆಚ್ಚಿನ ಪ್ರಗತಿ ಕಾಣದಿರುವುದು ಇಂತಹ ಕೊರತೆಗಳು ಚರ್ಚೆಗೆ ಬಂದವು.

ಪಕ್ಷದ ಶಾಖೆಗಳ ಸ್ವತಂತ್ರ ಕಾರ್ಯ ನಿರ್ವಹಣೆಯಲ್ಲಿ ಕೊರತೆಗಳು, ಹಲವು ಸ್ಥಳೀಯ ಸಮಿತಿಗಳು ಈ ಬಗೆಗೆ ಗಮನಕೊಡಲಾಗದ ಪರಿಸ್ಥಿತಿ, ಈಎಲ್ಲವೂಗಳ ಬಗ್ಗೆಯೂ ಸಮ್ಮೇಳನವು ಚರ್ಚಿಸಿತು. ○

ಸಮ್ಮೇಳನದ ಮುಖ್ಯ ತೀರ್ಮಾನಗಳು

ಸಿಪಿಐ(ಎಂ)ನ 19ನೇ ಕರ್ನಾಟಕ ರಾಜ್ಯ ಸಮ್ಮೇಳನವು ಜನವರಿ 24ರಂದು ಯಶಸ್ವಿಯಾಗಿ ಮುಕ್ತಾಯವಾಯಿತು. ಪಕ್ಷದಲ್ಲಿ 3 ವರ್ಷಕ್ಕೊಮ್ಮೆ ಎಲ್ಲಾ ಹಂತಗಳ ಸಮ್ಮೇಳನಗಳನ್ನು ನಡೆಸಲಾಗುತ್ತದೆ. 18ನೇ ಕರ್ನಾಟಕ ರಾಜ್ಯ ಸಮ್ಮೇಳನವನ್ನು ಸರಿಯಾಗಿ ಮೂರು ವರ್ಷಗಳ ಹಿಂದೆ ಉಡುಪಿಯಲ್ಲಿ ನಡೆಸಲಾಗಿತ್ತು. ಪ್ರತಿನಿಧಿಗಳು 4 ದಿನಗಳ ಕಾಲ ಮೈಸೂರಿನಲ್ಲಿ ನಡೆದ ಈ ಸಮ್ಮೇಳನದಲ್ಲಿ ರಾಜ್ಯದ ಒಟ್ಟು 24 ಜಿಲ್ಲೆಗಳಿಂದ ಒಟ್ಟು 216 ಪ್ರತಿನಿಧಿಗಳು ಮತ್ತು 43 ಜನ ವೀಕ್ಷಕರು ಭಾಗವಹಿಸಿದ್ದರು. ಇವರಲ್ಲಿ 48 ಜನ ಮಹಿಳೆಯರಿದ್ದರು. ಇವರೆಲ್ಲರೂ ಆಯಾ ಜಿಲ್ಲೆಗಳಲ್ಲಿ ನಡೆದ ಜಿಲ್ಲಾ ಸಮ್ಮೇಳನಗಳಲ್ಲಿ ವಿಧ್ಯುಕ್ತವಾಗಿ ಆಯ್ಕೆಯಾಗಿ ಬಂದವರಾಗಿದ್ದರು.

ರಾಜಕೀಯ ಧೋರಣೆಯ ಜಾರಿಯ ವಿಮರ್ಶೆ, 3 ವರ್ಷಕ್ಕೊಮ್ಮೆ ಪಕ್ಷದ ಅಖಿಲ ಭಾರತ ಅಧಿವೇಶನ ನಡೆಯುತ್ತದೆ. ಪಕ್ಷದ 19ನೇ ಅಖಿಲ ಭಾರತ ಅಧಿವೇಶನವು ಬರುವ ಮಾರ್ಚ್ 29 ರಿಂದ ಏಪ್ರಿಲ್ 3ರವರೆಗೆ ತಮಿಳುನಾಡಿನ ಕೊಯಂಬತ್ತೂರು ನಗರದಲ್ಲಿ ನಡೆಯಲಿದೆ.

ಅಖಿಲ ಭಾರತ ಅಧಿವೇಶನವು ಪ್ರಸಕ್ತ ಅಂತರಾಷ್ಟ್ರೀಯ ಹಾಗೂ ರಾಷ್ಟ್ರೀಯ ಪರಿಸ್ಥಿತಿಯನ್ನು ವಿಶ್ಲೇಷಿಸಿ, ಹಿಂದಿನ ಮೂರು ವರ್ಷಗಳ ಅನುಭವದ ಆಧಾರದಲ್ಲಿ ಮುಂದಿನ ಮೂರು ವರ್ಷಗಳಿಗೆ ಒಂದು ರಾಜಕೀಯ ಸಂಘಟನಾತ್ಮಕ ಧೋರಣೆಯನ್ನು ಚರ್ಚಿಸಿ ಅಂಗೀಕರಿಸುತ್ತದೆ. ಪಕ್ಷವು ಪ್ರಜಾತಾಂತ್ರಿಕವಾಗಿ ರೂಪಿಸುವ ಈ ಧೋರಣೆಯನ್ನು ಹೇಗೆ ಜಾರಿ ಮಾಡಲಾಯಿತು ಎಂಬುದನ್ನು ಮೂರು ವರ್ಷಗಳ ನಂತರ ನಡೆಯುವ ಪಕ್ಷದ ಎಲ್ಲಾ ಹಂತಗಳ ಸಮ್ಮೇಳನಗಳಲ್ಲಿ ವಿಮರ್ಶೆ ಮಾಡಿ ಪಾಠ ಕಲಿಯಲಾಗುತ್ತದೆ.

ರಾಜ್ಯದಲ್ಲಿ ತೃತೀಯ ರಂಗವನ್ನು ಬಲಪಡಿಸಲು ನಿರ್ಧಾರ: ರಾಜ್ಯದ ರಾಜಕೀಯ ಬೆಳವಣಿಗೆಯನ್ನು ವಿವರವಾಗಿ ವಿಶ್ಲೇಷಿಸಿದ ಸಮ್ಮೇಳನವು ಪ್ರಸಕ್ತ ಪರಿಸ್ಥಿತಿಯಲ್ಲಿ ಪರಿಣಾಮಕಾರಿಯಾಗಿ ಮಧ್ಯಪ್ರವೇಶ ಮಾಡಲು ತೀರ್ಮಾನಿಸಿತು.

ಹಿಂದೆ ಕರ್ನಾಟಕವು ಕಾಂಗ್ರೆಸ್ಸಿನ ಭದ್ರಕೋಟೆಯಾಗಿತ್ತು. 80ರ ದಶಕದ ಆರಂಭದಲ್ಲಿ ತುರ್ತು ಪರಿಸ್ಥಿತಿಯ ವಿರುದ್ಧ ಪಕ್ಷವು ನಡೆಸಿದ ಕಾರ್ಮಿಕ ಹೋರಾಟ ಮತ್ತು ಪಕ್ಷವು ಸಕ್ರಿಯವಾಗಿ ಪಾಲ್ಗೊಂಡಿದ್ದ ನರಗುಂದ ನವಲಗುಂದ ರೈತ ಚಳುವಳಿಯ ಪರಿಣಾಮವಾಗಿ ಕರ್ನಾಟಕದಲ್ಲಿ ಮೊಟ್ಟ ಮೊದಲ ಬಾರಿಗೆ ಕಾಂಗ್ರೆಸ್ ಪಕ್ಷವನ್ನು ಸೋಲಿಸಿ ಜನತಾ ಪಕ್ಷದ ಸರ್ಕಾರವನ್ನು ಅಸ್ತಿತ್ವಕ್ಕೆ ತರಲು ಸಾಧ್ಯವಾಗಿತ್ತು.

ಆದರೆ ಇಂದಿನ ಪರಿಸ್ಥಿತಿ ತೀರಾ ಭಿನ್ನವಾಗಿದೆ. ಈ ಅವಧಿಯಲ್ಲಿ ಮೊಟ್ಟಮೊದಲ ಬಾರಿಗೆ ಬಿಜೆಪಿಗೆ ಅಧಿಕಾರದಲ್ಲಿ ಪಾಲು ಪಡೆಯಲು ಸಾಧ್ಯವಾಯಿತು ಮಾತ್ರವಲ್ಲ, ಮತ್ತೆ ಸ್ವಂತ ಬಲದ ಮೇಲೆ ಅಧಿಕಾರಕ್ಕೆ ಬರಲು ಅದು ಸರ್ವ ಪ್ರಯತ್ನ ಮಾಡುತ್ತಿದೆ.

ಸಿಪಿಐ(ಎಂ) ಈ ಬೆಳವಣಿಗೆಯನ್ನು ದುಡಿಯುವ ಜನರ ಹಿತ ದೃಷ್ಟಿಯಿಂದ ಪರಿಶೀಲಿಸುತ್ತದೆ. ಸಿಪಿಐ(ಎಂ)ಗೆ ದುಡಿಯುವ ಜನರ ಹಿತವಲ್ಲದೆ ಬೇರೆ ಯಾವುದೂ ಮುಖ್ಯವಲ್ಲ. ದುಡಿಯುವ ಜನರ ನೈಜ ಅಭಿವೃದ್ಧಿಯೇ ದೇಶದ ಅಭಿವೃದ್ಧಿ ಎಂದು ಸಿಪಿಐ(ಎಂ) ಭಾವಿಸುತ್ತದೆ. ದುಡಿಯುವ ಜನಗಳಿಗೆ ಜೀವನಾವಶ್ಯಕ ವೇತನ, ವಾಸಕ್ಕೆ ಮನೆ, ಅವರ ಆಹಾರ ಮತ್ತು ಆರೋಗ್ಯದಂತಹ ಪ್ರಶ್ನೆಗಳಿಗಾಗಿ ಸಿಪಿಐ(ಎಂ) ನಿರಂತರವಾಗಿ ಹೋರಾಟ ನಡೆಸುತ್ತದೆ. ಜೊತೆಗೆ ಸಮಾಜದಲ್ಲಿನ ಜಾತಿ ಅಸ್ಪೃಶ್ಯತೆಯನ್ನು ತೊಡೆದು ಹಾಕಲು ಮಹಿಳೆಯರ ಮೇಲಿನ ದೌರ್ಜನ್ಯಗಳನ್ನು ತಡೆಗಟ್ಟಲು ಸಿಪಿಐ(ಎಂ) ಚಳುವಳಿ ಚಟುವಟಿಕೆಗಳನ್ನು ನಡೆಯುತ್ತದೆ.

ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರದ ಅಧಿಕಾರಾವಧಿಯಲ್ಲಿ ದುಡಿಯುವ ಜನಗಳ ಬದುಕಿನ ದೈನಂದಿನ ಪ್ರಶ್ನೆಗಳನ್ನು ಕಡೆಗಣಿಸಲಾಗಿತ್ತು. ಇದರ ಪರಿಣಾಮವಾಗಿ ದೇಶದಲ್ಲಿ ಅನೇಕ ಮುಷ್ಕರಗಳು ಚಳುವಳಿಗಳು ನಡೆದವು. ಅಂತಿಮವಾಗಿ ಚುನಾವಣೆಯಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಸೋಲು ಅನುಭವಿಸುವಂತಾಯಿತು. ಎಡ ಪಕ್ಷಗಳ ಬಾಹ್ಯ ಬೆಂಬಲದೊಂದಿಗೆ ಅಧಿಕಾರದಲ್ಲಿರುವ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರವೂ ಸಹ ತನ್ನ ಸಾಮಾನ್ಯ ಕನಿಷ್ಠ ಕಾರ್ಯಕ್ರಮದಲ್ಲಿ ಜನತೆಗೆ ನೀಡಿದ ಭರವಸೆಗಳನ್ನು ಉಲ್ಲಂಘಿಸುತ್ತಾ ಹಿಂದಿನ ಎನ್‌ಡಿಎ ಸರ್ಕಾರದ ದಾರಿಯಲ್ಲೇ ಸಾಗುತ್ತಿದೆ.

ಕರ್ನಾಟಕದಲ್ಲಿ ಅಧಿಕಾರಕ್ಕೆ ಬರುವ ಕನಸು ಕಾಣುತ್ತಿರುವ ಬಿಜೆಪಿಯಿಂದ ದುಡಿಯುವ ಜನರ ಸಮಸ್ಯೆಗಳಿಗೆ ಪರಿಹಾರ ದೊರೆಯಲಾರದು. ಅಷ್ಟು ಮಾತ್ರವಲ್ಲ ಮತಧರ್ಮದ ಆಧಾರದಲ್ಲಿ ದ್ವೇಷವನ್ನು ಬೆಳೆಸಿ ದುಡಿಯುವ ಜನರ ಒಗ್ಗಟ್ಟಿಗೆ ಅದು ಧಕ್ಕೆ ತರುವ ಅಪಾಯವಿದೆ. ಆದರೆ ರಾಜ್ಯದ ಜನತೆಗೆ ಬಿಜೆಪಿಯ ಅಪಾಯದ ಬಗ್ಗೆ ಇನ್ನೂ ಸಾಕಷ್ಟು ಅರಿವಿಲ್ಲ, ಕೋಮುವಾದಿ ಶಕ್ತಿಗಳ ಅಪಾಯದ ಬಗ್ಗೆ ರಾಜ್ಯದ ಜನತೆಯನ್ನು ಎಚ್ಚರಿಸುವುದು ಸಿಪಿಐ(ಎಂ)ನ ಮುಖ್ಯ ಕರ್ತವ್ಯವಾಗಿದೆ ಎಂದು ಸಮ್ಮೇಳನ ತೀರ್ಮಾನಿಸಿದೆ. ○

ಸಮ್ಮೇಳನದ ಮುಖ್ಯ ನಿರ್ಣಯಗಳು:

ಸಮ್ಮೇಳನವು ಒಟ್ಟು 40 ನಿರ್ಣಯಗಳನ್ನು ಅಂಗೀಕರಿಸಿದ್ದು, ಅವುಗಳಲ್ಲಿ ಈ ಕೆಳಗಿನವು ಮುಖ್ಯವಾಗಿವೆ.

1. ಎಲ್ಲಾ ವಿಧದ ಕೋಮುವಾದದ ಅಪಾಯದ ಬಗ್ಗೆ ಪ್ರಚಾರ ಪ್ರಕ್ಷೋಭೆ ನಡೆಸುವುದು.
2. ಅಸಂಘಟಿತ ವಲಯದ ಎಲ್ಲಾ ಕಾರ್ಮಿಕರಿಗೆ ತಿಂಗಳಿಗೆ ರೂ.4080 ವೇತನ ಹಾಗೂ ರೂ.1.50 ರ ದರದಲ್ಲಿ ತುಟ್ಟಿಭತ್ಯೆ ಸಿಗುವಂತೆ ಅವರ ಕನಿಷ್ಠ ವೇತನವನ್ನು ಪರಿಷ್ಕರಿಸುವುದು.
3. ಎಲ್ಲಾ ಬಡವರಿಗೂ ಬಿಪಿಎಲ್ ರೇಷನ್ ಕಾರ್ಡ್‌ಗಳನ್ನು ವಿತರಿಸಿ ಪಡಿತರ ಪದ್ಧತಿಯನ್ನು ಸಾರ್ವತ್ರಿಕಗೊಳಿಸಬೇಕು.
4. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ಸಮರ್ಪಕವಾಗಿ ಜಾರಿಗೆ ತಂದು ಕೆಲಸ ಬಯಸುವ ಎಲ್ಲರಿಗೂ ಕೆಲಸವನ್ನು ಒದಗಿಸಬೇಕು.
5. ರಾಜ್ಯದ ಬೀಡಿ ಕಾರ್ಮಿಕರಿಗೆ 1996ರಿಂದ ಬಾಕಿ ಇರುವ ತುಟ್ಟಿಭತ್ಯೆಯನ್ನು ಬೀಡಿ ಮಾಲೀಕರು ಪಾವತಿ ಮಾಡುವಂತೆ ಹೋರಾಟವನ್ನು ತೀವ್ರಗೊಳಿಸುವುದು.
6. ರಾಜ್ಯದಲ್ಲಿ ಮುಚ್ಚಿರುವ ಮೈಸೂರು ಕಿರ್ಲೋಸ್ಕರ್‌ಗಳಂತಹ ಖಾಸಗೀ ಕಾರ್ಖಾನೆಗಳ ಆಸ್ತಿಗಳನ್ನು ಸರ್ಕಾರ ಸ್ವಾಧೀನಪಡಿಸಿಕೊಂಡು ಕೆಲಸ ಕಳೆದುಕೊಂಡಿರುವ ಕಾರ್ಮಿಕರಿಗೆ ಪರಿಹಾರ ಒದಗಿಸಬೇಕು.
7. ಕೋಲಾರ ಚಿನ್ನದ ಗಣಿಯನ್ನು ಕಾರ್ಮಿಕರ ಸಹಕಾರಿ ಸಂಘಕ್ಕೆ ವಹಿಸಿಕೊಟ್ಟು ಪುನಶ್ಚೇತನಗೊಳಿಸಬೇಕು.
8. ರಾಜ್ಯದ ರೈಲು ಮಾರ್ಗಗಳ ವಿಸ್ತರಣೆ, ಹೆಚ್ಚುವರಿ ರೈಲುಗಳ ಮಂಜೂರಾತಿ ಮತ್ತು ನೈರುತ್ಯ ರೈಲ್ವೆ ವಲಯದ ಸಿ ಮತ್ತು ಡಿ ವರ್ಗದ ಹುದ್ದೆಗಳಲ್ಲಿ ಕನ್ನಡಿಗರನ್ನೇ ನೇಮಿಸಲು ಆಗ್ರಹ.
9. ಕಬ್ಬು ಬೆಳೆಗಾರರ ಸಂಕಷ್ಟಗಳಿಗೆ ಸರ್ಕಾರ ಕೂಡಲೇ ಸ್ಪಂದಿಸಬೇಕು.
10. ತೆಂಗು, ಅಡಿಕೆ, ಈರುಳ್ಳಿ, ಟೊಮೆಟೋ ಮೊದಲಾದ ಎಲ್ಲಾ ಕೃಷಿ ಉತ್ಪನ್ನಗಳಿಗೆ ಯೋಗ್ಯ ಬೆಲೆಯನ್ನು ದೊರಕಿಸಬೇಕು.
11. ಗಿರಿಜನರ ಮತ್ತು ಇತರ ಅರಣ್ಯವಾಸಿಗಳ ಭೂಮಿ ಹಾಗೂ ಉಪ ಅರಣ್ಯ ಉತ್ಪನ್ನಗಳ ಹಕ್ಕುಗಳಿಗೆ ಕೂಡಲೇ ಮಾನ್ಯತೆ ನೀಡಬೇಕು.
12. ಮಲ ಹೊರುವ ಪದ್ಧತಿ ಹಾಗೂ ಎಲ್ಲಾ ರೀತಿಯ ಅಸ್ಪೃಶ್ಯತಾ ಆಚರಣೆಗಳನ್ನು ನಿರ್ಮೂಲನೆ ಮಾಡಲು ದೃಢವಾದ ಕ್ರಮಗಳನ್ನು ಕೈಗೊಳ್ಳಬೇಕು.
13. ಸ್ತ್ರೀ ಭ್ರೂಣ ಹತ್ಯೆ ಹಾಗೂ ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳನ್ನು ತಡೆಗಟ್ಟಲು ಕಠಿಣ ಕ್ರಮಗಳನ್ನು ಕೈಗೊಳ್ಳಬೇಕು.
14. ಅಲ್ಪಸಂಖ್ಯಾತರ ಅಭಿವೃದ್ಧಿಗೆ ನ್ಯಾಯಮೂರ್ತಿ ಸಾಚಾರ್ ಆಯೋಗದ ಶಿಫಾರಸ್ಸುಗಳನ್ನು ಜಾರಿಗೊಳಿಸಬೇಕು.
15. ಶ್ರೀಮಂತರು ಒತ್ತುವರಿ ಮಾಡಿರುವ ಮತ್ತು ಭೂಗಳ್ಳರು ಕಬಳಿಸಿರುವ ಸರ್ಕಾರಿ ಭೂಮಿಯನ್ನು ವಶಪಡಿಸಿಕೊಂಡು ಭೂರಹಿತ, ನಿವೇಶನರಹಿತ ಬಡವರಿಗೆ ವಿತರಣೆ ಮಾಡಬೇಕು.
16. ಹೊಸ ಖನಿಜ ನೀತಿ ಜಾರಿಗೊಳಿಸಬೇಕು ಮತ್ತು ಖಾಸಗಿ ಗಣಿಗಾರಿಕೆ ಹಾಗೂ ರಫ್ತು ವ್ಯವಹಾರವನ್ನು ನಿಯಂತ್ರಿಸಬೇಕು. ○

ಜಗದಗಲ

ಶರತ್ ಚಂದ್ರ

ಗಾಜಾಪಟ್ಟಿಯ ಪ್ಯಾಲೆಸ್ಟನ್ನರ ಮೇಲೆ ಅಮಾನುಷ ದಿಗ್ಭಂಧನ

ಗಾಜಾ ಪಟ್ಟಿ ಇಸ್ರೇಲ್ ಸರ್ಕಾರದ ಹಲವು 'ಬರ್ಲಿನ್ ಗೋಡೆ'ಗಳ ಮಧ್ಯೆ ಹರಿದು ಹಂಚಿ ಹೋಗಿರುವ ಪ್ಯಾಲೆಸ್ತೈನ್ ನ ಒಂದು ಪ್ರದೇಶ. ಪ್ಯಾಲೆಸ್ತೈನ್ ಪಾರ್ಲಿಮೆಂಟರಿ ಚುನಾವಣೆಗಳಲ್ಲಿ ಗೆದ್ದಿದ್ದರೂ ಹಮಾಸ್ ಪಕ್ಷವನ್ನು ಇಸ್ರೇಲ್ ಮತ್ತು ಅಮೆರಿಕ ಸರ್ಕಾರದ ಅಸಹಕಾರ -ಒತ್ತಡಗಳಿಂದ ಸರ್ಕಾರ ನಡೆಸದಂತೆ ಮಾಡಲಾಯಿತು. ಇದು ಈಗ ಸರ್ಕಾರ ನಡೆಸುತ್ತಿರುವ ಫತೇಹ್ ಮತ್ತು ವಿರೋಧಿ ಹಮಾಸ್ ನಡುವೆ ಅಂತರ್ಯುದ್ಧಕ್ಕೆ ಕಾರಣವಾಗಿದೆ. ಗಾಜಾ ಪಟ್ಟಿ ಹಮಾಸ್ ನಿಯಂತ್ರಣದಲ್ಲಿದೆ. ಇಸ್ರೇಲ್ ವಿರುದ್ಧ ಗೆರಿಲ್ಲಾ ಹೋರಾಟದಲ್ಲಿ ತೊಡಗಿರುವ ಹಮಾಸ್ ಅನ್ನು ಮಣಿಸಲು ಇಸ್ರೇಲ್ ಸರ್ಕಾರ ಇಡೀ ಪ್ರದೇಶದ ಮೇಲೆ ಅಮಾನುಷ ಆರ್ಥಿಕ ದಿಗ್ಬಂಧನ ಹೇರಿದೆ. ಅಗತ್ಯ ಆಹಾರ ಮತ್ತು ಪೆಟ್ರೋಲ್ ಪೂರೈಕೆಗಳನ್ನು ತಡೆ ಹಿಡಿದಿದೆ. ಗಾಜಾ ಪಟ್ಟಿಯ ಜನರ ಸಮಸ್ಯೆಗಳನ್ನು ಉಲ್ಬಣಗೊಳಿಸಿದೆ.

ಗಾಜಾ ಪಟ್ಟಿಯ ಜನತೆಯ ವಿರುದ್ಧ ಸರ್ಕಾರದ ಈ ಕ್ರಮಗಳು ಹಿಂದೆ ಕೆಲವು ಯುರೋಪಿಯನ್ ವಸಾಹತುಶಾಹಿ ಸರ್ಕಾರಗಳು ಅನುಸರಿಸಿದ ಕ್ರಮಗಳಿಗಿಂತಲೂ ಕ್ರೂರವಾಗಿವೆ. ಇದು ಎಲ್ಲಾ ಅಂತರ್ರಾಷ್ಟ್ರೀಯ ಮತ್ತು ಮಾನವೀಯ ಕಟ್ಟು-ಕಟ್ಟಳೆಗಳ ಉಲ್ಲಂಘನೆಯಾಗಿದೆ. ಇದು ವಿಶ್ವಸಂಸ್ಥೆ ಭದ್ರತಾ ಸಮಿತಿ ಖಂಡಿಸಿ, ಮಧ್ಯ ಪ್ರವೇಶ ಮಾಡಿ ತಡೆಯ ಬೇಕಾದ ಗಂಭೀರ ಸಂದರ್ಭ. ಅಮೆರಿಕದ ಒತ್ತಡದಿಂದಾಗಿ ಇದು ಆಗುತ್ತಿಲ್ಲ. ಭಾರತ ಸರ್ಕಾರ ಸಹ ಈ ಬಗ್ಗೆ ಮೌನವಾಗಿದೆ. ಇಸ್ರೇಲ್ ನ ಈ ಕ್ರಮ ಖಂಡಿಸುವ ಬದಲು ಆ ದೇಶದ ಜತೆ ಇನ್ನಷ್ಟು ಘನಿಷ್ಟ ಮಿಲಿಟರಿ ಸಂಬಂಧ ಹೊಂದುವತ್ತ ಶ್ರಮಿಸುತ್ತಿದೆ. ಗಾಜಾ ಪಟ್ಟಿಯ ಜನತೆಯ ಮೇಲೆ ಇಸ್ರೇಲ್ ಸರ್ಕಾರ ಅಮಾನುಷ ದಬ್ಬಾಳಿಕೆಯಲ್ಲಿ ತೊಡಗಿರುವಾಗ, ನಮ್ಮ ಇಸ್ರೋ ಅವರ ಮಿಲಿಟರಿ ಗೂಢಚಾರ ಉಪಗ್ರಹವನ್ನು ಅಂತರಿಕ್ಷದಲ್ಲಿ ಹಾರಿಸಿದೆ. ಇರಾನ್, ಇರಾಕ್ ಮುಂತಾದ ನೆರೆಹೊರೆಯ ದೇಶಗಳಲ್ಲಿ ಬಾಹ್ಯಾಕಾಶದಿಂದ ಗೂಢಚರ್ಯೆ ನಡೆಸಲು ಈ ಉಪಗ್ರಹದ ಉದ್ದೇಶ ಎಂದು ಹೇಳಲಾಗಿದೆ.

ಗಾಜಾ ಪಟ್ಟಿಯ ದಿಗ್ಬಂಧನ ಜನತೆಯ ಬವಣೆಗಳನ್ನು ತಾರಕಕ್ಕೇರಿಸಿದೆ. ಈ ನಡುವೆ ಗಾಜಾ ಪಟ್ಟಿ ಈಜಿಪ್ಟ್ ಜತೆ ಇರುವ ಗಡಿಯ ಗೋಡೆ ಒಡೆದು ಜನ ಈಜಿಪ್ಟ್ ನ ಗಡಿ ಪಟ್ಟಣ ರಫಾಗೆ ಧಾವಿಸಿ ದರು. ಆಹಾರ ಮತ್ತು ಇತರ ಅಗತ್ಯ ಪೂರೈಕೆಗಳನ್ನು ಕೊಳ್ಳಲು ದೊಡ್ಡ




ಸಂಖ್ಯೆಯಲ್ಲಿ ಗಾಜಾವಾಸಿಗಳು ರಫಾಗೆ ನುಗ್ಗಿದರು. ಸುಮಾರು ಮೂರುವರೆ ಲಕ್ಷ ಜನ ರಫಾಗೆ ಮುಗಿಬಿದ್ದರು ಎಂದು ಅಂದಾಜು ಮಾಡಲಾಗಿದೆ. ಇದರಿಂದ ಗಾಜಾ ಜನತೆಗೆ ದಿಗ್ಬಂಧನದಿಂದ ಸ್ವಲ್ಪ ಬಿಡುಗಡೆ ಸಿಕ್ಕಿದಂತಾಗಿದೆ. ಗಾಜಾ-ಈಜಿಪ್ಟ್ ಗಡಿಯ 12 ಕಿ.ಮೀ. ಗೋಡೆಯನ್ನು ಹಮಾಸ್ ಗೆರಿಲ್ಲಾಗಳು ಹಲವು ತಿಂಗಳುಗಳ ಕಾಲ ಗುಪ್ತ ಕಾರ್ಯಾಚರಣೆಯಲ್ಲಿ ಕತ್ತರಿಸಿದರು ಎನ್ನಲಾಗಿದೆ. ಜನವರಿ 23 ರಂದು ಹಲವು ಸ್ಫೋಟಗಳ ಮೂಲಕ ಗೋಡೆಯನ್ನು ಬೀಳಿಸಲಾಯಿತು. ಹಮಾಸ್ ಈ ವದಂತಿಯನ್ನು ತಳ್ಳಿ ಹಾಕಿದ್ದಾರೆ. ಆದರೆ ಗೋಡೆ ಬಿದ್ದ ಮೇಲೆ ಗಡಿ ಕಾಯುವ ಕೆಲಸದಲ್ಲಿ ತಕ್ಷಣ ತೊಡಗಿದ್ದಾರೆ. ಇಸ್ರೇಲ್ ಮತ್ತು ಅಮೆರಿಕ ಸರ್ಕಾರಗಳು ಇದರಿಂದ ಆತಂಕಿತರಾಗಿದ್ದಾರೆ. ಗಾಜಾ ಜನತೆಯನ್ನು ಗಡಿಯ ಹಿಂದೆ ತಳ್ಳಲು ಈಜಿಪ್ಟ್ ಗಡಿ ಪಡೆ ಬಲಪ್ರಯೋಗ ಮಾಡುವಂತೆ ಒತ್ತಡ ಹೇರುತ್ತಿದೆ. ಈಜಿಪ್ಟ್ ಸರ್ಕಾರ ಇದನ್ನು ನಿರಾಕರಿಸಿದೆ. ■

ಅಮೆರಿಕದ ಆರ್ಥಿಕ ಕುಸಿತ 60 ವರ್ಷಗಳ ಅಧಿಪತ್ಯದ ಕೊನೆಯ ಆರಂಭ?

ಅಮೆರಿಕದ ಆರ್ಥಿಕತೆ ಕುಸಿತದ ಸ್ಪಷ್ಟ ಸೂಚನೆಗಳನ್ನು ತೋರಿಸುತ್ತಿದೆ. ಸ್ವಿಟ್ ಝರ್ ಲ್ಯಾಂಡ್ ನ ದಾವೋಸ್ ನಲ್ಲಿ ಸಭೆ ಸೇರಿದ ವಿಶ್ವ ಆರ್ಥಿಕ ವೇದಿಕೆಯಲ್ಲಿ ಈ ಆರ್ಥಿಕ ಕುಸಿತದ ಬಗ್ಗೆ ಭಾರಿ ಆತಂಕದ ಪ್ರತಿಕ್ರಿಯೆ ಬಂದಿದೆ. ಅಮೆರಿಕದ ಈಗಿನ ಕುಸಿತ ಗೃಹ ಸಾಲಗಳ ಬಿಕ್ಕಟ್ಟಿನ ಪರಿಣಾಮ ಮಾತ್ರವಲ್ಲ. 60 ವರ್ಷಗಳಲ್ಲಿ ಡಾಲರ್ 'ರಿಸರ್ವ ಕರೆನ್ಸಿ' ಯಾಗಿ ಸಾಲ ಬೆಳೆಯುತ್ತಾ ಹೋದ ಅಮೆರಿಕದ ಅಧಿಪತ್ಯದ ಕೊನೆಯ ಆರಂಭದ ಸೂಚನೆ ಎಂದಿದ್ದಾರೆ ಪ್ರಖ್ಯಾತ ಹಣಕಾಸು ಉದ್ಯಮಿ ಜಾರ್ಜ್ ಸೊರೋಸ್. ಈಗಿನ ಆರ್ಥಿಕ ಕುಸಿತಕ್ಕೆ ಅಲ್ಲಿನ ರಿಸರ್ವ ಬ್ಯಾಂಕಿನ ತಪ್ಪು ನೀತಿಗಳೇ ಕಾರಣ. ಈ ಬಿಕ್ಕಟ್ಟು ಬರಲು ಆ ಬ್ಯಾಂಕಿನ ನೀತಿಗಳೇ ಕಾರಣ ಎಂದು ನೊಬೆಲ್ ಪ್ರಶಸ್ತಿ ವಿಜೇತ ಆರ್ಥಿಕ ತಜ್ಞ ಜೊಸೆಫ್ ಸ್ಟಿಗ್ ಲಿಟ್ಝ್ ಹೇಳಿದ್ದಾರೆ. ಅಮೆರಿಕದ ಕುಸಿತ, ಜಾಗತಿಕವಾಗಿ ಭಾರೀ ದುಷ್ಪರಿಣಾಮ ಬೀರಲಿದೆ ಎಂದು ಹಲವರು ಭವಿಷ್ಯ ನುಡಿದಿದ್ದಾರೆ. ಅಮೆರಿಕದ ಆರ್ಥಿಕವನ್ನು ಸ್ಥಿಮಿತದಲ್ಲಿ ಇಟ್ಟುಕೊಳ್ಳುವ ಕೆಲವು ದೇಶಗಳ ಸರ್ಕಾರ ಬೆಂಬಲಿತ ವಿಶೇಷ ನಿಧಿಗಳ ಪಾತ್ರ ಈಗಷ್ಟೇ ಅವನ್ನು ವಿರೋಧಿಸಿದ ಅಮೆರಿಕನ್ ಟೀಕಾಕಾರರಿಗೆ ಅರ್ಥವಾಗಹತ್ತಿದೆ ಎಂದು ಕುವೈತ್ ಬ್ಯಾಂಕಿನ ಮುಖ್ಯಸ್ಥ ಹೇಳಿದ್ದಾರೆ. ಇಂತಹ ವಿಶೇಷ ನಿಧಿಗಳು 2876 ಶತಕೋಟಿ ಡಾಲರಿನಷ್ಟಿವೆ ಎಂದು ಅಂದಾಜು ಮಾಡಲಾಗಿದೆ.

ಶ್ರೀಲಂಕಾದಲ್ಲಿ ಮುರಿದು ಬಿದ್ದ ಕದನ ವಿರಾಮ

ಶ್ರೀಲಂಕಾದಲ್ಲಿ 2002 ರಿಂದ ಸರ್ಕಾರ ಮತ್ತು ಉತ್ತರ ಭಾಗದ ತಮಿಳು ಬಹುಸಂಖ್ಯಾತ ಪ್ರದೇಶವನ್ನು ನಿಯಂತ್ರಿಸುತ್ತಿರುವ ಎಲ್.ಟಿ.ಟಿ.ಇ. ಟೈಗರ್ಸ್ ನಡುವೆ ಜಾರಿಯಲ್ಲಿದ್ದ ಕದನ ವಿರಾಮ ಮುರಿದು ಬಿದ್ದಿದೆ. ಎರಡು ಪಡೆಗಳ ನಡುವೆ ಪೂರ್ಣ ಪ್ರಮಾಣದ ಯುದ್ಧ ಸಿಡಿದಿದೆ. 2006 ರಲ್ಲಿ ಈ ಎರಡು ಪಡೆಗಳು ಯುದ್ಧದ ಅಂಚಿನಲ್ಲಿದ್ದವು. 2007 ರಲ್ಲಿ ಅಘೋಷಿತ ಯುದ್ಧದಲ್ಲಿ ತೊಡಗಿದ್ದವು. 2008 ರಲ್ಲಿ ಪೂರ್ಣ ಪ್ರಮಾಣದ ಘೋಷಿತ ಯುದ್ಧದ ಅಂಚಿನಲ್ಲಿವೆ. ಹೊಸ ವರ್ಷ ಆರಂಭದಲ್ಲೇ



ಯು.ಎನ್.ಪಿ. ಪಕ್ಷದ ಪಾರ್ಲಿಮೆಂಟ್ ಸದಸ್ಯ ಮಾಹೇಶ್ವರನ್ ಕೊಲಂಬೋದ ದೇವಾಲಯದ ಹೊರಗೆ ಹಾಡು ಹಗಲಲ್ಲಿ ಕೊಲೆ ಮಾಡಲಾಯಿತು ಮತ್ತು ಮರುದಿನವೇ ಮಿಲಿಟರಿ ವಾಹನದಲ್ಲಿ ಸ್ಫೋಟದಿಂದ ನಾಲ್ಕು ಸೈನಿಕರ ಹತ್ಯೆ ಆಯಿತು.

ಶ್ರೀಲಂಕಾದ ಸರ್ಕಾರ ಇವೆರಡರ ಜವಾಬ್ದಾರಿಯನ್ನು ಎಲ್.ಟಿ.ಟಿ.ಇ. ಮೇಲೆ ಹೊರಿಸಿತು. ಈ ನಡುವೆ ಎಲ್.ಟಿ.ಟಿ.ಇ. ಮೇಲೆ ಯುರೋಪಿಯನ್ ಒಕ್ಕೂಟ ನಿಷೇಧ ಹೇರಿ, ಅದರ ಅಂತರ್ರಾಷ್ಟ್ರೀಯ ಬೆಂಬಲ ಮತ್ತು ಚಟುವಟಿಕೆಗಳ ಅವಕಾಶಗಳ ಮೇಲೆ ಮಿತಿ ಹೊರಿಸಿತು. ಇದೇ ಟೈಗರ್ಸ್ ಬಗ್ಗು ಬಡಿಯಲು ಒಳ್ಳೆಯ ಅವಕಾಶ ಎಂದು ಇದನ್ನೇ (ಮಾಹೇಶ್ವರ್ ಮತ್ತು ಸೈನಿಕರ ಕೊಲೆ) ಕಾರಣವಾಗಿಸಿ 2002 ರ ಕದನ ವಿರಾಮದಿಂದ ಹೊರ ಬರುವುದಾಗಿ ಘೋಷಿಸಿತು. ಇದರ ನಂತರ ಎರಡು ಪಡೆಗಳ ನಡುವೆ ಹೆಚ್ಚು ಕಡಿಮೆ ಪೂರ್ಣಪ್ರಮಾಣದ ಯುದ್ಧ ನಡೆದಿದೆ. ಟೈಗರ್ಸ್ ಗುಪ್ತವಾಗಿರುವ ಮುಖ್ಯ ಕಚೇರಿ ಮೇಲೆ ಹಲವು ದಾಳಿಗಳನ್ನು ಮಾಡಿದೆ. ಟೈಗರ್ ಸೂಪರ್ ನಾಯಕ ಪ್ರಭಾಕರ್ ಮತ್ತು ಆತನ ಉನ್ನತ ಸಹಚರರನ್ನು ಗುರಿಯಾಗಿಸಿದೆ. ಒಬ್ಬ ಉನ್ನತ ನಾಯಕನ್ನು ಆಗಲೇ ಬಲಿ ತೆಗೆದುಕೊಂಡಿದೆ. ಟೈಗರ್ ಸಹ ಭಯೋತ್ಪಾದನೆ ಚಟುವಟಿಕೆ ಮತ್ತು ಮಿಲಿಟರಿ ದಾಳಿ ತೀವ್ರತೆ ಹೆಚ್ಚಿಸಿದೆ.

ಈ ಎರಡು ಪಡೆಗಳ ಮಧ್ಯೆ ಸಿಕ್ಕಿ ಬಿದ್ದಿರುವ ತಮಿಳು ಜನತೆ ಭಾರೀ ಸಾವು ನೋವು ಮತ್ತು ಸಂಕಷ್ಟ ಗಳನ್ನು ಅನುಭವಿಸುತ್ತಿದೆ. ಎರಡು ದಶಕಗಳಿಗಿಂತಲೂ ಹೆಚ್ಚು ಅವಧಿಯಿಂದ ನಡೆಯುತ್ತಿರುವ ಆಂತರಿಕ ಯುದ್ಧ ಮತ್ತು ಪ್ರಾಕೃತಿಕ ವಿಕೋಪ (ಸುನಾಮಿ, ನೆರೆ ಇತ್ಯಾದಿ) ಗಳಿಂದ ಹತ್ತು ಲಕ್ಷಕ್ಕೂ ಹೆಚ್ಚು ಜನ ತಮ್ಮ ದೇಶದಲ್ಲೇ ನಿರಾಶ್ರಿತರಾಗಿದ್ದಾರೆ. ಕಳೆದ ಒಂದು ವರ್ಷದಲ್ಲೇ ಎರಡು ಲಕ್ಷಕ್ಕೂ ಹೆಚ್ಚು ಜನ ನಿರಾಶ್ರಿತರಾಗಿದ್ದಾರೆ. ನಿರಾಶ್ರಿತರ ಕ್ಯಾಂಪುಗಳಲ್ಲಿ ದಯನೀಯ ಸ್ಥಿತಿಯಲ್ಲಿ ಬದುಕುತ್ತಿದ್ದಾರೆ. ಮುಂದುವರೆಯುತ್ತಿರುವ ಆಂತರಿಕ ಯುದ್ಧದಿಂದ ಪರಿಹಾರ ತಲುಪಿಸುವುದಕ್ಕೆ ಅಡಚಣೆ ಉಂಟಾಗಿದೆ ಎಂದು ಈ ಕ್ಯಾಂಪುಗಳಿಗೆ ಇತ್ತೀಚೆಗೆ ಭೇಟಿ ನೀಡಿದ ವಿಶ್ವಸಂಸ್ಥೆ ನಿಯೋಗ ತನ್ನ ವರದಿಯಲ್ಲಿ ಹೇಳಿದೆ. ಪೂರ್ಣ ಪ್ರಮಾಣದ ಯುದ್ಧ ಪರಿಸ್ಥಿತಿಯನ್ನು ಇನ್ನಷ್ಟು ಬಿಗಡಾಯಿಸುವುದು ಖಚಿತವಾಗಿದೆ.

ಕದನ ವಿರಾಮವನ್ನು ಎರಡೂ ಪಡೆಗಳು ಎಂದೂ ಗಂಭೀರವಾಗಿ ತೆಗೆದುಕೊಂಡಿರಲಿಲ್ಲ. ಎಪ್ರಿಲ್ 2007 ರ ಹೊತ್ತಿಗೆ ಕದನ ವಿರಾಮದ ನಾಲ್ಕು ಸಾವಿರಕ್ಕೂ ಹೆಚ್ಚು ಉಲ್ಲಂಘನೆಗಳು ನಡೆದಿವೆ. ಆಗಾಗ ಎರಡೂ ಕಡೆಯಿಂದ ನಡೆಯುವ ಉಲ್ಲಂಘನೆಯಿಂದ ಬೇಸತ್ತ ಕದನ ವಿರಾಮ ಮೆಲ್ವಿಚಾರಣೆ ನಡೆಸುವ ಅಂತರ್ರಾಷ್ಟ್ರೀಯ ಮಿಶನ್ ತನ್ನ ಕೆಲಸ ನಿಲ್ಲಿಸಿದೆ. ಸರ್ಕಾರದ ಮೇಲೆ ಆಳುವ ರಂಗದ' ಪಕ್ಷಗಳಲ್ಲಿರುವ ಸಿಂಹಳೀಯ ಉಗ್ರವಾದಿಗಳ ಒತ್ತಡದಿಂದ ಕದನ ವಿರಾಮದಿಂದ ಹೊರ ಬರುವ ನಿರ್ಧಾರ ತೆಗೆದುಕೊಂಡಿದೆ ಎಂಬ ಅಭಿಪ್ರಾಯವೂ ಇದೆ. ಈ ನಡುವೆ ಅಧ್ಯಕ್ಷರು ದೇಶದ ಜನಾಂಗೀಯ ಸಮಸ್ಯೆಗೆ ಶಾಶ್ವತ ಪರಿಹಾರ ಹುಡುಕಲು ನೇಮಿಸಿದ್ದ ಸರ್ವಪಕ್ಷೀಯ ಪ್ರತಿನಿಧಿ ಸಮಿತಿ ತನ್ನ ವರದಿ ಸಲ್ಲಿಸಿದೆ. ಕೇಂದ್ರ ಮತ್ತು ರಾಜ್ಯಗಳ ನಡುವೆ ಅಧಿಕಾರದ ಹಂಚಿಕೆಯನ್ನು ಪ್ರತಿಪಾದಿಸುವ 13 ನೇ ಸಂವಿಧಾನದ ತಿದ್ದುಪಡಿಯ ಪೂರ್ಣ ಜಾರಿ, ಉತ್ತರ ಮತ್ತು ಪೂರ್ವ ಪ್ರಾಂತ್ಯಗಳಲ್ಲಿ ಚುನಾವಣೆಗಳನ್ನು ನಡೆಸಬೇಕೆಂದು ಸಮಿತಿ ಹೇಳಿದೆ. ದೇಶದ ಜನಾಂಗೀಯ ಸಮಸ್ಯೆಗೆ ಶಾಶ್ವತ ಪರಿಹಾರದ ಪ್ರಸ್ತಾವಗಳಿಗೆ ಎಂದೂ ಕೊರತೆಯಿರಲಿಲ್ಲ. ಐಕ್ಯ ಶ್ರೀಲಂಕಾದಲ್ಲಿ ತಮಿಳು ಮತ್ತು ಇತರ ಪ್ರಾಂತ್ಯಗಳಿಗೆ ಗರಿಷ್ಟ ಸ್ವಾಯತ್ತತೆ, ಜನಾಂಗೀಯ ಸಮಾನತೆಗೆ ಅವಕಾಶ ಮಾಡುವುದೇ ಪರಿಹಾರ ಎಂದು ಎಲ್ಲರಿಗೂ ಗೊತ್ತು. ಪ್ರತ್ಯೇಕ ತಮಿಳು ದೇಶದ ಕನಸು ಕಾಣುತ್ತಿರುವ ಟೈಗರ್ಸ್ ಮತ್ತು ಸಿಂಹಳಿ ಅಧಿಪತ್ಯ ಇರುವ ಶ್ರೀಲಂಕಾ ಮುಂದುವರೆಸಲು ಬಯಸುವ ಆಳುವ ವರ್ಗ- ಎರಡೂ ಕನಸುಗಳು ಮತ್ತು ಸಮಸ್ಯೆಗೆ ಮಿಲಿಟರಿ ಪರಿಹಾರ ಅಸಾಧ್ಯ ಎಂಬ ಅರಿವು ಇಬ್ಬರಿಗೂ ಮೂಡುವ ವರೆಗೆ ಈ ದುರಂತ ಮುಂದುವರೆಯುತ್ತದೆ. ಈ ಅರಿವು ಮೂಡಿಸಲು ಅಂತರ್ರಾಷ್ಟ್ರೀಯ ಮತ್ತು ಆಂತರಿಕ ಪ್ರಜಾಪ್ರಭುತ್ವ ಶಕ್ತಿಗಳು ಒತ್ತಡ ಹೇರುವುದು ಒಂದೇ ದಾರಿ. ■



ಕೊಳವೆ ಮುಖಾಂತರ ಇಂಧನ ಸಾಗಣೆ

ಜಯ

ದಾಬೋಲ್-ಬೆಂಗಳೂರು ಕೊಳವೆ:

ಮಹಾರಾಷ್ಟ್ರ ರಾಜ್ಯದ ದಾಬೋಲ್‌ನಿಂದ ಬೆಂಗಳೂರಿಗೆ 730ಕಿ.ಮೀ ದೂರದ ಕೊಳವೆ ಜೋಡಣೆ ಮೂಲಕ ರೂ. 2500 ಕೋಟಿ ವೆಚ್ಚದ ಇಂಧನ ಸಾಗಣೆ ಯೋಜನೆಯನ್ನು ಭಾರತೀಯ ಅನಿಲ ಪ್ರಾಧಿಕಾರ ಸಂಸ್ಥೆಯು (ಜಿಎಐಎಲ್) ಕೈಗೆತ್ತಿಕೊಂಡಿದೆ. ಈ ಕೊಳವೆ ಮೂಲಕ ದ್ರವೀಕೃತ ನೈಸರ್ಗಿಕ ಅನಿಲವನ್ನು ಮಹಾರಾಷ್ಟ್ರ ಮತ್ತು ಕರ್ನಾಟಕ ರಾಜ್ಯಗಳ ಕೈಗಾರಿಕಾ ಪ್ರದೇಶಗಳಿಗೆ ಪೂರೈಸಬಹುದಾಗಿದೆ. ದಿನವೊಂದಕ್ಕೆ 16 ದಶಲಕ್ಷ ಘನ ಮೀಟರ್ ಅನಿಲವನ್ನು ಸರಬರಾಜು ಮಾಡುವಂತೆ ಇದನ್ನು ವಿನ್ಯಾಸಗೊಳಿಸಲಾಗಿದೆ.

ನೈಸರ್ಗಿಕ ಅನಿಲವನ್ನು ಶುದ್ಧ ಅನಿಲವೆಂದೂ ಕರೆಯಲಾಗುತ್ತದೆ. ವಿಶ್ವ ಇಂಧನ ಬಳಕೆಯಲ್ಲಿ ಇದರ ಮಿಶ್ರಣವು 1980ರಲ್ಲಿ ಶೇ. 18ರಿಂದ 2003ರ ಹೊತ್ತಿಗೆ ಶೇ. 22ರಷ್ಟು ಏರಿಕೆ ಕಂಡಿದೆ.

ಅನಿಲ ಸಾಗಣೆ:

ಕೊಳವೆಗಳ ಮೂಲಕ ದ್ರವ ಅಥವಾ ಅನಿಲ ಇಂಧನಗಳನ್ನು ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಸಾಗಣೆ ಮಾಡಬಹುದು. ಆದರೆ, ಘನ ಪದಾರ್ಥಗಳನ್ನು ಸಾಗಣೆ ಮಾಡಲು ಹೆಚ್ಚು ಒತ್ತಡದ ಗಾಳಿಯನ್ನು ಒಂದು ಬದಿಯಿಂದ ಕೊಳವೆಗೆ ಒದಗಿಸಲಾಗುತ್ತದೆ. ಇದನ್ನು 19ನೇ ಶತಮಾನದಲ್ಲಿ ವ್ಲಾದಿಮಿರ್ ಶುಕೋವ್ ಎಂಬುವನು ಮೊದಲ ಬಾರಿಗೆ ಬಳಕೆಗೆ ತಂದನು. ರೈಲು ಮಾರ್ಗದ ವೆಚ್ಚಕ್ಕಿಂತ ಕಡಿಮೆ ವೆಚ್ಚವಿರುವುದರಿಂದ ತೈಲ ಇಂಧನವನ್ನು ಕೊಳವೆ ಮೂಲಕ ಸಾಗಿಸುವ ಯೋಜನೆಗಳಿಗೆ ಇತ್ತೀಚಿಗೆ ಹೆಚ್ಚಿನ ಬೇಡಿಕೆ ಬಂದಿದೆ.

ಕೊಳವೆಗಳ ಬಳಕೆ:

ಸಾಮಾನ್ಯವಾಗಿ ಇಂತಹ ಕೊಳವೆಗಳನ್ನು ಉಕ್ಕು ಅಥವಾ ಪ್ಲಾಸ್ಟಿಕ್‌ಗಳಿಂದ ತಯಾರಿಸಲಾಗುತ್ತದೆ. ಕೊಳವೆಗಳ ವ್ಯಾಸ 4 ಇಂಚಿನಿಂದ 47 ಇಂಚಿನವರೆಗೂ ಇರುತ್ತದೆ. ದಾಬೋಲ್-ಬೆಂಗಳೂರು ಯೋಜನೆಯಲ್ಲಿ ಬಳಸುವ ಕೊಳವೆಯ ವ್ಯಾಸ 30 ಇಂಚಿನದು. ಈ ತೈಲ ಸಾಗಣೆ ಕೊಳವೆಗಳನ್ನು ಭೂಮಿಯಲ್ಲಿ 3ರಿಂದ 6 ಅಡಿ ಆಳದವರೆಗೆ ಹೂಳಲಾಗುತ್ತದೆ. ಕೊಳವೆಯುದ್ದಕ್ಕೂ ಮಧ್ಯೆ ಮಧ್ಯೆ ಪಂಪು ಸ್ಟೇಷನ್‌ಗಳನ್ನು ಅಳವಡಿಸಿದ್ದು ಕೊಳವೆಯಲ್ಲಿರುವ ತೈಲದ ವೇಗ ಘಂಟೆಗೆ ಸುಮಾರು 3.6 ಕಿ.ಮೀ ನಿಂದ 21ಕಿ.ಮೀ ಇರುತ್ತದೆ.

ಬಹು ಉತ್ಪನ್ನ ಸಾಗಣೆ ಕೊಳವೆ:

ಒಂದೇ ಕೊಳವೆ ಮೂಲಕ ಮೂರ್‍ನಾಲ್ಕು ಉತ್ಪನ್ನಗಳನ್ನು ಕೂಡ ಸಾಗಣೆ ಮಾಡಲಾಗುತ್ತದೆ. ಈ ಉತ್ಪನ್ನಗಳು ಒಂದಕ್ಕೊಂದು ಮಿಶ್ರಣಗೊಂಡು ಸಾಗಿಸಲ್ಪಟ್ಟರೂ ತೈಲ ಸ್ವೀಕರಿಸುವ ಸ್ಟೇಷನ್‌ಗಳಲ್ಲಿ ಇವುಗಳನ್ನು ಸೂಕ್ತ ವಿಧಾನದಿಂದ ಬೇರ್ಪಡಿಸಿಕೊಳ್ಳಲಾಗುತ್ತದೆ.

ತೈಲ ಟರ್ಮಿನಲ್‌ಗಳು:

ತೈಲ ತುಂಬುವ ಮತ್ತು ಹೊರತೆಗೆಯುವ ಸ್ಥಳದಲ್ಲಿ ತೈಲ ಸಂಗ್ರಹಗಾರಗಳನ್ನು ಸಹ ಸ್ಥಾಪಿಸಲಾಗಿರುತ್ತದೆ. ಇವುಗಳನ್ನು ಟರ್ಮಿನಲ್‌ಗಳು ಎನ್ನಲಾಗುತ್ತದೆ. ಚಿತ್ರದಲ್ಲಿ ತೋರಿಸಿರುವಂತೆ ತೈಲ ಅಥವಾ ಅನಿಲವನ್ನು ಮೊದಲಿಗೆ ಕೊಳವೆಯೊಳಕ್ಕೆ ತುಂಬಲಾಗುತ್ತದೆ. ಮಾರ್ಗ ಮಧ್ಯದಲ್ಲಿ ಅವಶ್ಯವಿರುವಷ್ಟು ಇಂಧನವನ್ನು ಯಾವುದಾದರೊಂದು ಸ್ಥಳದಲ್ಲಿ ಪಡೆಯಲು ಮತ್ತೊಂದು ಟರ್ಮಿನಲ್‌ನ್ನು ನಿರ್ಮಿಸಲಾಗಿರುತ್ತದೆ. ಕೊಳವೆಯಲ್ಲಿರುವ ತೈಲ ಹರಿಯುವ ವೇಗವನ್ನು ಕಾಪಾಡಲು ಪಂಪ್‌ಗಳು ಅಥವಾ ಕಂಪ್ರೆಷರ್‌ಗಳನ್ನು ಜೋಡಿಸಲಾಗಿರುತ್ತದೆ. ಪ್ರತಿ 20ರಿಂದ 30 ಮೈಲಿಗೊಂದರಂತೆ ನಿಯಂತ್ರಕ ಉಪಕರಣಗಳನ್ನು ಅಳವಡಿಸಿದ್ದು, ಯಾವುದಾದರೊಂದು ಭಾಗದಲ್ಲಿ ಕೊಳವೆಯೇನಾದರೂ ಒಡೆದುಹೋದಲ್ಲಿ ಈ ನಿಯಂತ್ರಣ ಸ್ಟೇಷನ್‌ಗಳು ಹೆಚ್ಚಿನ ತೈಲ ಸೋರದಂತೆ ತಡೆಹಿಡಿಯುತ್ತವೆ. ಪೈಪ್‌ಲೈನ್‌ಗಳ ವಿವಿಧ ಸ್ಟೇಷನ್‌ಗಳಲ್ಲಿ ಸೆನ್ಸಾರುಗಳನ್ನು ಅಳವಡಿಸಿರುವುದರಿಂದ ತೈಲ ಸೋರಿಕೆಯನ್ನು ತಕ್ಷಣವೇ ಪತ್ತೆಹಚ್ಚಬಹುದು. ಅಂತಿಮ ವಿತರಣಾ ಸ್ಟೇಷನ್‌ನಲ್ಲಿ ತೈಲವನ್ನು ವಿತರಣೆ ಮಾಡಲಾಗುವುದು.

ತೈಲ ಸಾಗಣೆ ಕೊಳವೆ ಮತ್ತು ವ್ಯವಸ್ಥೆ:

ರಾಷ್ಟ್ರೀಯ ಅನಿಲ ಸಾಗಣೆ ಕೊಳವೆ ನೀತಿ:

ಭಾರತೀಯ ಅನಿಲ ಪ್ರಾಧಿಕಾರ ಸಂಸ್ಥೆಯು ರಾಷ್ಟ್ರದಾದ್ಯಂತ ಸದ್ಯಕ್ಕೆ ಸುಮಾರು 6000ಕಿ.ಮೀ ಉದ್ದದ ಕೊಳವೆ ಮಾರ್ಗವನ್ನು ಹೊಂದಿದೆ. ಇದಲ್ಲದೆ 17,000 ಕಿ.ಮೀ ಉದ್ದದ ರಾಷ್ಟ್ರೀಯ ಕೊಳವೆ ಗ್ರಿಡ್ ನಿರ್ಮಿಸಲು ಅದು ಯೋಜಿಸಿತ್ತು. ಆದರೆ ಇತ್ತೀಚೆಗೆ ಕೇಂದ್ರ ಸರ್ಕಾರ ಪ್ರಕಟಿಸಿದ ರಾಷ್ಟ್ರೀಯ ಅನಿಲ ಸಾಗಣೆ ಕೊಳವೆ ನೀತಿ ಯು ಖಾಸಗಿ ಕಂಪನಿಗಳಿಗೆ ವರವಾಗಿದ್ದು, ರಿಲಯನ್ಸ್ ಕಂಪನಿಯು ಭಾರತೀಯ ಅನಿಲ ಪ್ರಾಧಿಕಾರ ಸಂಸ್ಥೆಯ ಯೋಜನೆಯನ್ನು ತಾನೇ ಅಪಹರಿಸಿ, ಹೆಚ್ಚಿನ ಉದ್ದದ ಕೊಳವೆ ಮಾರ್ಗ ಯೋಜನೆಗಳನ್ನು ತಾನೇ ಮುಂದಾಗಿ ಕಾರ್ಯರೂಪಕ್ಕೆ ತರುತ್ತಿದೆ. ನಮ್ಮ ರಾಜ್ಯದಲ್ಲೂ ಹಲವಾರು ತೈಲ ಸಾಗಣೆ ಕೊಳವೆ ಮಾರ್ಗದ ಯೋಜನೆಗಳನ್ನು ಅನುಷ್ಠಾನಗೊಳಿಸಲು ರಿಲಯನ್ಸ್ ಕಂಪನಿಗೆ ಅನುಮತಿ ನೀಡಬೇಕೆಂದು ಹಿಂದಿನ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿಯವರು ಕೇಂದ್ರಸರ್ಕಾರಕ್ಕೆ ಶಿಫಾರಸು ಮಾಡಿದ್ದರು!

ಮೈಸೂರು ಸಮ್ಮೇಳನದ ಸಂದರ್ಭ.........

ಪುಟ 5 ರಿಂದ

ಸಂಘಟನೆಗಳನ್ನು ವಿಸ್ತರಿಸಲು ರಾಜ್ಯಾದ್ಯಂತ ತೀವ್ರ ಹೋರಾಟಗಳನ್ನು ಬೆಳೆಸಿ ಜನಸಮೂಹಗಳ್ನು ಇದರಲ್ಲಿ ಒಳಗೊಂಡು ಅವರು ತಾವೇ ಸರಿಯಾದ ಕೆಲಸದ ಮತ್ತು ಬದುಕಿನ ಪರಿಸ್ಥಿತಿಗಳನ್ನು ನಿರ್ಮಿಸಿಕೊಳ್ಳುವಂತೆ ಮಾಡಲು ಸಾಧ್ಯವಾಗುತ್ತದೆ. ಈ ಪ್ರಕ್ರಿಯೆಯಲ್ಲಿ ಜನಸಮೂಹಗಳು ತಮಗೆ ಮಿತ್ರರು ಯಾರು, ಶತ್ರುಗಳು ಯಾರು ಎಂದು ತಾವೇ ಕಂಡುಕೊಳ್ಳುತ್ತಾರೆ. ಇದೇ ರಾಜ್ಯದ ರಾಜಕೀಯ ಚಿತ್ರವನ್ನು ಬದಲಿಸುತ್ತದೆ.

ಮೈಸೂರು ಸಮ್ಮೇಳನ ತಕ್ಷಣವೇ ತೀವ್ರ ರಾಜಕೀಯ ಮತ್ತು ಸಾಮೂಹಿಕ ಹೋರಾಟಗಳನ್ನು ನಡೆಸಿ ಕೋಮುವಾದಿ ಮತ್ತು ವಿಭಜನಕಾರೀ ಶಕ್ತಿಗಳ ಜನಗಳ ಗಮನವನ್ನು ಬೇರೆಡೆ ಸೆಳೆಯುವ ತಂತ್ರಗಳು ಸೋಲುವಂತೆ ಕನಿಷ್ಠಗೊಳ್ಳುವಂತೆ ಮಾಡಬೇಕು ಎಂದು ಕರೆ ನೀಡಿದೆ. ಕೋಮುವಾದಿಗಳು ಕರ್ನಾಟಕದಲ್ಲಿ ಅಧಿಕಾರಕ್ಕೆ ಬರದಂತೆ ತಡೆಯುವುದು ಪ್ರಥಮ ಆದ್ಯತೆ ಎಂದು ನಿರ್ಧರಿಸಿದೆ. ಹಾಗೆಯೇ ಜನದ್ರೋಹಿ ಆರ್ಥಿಕ ನೀತಿಗಳನ್ನು ಹಿಮ್ಮೆಟ್ಟಿಸುವ ಇನ್ನೊಂದು ಕರ್ತವ್ಯವನ್ನು ಗುರುತಿಸಿದೆ. ಇದನ್ನು ಯಶಸ್ವಿಯಾಗಿ ಮುನ್ನಡೆಸಲು ಜನಸಮೂಹಗಳ ಪ್ರಬಲ ಹೋರಾಟಗಳು ಅತ್ಯಗತ್ಯವೆಂದು ನಿರ್ಧರಿಸಿದೆ. ಹೀಗೆ ಅದು ಐದು ಕರ್ತವ್ಯಗಳನ್ನು ಈಡೇರಿಸಬೇಕೆಂದು ಕರೆ ನೀಡಿದೆ. ಇದನ್ನು ಅಸಂಘಟಿತ ವಲಯದ ಶ್ರಮಿಕರ ಹೋರಾಟ (ಅಂದರೆ ಮುನಿಸಿಪಾಲಿಟಿಗಳು, ಪಂಚಾಯಿತಿಗಳು, ಐಸಿಡಿಎಸ್, ಅಕ್ಷರ ದಾಸೋಹ ಇತ್ಯಾದಿಗಳಲ್ಲಿ ಸರ್ಕಾರ ದುಡಿಸಿಕೊಳ್ಳುವ ಎಲ್ಲಾ ನೌಕರರಿಗೆ ಕನಿಷ್ಠ ವೇತನ ಮತ್ತು ಸಾಮೂಹಿಕ ಭದ್ರತೆಗಾಗಿ ಹೋರಾಟ) ಜತೆಗೆ ಕೋಲಾರ ಚಿನ್ನದ ಗಣಿಗಳ ಭಾರತ್ ಗೋಲ್ಡ್ ಮೈನ್ಸ್‌ನ್ನು ಮತ್ತೆ ತೆರೆಯಲು, ಮೈಸೂರ್ ಕಿರ್ಲೋಸ್ಕರ್ ಮುಂತಾದ ಮುಚ್ಚಿದ ಕಾರ್ಖಾನೆಗಳ ಕಾರ್ಮಿಕರಿಗೆ ಪರಿಹಾರ ಒದಗಿಸಲು ಹೋರಾಟ ಮುಂತಾದವುಗಳು ಸೇರಿವೆ. ಹೀಗೆ ಕಾರ್ಮಿಕ ರಂಗದಲ್ಲಿನ ಹೋರಾಟ ಗಳೊಂದಿಗೆ ಎಲ್ಲಾ ಜನಗಳ ಹೋರಾಟಗಳನ್ನು ಅಂದರೆ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾನೂನಿನ ಸರಿಯಾದ ಜಾರಿಗೆ, ಜೀವನಾವಶ್ಯಕ ವಸ್ತುಗಳ ಬೆಲೆಗಳ ಹತೋಟಿಗೆ ರೈತಾಪಿ ಜನಗಳನ್ನು ಸಾಲ ಬಾಧೆಯಿಂದ, ಬೆಂಬಲ ಬೆಲೆಗಳ ಅಭಾವದಿಂದ ಉಳಿಸುವ, ಬಡವರಿಗೆ ಮತ್ತು ಅಗತ್ಯವುಳ್ಳವರಿಗೆ ಮನೆ ನಿವೇಶನಕ್ಕಾಗಿ, ರೇಷನ್ ಕಾರ್ಡ್‌ಗಾಗಿ ಹೋರಾಟಗಳೊಂದಿಗೆ ಬೆಸೆದು ನಾವು ಕರ್ನಾಟಕದ ಜನತೆಯ ಬದುಕು ಮತ್ತು ಹೋರಾಟಗಳಲ್ಲಿ ತಕ್ಷಣ ಮಧ್ಯಪ್ರವೇಶಿಸಬೇಕು. ಇದು ನಮಗೆ ಹೊಸ ಮಿತ್ರರನ್ನು ಪಡೆಯಲು, ಕೋಮುವಾದಿ ಶಕ್ತಿಗಳು ಬಲಗೂಡಿಸಿ ಕೊಳ್ಳುವುದನ್ನು ತಡೆಯಲು ಮತ್ತು ಎಲ್ಲಕ್ಕಿಂತಲೂ ಮಿಗಿಲಾಗಿ ರಾಜ್ಯದ ಮತ್ತು ಆ ಮೂಲಕ ದೇಶದ ರಾಜಕೀಯದಲ್ಲಿ ಸಕ್ರಿಯವಾಗಿ ಮಧ್ಯ ಪ್ರವೇಶಿಸುವ ಸಾಮರ್ಥ್ಯವನ್ನು ಪಡೆಯಲು ನೆರವಾಗುತ್ತದೆ ಹಾಗೂ ಕರ್ನಾಟಕದಲ್ಲಿ ನಮ್ಮ ದೌರ್ಬಲ್ಯವನ್ನು ತ್ವರಿತವಾಗಿ ಮೀರಿ ನಿಲ್ಲಲು ಸಾಧ್ಯವಾಗುತ್ತದೆ.

ಹಾಗೆಯೇ ದಲಿತರ ಪ್ರಶ್ನೆಗಳಿಗಾಗಿ ಪ್ರಬಲ ಚಳುವಳಿ, ಮಹಿಳೆಯರು ಮುಂತಾದ ಸಾಮಾಜಿಕ ದಮನಿತ ವಿಭಾಗಗಳ ಪ್ರಶ್ನೆಗಳನ್ನು ಇನ್ನೂ ತೀವ್ರವಾಗಿ ಕೈಗೆತ್ತಿಕೊಳ್ಳಬೇಕಿದೆ.

ನಮ್ಮ ಚಳುವಳಿ ದಕ್ಷಿಣದ ನಾಲ್ಕು ರಾಜ್ಯಗಳಲ್ಲಿ ಇತರರಿಗೆ ಹೋಲಿಸಿದರೆ ದುರ್ಬಲವಾಗಿದೆ ಎಂಬುದನ್ನು ಮರೆಯದಿರೋಣ. ನಮ್ಮ ದೌರ್ಬಲ್ಯವನ್ನು ತ್ವರಿತವಾಗಿ ನಿವಾರಿಸಿಕೊಳ್ಳುವ ಜವಾಬ್ದಾರಿಯನ್ನು ನಿರ್ವಹಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯ. ಈ ಮೂಲಕ ಕರ್ನಾಟಕವನ್ನು ಉಳಿಸಬಹುದು. ■

ನೂತನ ರಾಜ್ಯ ಸಮಿತಿಯ ಆಯ್ಕೆ

ರಾಜ್ಯಕಾರ್ಯದರ್ಶಿ ವಿಜೆಕೆ ನಾಯರ್

ಸಮ್ಮೇಳನವು 36 ಜನ ಸದಸ್ಯರುಳ್ಳ ನೂತನ ರಾಜ್ಯ ಸಮಿತಿಯನ್ನು ಆಯ್ಕೆ ಮಾಡಿತು. ರಾಜ್ಯದ ಹಿರಿಯ ಕಾರ್ಮಿಕ ಮುಖಂಡರಾದ ವಿ.ಜೆ.ಕೆ. ನಾಯರ್ ರಾಜ್ಯ ಕಾರ್ಯದರ್ಶಿಯಾಗಿ ಆಯ್ಕೆಯಾಗಿದ್ದಾರೆ.

ಕಾರ್ಯದರ್ಶಿ ಮಂಡಳಿ: ವಿ.ಜೆ.ಕೆ.ನಾಯರ್, ಜಿ.ಎನ್. ನಾಗರಾಜ್, ಕೆ.ಆರ್.ಶ್ರೀಯಾನ್, ಬಿ.ಮಾಧವ, ಜಿ.ವಿ.ಶ್ರೀರಾಮರೆಡ್ಡಿ, ನಿತ್ಯಾನಂದಸ್ವಾಮಿ, ಮಾರುತಿ ಮಾನ್ಪಡೆ, ಎಸ್.ವೈ. ಗುರುಶಾಂತ್, ಜಿ.ಸಿ.ಬಯ್ಯಾರೆಡ್ಡಿ, ಕೆ.ನೀಲಾ, ಎಸ್.ಪ್ರಸನ್ನಕುಮಾರ್ ಮತ್ತು ಕೆ.ಶಂಕರ್ ಅವರುಗಳು ನೂತನ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾಗಿ ಆಯ್ಕೆಯಾಗಿದ್ದಾರೆ.

ರಾಜ್ಯ ಸಮಿತಿ ಸದಸ್ಯರು: ವೆಂಕಟಸ್ವಾಮಿ ರೆಡ್ಡಿ, ಗಾಂಧಿನಗರ ನಾರಾಯಣ ಸ್ವಾಮಿ, ರಾಮಚಂದ್ರ ಉಚ್ಚಿಲ್, ಜೆ. ಬಾಲಕೃಷ್ಣ ಶೆಟ್ಟಿ, ಆರ್.ಶ್ರೀನಿವಾಸ್, ಕೆ.ಪ್ರಕಾಶ್, ಮೀನಾಕ್ಷಿ ಸುಂದರಂ, ಭೀಮಸಿ ಕಲಾದಗಿ, ಅಣ್ಣರಾಯ ಇಳಿಗೇರಾ, ಯು.ಬಸವರಾಜ, ಶಾಂತರಾಮ ನಾಯಕ್, ಸಯ್ಯದ್ ಮುಜೀಬ್, ಎಸ್.ವರಲಕ್ಷ್ಮಿ, ಬಾಲಕೃಷ್ಣ ಶೆಟ್ಟಿ(ಬೆಂಗಳೂರು), ಕೆ.ಎನ್ ಉಮೇಶ್, ಪುಟ್ಟಮಾದು, ಭೀಮಶೆಟ್ಟಿ ಎಂಪಳ್ಳಿ, ಅರ್ಜುನನ್, ಡಾ. ದುರ್ಗಾಪ್ರಸಾದ್, ಗಂಗುಲಪ್ಪ, ಕೆ.ಎಸ್.ಲಕ್ಷ್ಮಿ, ವಸಂತ ಆಚಾರಿ ಮತ್ತಿತರರು.




ಗೆಲುವು ನಮ್ಮದು ಇಂದಿಗು, ಎಂದೆಂದಿಗೂ...

ಸಮಾರೋಪದ ಹಾಡಿಗೆ ಧ್ವನಿಗೂಡಿಸಿದ ನಾಯಕರು

ಎರಡು ನಾಟಕಗಳು

ರಿಂಗಿನಾಟ ಮತ್ತು ಪಾಪು ಬಾಪು ಆದ ಕತೆ



ರಿಂಗಿನಾಟ ನಾಟಕದ ದೃಶ್ಯ

"ಹೆತ್ತ ಮಾತ್ರಕ್ಕೆ ಯಾರೂ ತಾಯಿ ಆಗಲಾರರು; ಪ್ರೀತಿ ವಾತ್ಸಲ್ಯದಿಂದ ಸಾಕಿ ಸಲಹಿದವಳೇ ನಿಜವಾದ ತಾಯಿ" ಎಂದು ರಿಂಗುಣಿಸುವ ಮಾತು ಪ್ರೇಕ್ಷಕರೆಲ್ಲರ ಹೃದಯವನ್ನು ಆರ್ದ್ರಗೊಳಿಸುತ್ತದೆ. ಕಣ್ಣೀರ ಪಸೆ ತುಳುಕಿಸುತ್ತದೆ. ತಾಯಿಯಿಲ್ಲದ ಮಕ್ಕಳಗೆ ಹೊಸ ತಾಯಿ ಭರವಸೆಯನ್ನು ನೀಡಿದರೆ, ಮಕ್ಕಳಿಲ್ಲದ ತಾಯಂದಿರಿಗೆ ಹೊಸ ಮಕ್ಕಳನ್ನು ನೀಡುವ ಆಶಾಕಿರಣವಾಗಿ ಮೂಡಿ ಬಂದ ನಾಟಕ 'ರಿಂಗಿನಾಟ'.

ನಿಜವಾದ ತಾಯಿಯನ್ನು ಗುರುತಿಸುವ ಪ್ರಸಂಗ ಕೂಡ ಅಷ್ಟೇ ನಾಜೂಕಿನದು. ಹೆತ್ತ ತಾಯಿ ಮಗುವನ್ನು ತಟ್ಟನೆ ಕಸಿದುಕೊಂಡರೆ, ಕೈ ತುತ್ತು ನೀಡಿದ ತಾಯಿ ಮೌನವಾಗಿ ನಿಲ್ಲುತ್ತಾಳೆ. 'ಯಾವ ತಾಯಿ ತಾನೆ ತನ್ನ ಮಕ್ಕಳಿಗೆ ನೋವು ಕೊಟ್ಟಾಳು ?" ಎಂಬ ಮಾತು ನಿಜ ತಾಯಿಯನ್ನು ಗುರುತಿಸುತ್ತದೆ. ಮಾತೃ ಹೃದಯಕ್ಕೆ ಮಗು ಸೇರುತ್ತದೆ. ಅದಕ್ಕೆ ಅಲ್ಲವೆ ಕರ್ಣ ಕುಂತಿಯನ್ನು ಹಿಂಬಾಲಿಸದೆ ರಾಧೇಯನಾಗೇ ಉಳಿದದ್ದು!

ಬೊಂಬೆ ಮಾರುವ ನಿರೂಪಕನ ಬೊಂಬೆಗಳು ಬರಬರುತ್ತ ಜೀವ ತಳೆಯುತ್ತವೆ. ರಂಗದ ಮೇಲೆ ಬೊಂಬೆಗಳಿಗೆ ಜೀವ ತುಂಬಿದವರು ಮಕ್ಕಳೇ ಎನ್ನುವುದು ಇಲ್ಲಿಯ ವಿಶೇಷ. ದೊಡ್ಡವರ ನಾಟಕವನ್ನೇ ಮಕ್ಕಳು ಆಡಿದರೆ ಅದು ಮಕ್ಕಳ ನಾಟಕ ಎನ್ನುವ ಕಾಲ ಒಂದಿತ್ತು. ಆದರೆ ಗಂಭೀರ ಕಥಾವಸ್ತುವನ್ನು ಮಕ್ಕಳ ಭಾಷೆಗೆ ಇಳಿದು, ಮನರಂಜನೆಯನ್ನು ನೀಡುತ್ತಾ ಮಕ್ಕಳ ಮನ ತಟ್ಟುವುದೇ ಮಕ್ಕಳ ನಾಟಕ ಎಂಬ ಅಂಶವನ್ನು 'ರಿಂಗಿನಾಟ' ನಿರೂಪಿಸಿತು.

ಬದುಕಿನ ಅನಿವಾರ್ಯತೆಯಲ್ಲಿ ವಿವಾಹವಾದ ಮುದುಕ ಗಂಡನಿಂದ ಬಿಡುಗಡೆಗೊಳಿಸುವ, ಮನ ಸ್ವೀಕರಿಸಿದವನೊಂದಿಗೆ ಬದುಕು ಕೊಡುವ ಮುಂತಾದ ಹೊಸ ವಿಚಾರಗಳ ಛಾಪನ್ನು ಎಳೆಯ ಮಕ್ಕಳ ಮನಸ್ಸಿನಲ್ಲಿ ಬಿತ್ತಿ ಬೆಳೆಯುವ ಕಾರ್ಯವನ್ನು ಸದ್ದಿಲ್ಲದೆ ಮಾಡಿತು.

ತಾಯಿ ವ್ಯಾಖ್ಯಾನವನ್ನು ಬರೆಯುವುದರಲ್ಲಿ ಯಶಸ್ವಿಯಾದವಳು ಶೀತಲ್‌ಭಟ್. ಬೊಂಬೆ ಮಾರುವ ಬೊಂಬೆ ರಾಮನ ಪಾತ್ರದಲ್ಲಿ ದಾಮೋದರಾ ನಾಯ್ಕ ಅವರದು ನಾಟಕದೆಡೆಗೆ ಆಸಕ್ತಿ ಕೆರಳಿಸುವ ಸಹಜ ಅಭಿನಯ. ಸೈನಿಕರಾಗಿ ಆಗಾಗ ಸುಳಿಯುವ ಅನಂತ ನಾಯ್ಕ, ನಹುಷ ಕೆ. ತಮ್ಮ ಆಂಗಿಕ ಅಭಿನಯದಿಂದಲೇ ಸಭಿಕರನ್ನು ನಗಿಸುವಂತಹ ಸಹಜ ನಟರು.

ಪಾಪು ಬಾಪು ಆದ ಕತೆ: 'ಪಾಪು ಬಾಪು ಆದ ಕಥೆ' ನಾಟಕ ಗಾಂಧೀಜಿಯವರನ್ನು ಮಕ್ಕಳ ಮನಸ್ಸಿನಲ್ಲಿ ಸದಾ ಹಸಿರಾಗಿಡುವುದರಲ್ಲಿ ಸಫಲವಾಯಿತು. ನಾಟಕದ ತುಂಬೆಲ್ಲ ಗಾಂಧಿ ಮಕ್ಕಳ ಕೈಗೆಟುಕದ ಮಹಾತ್ಮ ಆಗಿ ಕಾಣದೆ ಗಾಂಧಿ ಅಜ್ಜನನ್ನು ಸ್ಪರ್ಶಿಸಬಹುದಾದಷ್ಟು, ಗಾಂಧೀ ಅಜ್ಜನ ಜೊತೆ ಕುಣಿಯಬಹುದಾದಷ್ಟು ಸಹಜವಾಗಿ ಮೂಡಿಬಂತು.

"ನಾನು ಪುಣ್ಯವಂತನಾದರೆ ನಾನು ಹೊರ ಬಂದಾಗ ಮಳೆ ಬರಬೇಕು" ಎನ್ನುತ್ತ ಹೊರಬರುವ ಗಾಂಧಿ ಪಾಪು ಮಳೆ ನಿಲ್ಲದಾದಾಗ ಮಳೆಯಲ್ಲಿ ತೊಯ್ಯುತ್ತ ನಿಂತ ಅಸ್ಪೃಶ್ಯನನ್ನು ಬಿಗಿದಪ್ಪುವುದು, ಬಾಪುವಾಗುವಾಗಿನ ಪ್ರಮುಖ ತಿರುವಾಗಿ ಗೋಚರಿಸಿತು. 1936 ರ ಸುಮಾರು ಬಿಹಾರದಲ್ಲಿ ಪ್ರಚಂಡ ಭೂಕಂಪವಾದಾಗ "ಈ ಭಯಂಕರ ದೈವೀ ಪ್ರಕೋಪ ಸವರ್ಣ ಹಿಂದುಗಳು ಪಾಲಿಸುತ್ತಿದ್ದ ಅಸ್ಪೃಶ್ಯತೆಯ ಶಾಪಕ್ಕೆ ಪ್ರಾಯಶ್ಚಿತವಾಗಿ ದೇವರು ಇತ್ತ ನ್ಯಾಯ ದಂಡನೆ" ಎಂದು ಹೇಳಿದ ಗಾಂಧಿಯ ಮನಸ್ಸಿನಲ್ಲಿ ಮೊಳೆತ ಬೀಜ ಬಹುಶಃ ಇಲ್ಲಿಯದೇ ಇರಬೇಕು

ನಾನು ಒಬ್ಬ ಹಿಂದೂವಾಗಿದ್ದೇನೆ. ಆದ್ದರಿಂದ ಒಬ್ಬ ಮುಸ್ಲೀಮನೂ, ಒಬ್ಬ ಕ್ರೈಸ್ತನೂ ಆಗಬಲ್ಲೇ ಎನ್ನುವ ಗಾಂಧಿಯ ಪ್ರಾರ್ಥನಾ ಸಭೆ ಇಂದಿನ ಕೋಮು ದಳ್ಳುರಿಯ ಸಂದರ್ಭದಲ್ಲಿ ಭಾರತದ ಗಲ್ಲಿಗಲ್ಲಿಯಲ್ಲಿ ನಡೆಯುವ ಅವಶ್ಯಕತೆ ಇದೆ. ಅಂದು ಒಬ್ಬ ಗೋಡ್ಸೆ ಒಂದು ದಿನ ಗಾಂಧಿಯನ್ನು ಕೊಂದರೆ ಇಂದು ಪ್ರತಿದಿನವೂ ಗಾಂಧಿಯನ್ನು ಕೊಲ್ಲಲಾಗುತ್ತಿದೆ. ಗಾಂಧಿ ಸಂತತಿ ನಾಶವಾಗುತ್ತಿದ್ದರೆ ಗೋಡ್ಸೆ ಸಂತತಿ ಬೆಳೆಯುತ್ತಿದೆ. ಈ ಮತಾಂಧತೆ,ಪ್ರತೀಕಾರ ವಿರೋಧಿ ಭಾವನೆಯನ್ನು ಆಟದ ಮೂಲಕ ಕಿರಿಯರಿಗೆ ತಿಳಿಸಿದರೆ ಹಿರಿಯರಿಗೆ ಪಾಠವಾಗಿ ಗಾಂಧಿಯನ್ನು ಎಲ್ಲರಲ್ಲಿ ಜೀವಂತವಾಗಿರಿಸಿತು.

ಸುಂದರ ಚಿತ್ರದ ಮೂಲಕ ನಾಟಕಕ್ಕೆ ಚಾಲನೆ ನೀಡುವ ತಂತ್ರಗಾರಿಕೆ, ರಾಘವಾಂಕನ ಹರಿಶ್ಚಂದ್ರ ಕಾವ್ಯದ ಮನ ಕರಗಿಸುವ ವನಿತೆಯಳಲು, ಚಲಿಸುವ ರೈಲು, ಸೇತುವೆ ನಿರ್ಮಾಣ ಇವೆಲ್ಲವೂ ಪ್ರೇಕ್ಷಕರ ಮನಸ್ಸನ್ನು ಕೊನೆಯ ತನಕ ಹಿಡಿದಿಡುವಲ್ಲಿ ಸಫಲವಾದವು. ಪಾಪು ಗಾಂಧಿಯಾಗಿ ದಾಮೋದರ ನಾಯ್ಕ, ಪ್ರಾರ್ಥನಾ ಸಭೆಗೆ ಆಗಮಿಸಿದ ಗಾಂಧಿಯನ್ನು ಪಕ್ಕಾ ಗಾಂಧಿಯನ್ನಾಗಿಸಿದ ನಹುಷಾ.ಕೆ ಅಭಿಜಾತ ನಟರು ಹಾಗೂ ಕಲಾಕಾರರು.



ಪಾಪು ಬಾಪು ಆದ ಕತೆ ನಾಟಕದ ದೃಶ್ಯ

ಕೆಲವೊಂದು ಕಡೆ ನಟನೆಯಲ್ಲಿ ಅತಿರೇಕತೆ ಕಂಡರೂ ರಾಘವೇಂದ್ರ ಆಚಾರ್, ಸ್ನೇಹಾ ಚಾಂದ್ರಾಣಿ, ಮಂಜು ಮರದಕೇರಾ, ಮಹೇಶ ಆಚಾರಿ, ಬೇಬಿ ತುಂಬಳ್ಳಿ, ಮಂಜು ಚಾಂದ್ರಾಣಿ, ಆನಂದ ಹಿರೇಬೈಲ, ಮುಗ್ಧ ಮುಖದ ಶ್ರವಣಕುಮಾರ್‌ಭಟ್ ಉತ್ತಮವಾಗಿ ಅಭಿನಯಿಸಿದ್ದಾರೆ. ಚಂದ್ರು ಉಡುಪರ ಪ್ರಸಾದನ, ಶ್ರೀಪಾದಭಟ್ಟರ ಸಂಗೀತ ನಾಟಕದ ಯಶಸ್ಸಿಗೆ ಮೆರಗು ನೀಡಿದವು.

ಬರ್ಟೋಲ್ಡ್ ಬ್ರೆಖ್ಟನ ಕಕೇಷಿಯನ್ ಚಾಕ್-ಸರ್ಕಲ್ ಆಧಾರಿತ 'ರಿಂಗಿನಾಟ' ಹಾಗೂ ಬೊಳುವಾರ, ಮಹಮ್ಮದ್ ಕುಂಞಯವರ 'ಪಾಪು ಗಾಂಧಿ ಗಾಂಧಿ ಬಾಪು ಆದ ಕತೆ' ಆಧಾರಿತ 'ಪಾಪು ಬಾಪು ಆದ ಕತೆ' ನಾಟಕವನ್ನು ಮಕ್ಕಳ ರಂಗರೂಪಕ್ಕೆ ಅಳವಡಿಸಿ ನಿರ್ದೇಶಿಸಿದವರು ಶ್ರೀ ಕಿರಣ್‌ಭಟ್ ಹಾಗೂ ಡಾ: ಶ್ರೀಪಾದಭಟ್. ಸರಳವಾದ ಸಂಭಾಷಣೆ, ಸಹಜವಾದ ಅಭಿನಯದ ಮೂಲಕ ವಾಸ್ತವದ ಸ್ಪರ್ಶ ನೀಡಿ ಮೆರೆಸಿದ್ದು ರಂಗದ ಗುಂಗು ಹಿಡಿದ ಅವರು ತಾವು ಪ್ರಬುದ್ಧ ನಿರ್ದೇಶಕರು ಎಂಬುದನ್ನು ಇಲ್ಲಿ ಸಾಬೀತುಪಡಿಸಿದ್ದಾರೆ.

ಹೆರದಿದ್ದರೂ ಹೊರುವ ಮಾತೃ ಹೃದಯವನ್ನೂ ತಾನೂ ಗಾಂಧಿ ಆಗಬಲ್ಲೇ ಎನ್ನುವ ಆತ್ಮವಿಶ್ವಾಸವನ್ನೂ, ಅದಮ್ಯ ಬಯಕೆಯನ್ನು ಮಕ್ಕಳಲ್ಲಿ ಹುಟ್ಟಿಸುವಲ್ಲಿ ಫಲಪ್ರದವಾದ ಚಿಂತನ ಮಕ್ಕಳ ನಾಟಕ ರೆಪರ್ಟರಿಯ ಈ ಎರಡೂ ನಾಟಕಗಳು ಕರ್ನಾಟಕ ನಾಟಕ ಅಕಾಡೆಮಿಯ ಗೌರವ ಪುರಸ್ಕೃತ ಖ್ಯಾತ ರಂಗಕರ್ಮಿ ದಿವಂಗತ ಪುತ್ತಣ್ಣನವರ ಸ್ಮರಣಾರ್ಥ ಶಿರಸಿಯಲ್ಲಿ ನಡೆಯಿತು. 'ಚಿಂತನ' ಉತ್ತರ ಕನ್ನಡ, ಚಿಂತನ ರಂಗ ಅಧ್ಯಯನ ಕೇಂದ್ರದ ಮಕ್ಕಳ ನಾಟಕ ರೇಪರ್ಟರಿಯ ಈ ನಟನೆ ನಿರಂತರವಾಗಿಲಿ, ತನ್ನ ಪಯಣದುದ್ದಕ್ಕೂ ಅನೇಕ ನಾಟಕವನ್ನೂ ರಂಗಾಸಕ್ತರನ್ನು ರೂಪಿಸಲಿ ಎಂದು ಆಶಿಸೋಣ.

ಮಾಧವಿ ಭಂಡಾರಿ, ಕೆರೆಕೋಣ



ಕವನ: ಅಯೋಧ್ಯೆ

ಮಸೀದಿ ಮಂದಿರದ
ಗದ್ದಲಲ್ಲಿ
ಶಾಂತಿ ನೆಮ್ಮದಿಗಳ
ಶೋಧದಲ್ಲಿ
ಅಯೋಧ್ಯೆಯನ್ನು
ಬಿಟ್ಟು ನಡೆದರು
ರಾಮ-ರಹೀಮರು!

ಮಂದಿರವೋ
ಮಸೀದಿಯೋ
ಅಂತೂ ಶಿಥಿಲಗೊಂಡಿತು
ಕಟ್ಟಡವು! ಬಲೆಯ
ನೇಯ್ದಿತು ಜೇಡವು!

ಧರ್ಮಾಂಧರ
ಕದನದಲ್ಲಿ
ಬೀಜ ಮೊಳೆಯಲಿಲ್ಲ!
ಹೂ ಅರಳಲಿಲ್ಲ
ಮತ್ತೆಂದೂ,
ರಾಮ-ರಹೀಮರು
ಅಯೋಧ್ಯೆಗೆ ಮರಳಲಿಲ್ಲ

-ವೀರೇಂದ್ರ ರಾವಿಹಾಳ್,
ತೆಕ್ಕಲಕೋಟೆ

JANASHAKTHI KANNADA VARA PATRIKE : Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12. 18th Cross, S.R.Nagar, BANGALORE - 560 027 Karnataka (State) and Published at BANGALORE No 12. 18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor : S.Y.GURUSHANTH